ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 20 ಸೋಮವಾರ 2022

ಸಂಪುಟ: 43 | ಸಂಚಿಕೆ: 65 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು



ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟನೆ ಹಾಗೂ ಕೃತಿಗಳ ಬಿಡುಗಡೆ



20 ಜೂನ್ 2022

ಸೋಮವಾರ * ಸಂಜೆ 7.00

ಶ್ರೀ ಸುತ್ತೂರು ಮಠ, ಮೈಸೂರು

ದಿವ್ಯ ಸಾನ್ನಿಧ್ಯ

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು ಶ್ರೀಕ್ಷೇತ್ರ

ಉದ್ಘಾಟನೆ ಮತ್ತು ಕೃತಿಗಳ ಬಿಡುಗಡೆ

ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು

ಭಾರತದ ಪ್ರಧಾನ ಮಂತ್ರಿಗಳು



ದಿವ್ಯ ಸಾನ್ನಿಧ್ಯ

ನಿ.ಪ್ರ.ಸ್ವ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು



ದಿವ್ಯ ಸಾನ್ನಿಧ್ಯ

ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

ಜ್ಞಾನಯೋಗಾಶ್ರಮ, ವಿಜಯಪುರ




ಅಧ್ಯಕ್ಷತೆ

ಘನತೆವೆತ್ತ ಶ್ರೀ ಥಾವರ್ ಚಂದ್ ಗೆಹ್ಲೋಟ್

ಕರ್ನಾಟಕದ ರಾಜ್ಯಪಾಲರು

ಗೌರವ ಅತಿಥಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ

ಮುಖ್ಯಮಂತ್ರಿಗಳು


ಕರ್ನಾಟಕ ಸರ್ಕಾರ



ಶ್ರೀ ಪ್ರಲ್ಹಾದ್ ವಿ. ಜೋಷಿ

ಕೇಂದ್ರದ ಸಂಸದೀಯ ವ್ಯವಹಾರಗಳು


ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವರು






ಶ್ರೀ ಪ್ರತಾಪ ಸಿಂಹ

ಸಂಸದರು



ಶ್ರೀ ಎಸ್.ಟಿ. ಸೋಮಶೇಖರ್

ಸಹಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು



ಶ್ರೀ ಎಸ್.ಎ. ರಾಮದಾಸ್

ಶಾಸಕರು



LIVE STREAMING ಕಾರ್ಯಕ್ರಮದ ನೇರಪ್ರಸಾರವನ್ನು ಈ ಕೆಳಗಿನ ಲಿಂಕ್‌ನಲ್ಲಿ ವೀಕ್ಷಿಸಬಹುದು.

https://www.youtube.com/c/JSSMahavidyapeethaonline

https://www.facebook.com/JSSMVP

www.jssonline.org

www.sutturmath.org

ಮೈಸೂರು ಮಿತ್ರ ಸೋಮವಾರ 20 ಜೂನ್ 2022

ಮೋದಿ ಮೈಸೂರು ಆಗಮನ ವಿರುದ್ಧ ವಿವಿಧ ಸಂಘಟನೆಗಳ ಪ್ರತಿಭಟನೆ

ಮೈಸೂರು, ಜೂ.19(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸೇರಿದಂತೆ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಮೈಸೂರಿಗೆ ಆಗಮಿಸುತ್ತಿರುವುದನ್ನು ಖಂಡಿಸಿ, ಗೋ ಬ್ಯಾಕ್ ಮೋದಿ ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಿದ ಎಡ ಪಕ್ಷಗಳು, ರೈತ, ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.




ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿರುವ ಗಾಂಧೀಜಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರು 'ಗೋ ಬ್ಯಾಕ್ ಮೋದಿ' ಎಂದು ಘೋಷಣೆ ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಮೋದಿ ಅವರು ಈ ಹಿಂದೆ ಮೈಸೂರಿಗೆ ಬಂದು ಭಾಷಣ ಮಾಡುವ ವೇಳೆ ಸಾಂಸ್ಕೃತಿಕ ನಗರಿ ಮೈಸೂರನ್ನು ಪ್ಯಾರಿಸ್ ಮಾದರಿಯಲ್ಲಿ ಅಭಿವೃದ್ಧಿ ಮಾಡುವುದಾಗಿ ಭರವಸೆ ನೀಡಿದ್ದರು. ಆ ಹೇಳಿಕೆ ಮೇಲೆ ವಿಶ್ವಾಸ ಇಟ್ಟ ಮೈಸೂರಿನ ಜನತೆ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಿದ್ದರು. ಆದರೆ ಮೋದಿ ಅವರ ನೇತೃತ್ವದ ಸರ್ಕಾರದಲ್ಲಿ 8 ಬಜೆಟ್ ಮಂಡನೆಯಾಗಿದೆ. ಮೈಸೂರಿಗೆ ಏನು ಕೊಡುಗೆ ನೀಡಿಲ್ಲ. ನೀಡಿದ್ದ ಭರವಸೆ ಈಡೇರಿಸುವ ಬಗ್ಗೆ ಯಾವುದೇ ಯೋಜನೆ ಪ್ರಕಟಿಸಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಸೇನಾ ನೇಮಕಾತಿ ಸಂಬಂಧ ಅಗ್ನಿಪಥ ಯೋಜನೆ ಕೈಬಿಡಬೇಕು. ಕಾರ್ಮಿಕ ವಿರೋಧಿಯೂ ಮಾಲೀಕರ ಪರವಾದ ನಾಲ್ಕು ಸಂಹಿತೆಗಳನ್ನು ಹಿಂಪಡೆಯಬೇಕು. ವಿದ್ಯುತ್ ಖಾಸಗೀಕರಣ ಕೈಬಿಡಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಬೇಕು. ಇಂಧನ ಮತ್ತು ಅಡುಗೆ ಅನಿಲದ ಬೆಲೆ ಇಳಿಸಬೇಕು. ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ–ಪಂಗಡದ ಅನುದಾನ ಹೆಚ್ಚಳ ಮಾಡಬೇಕು. ನೂತನ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಕೆಲಕಾಲ ಪ್ರತಿಭಟನೆ ನಡೆಸಿದ ಬಳಿಕ ಸುಮಾರು 20ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿದರು. ಬಳಿಕ ಸಿಎಆರ್ ಮೈದಾನಕ್ಕೆ ಕರೆದೊಯ್ದು ಎಲ್ಲರ ವಿಳಾಸ ಪಡೆದು ಬಿಡುಗಡೆ ಮಾಡಿದರು.

ಸ್ವರಾಜ್ ಇಂಡಿಯಾ ಪಕ್ಷದ ಮುಖಂಡ ಉಗ್ರನರಸಿಂಹೇಗೌಡ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ರವಿ, ಸದಸ್ಯೆ ಸಂಧ್ಯಾ, ಸಿಪಿಐ(ಎಂಎಲ್) ಜಿಲ್ಲಾ ಕಾರ್ಯದರ್ಶಿ ಚೌಡಳ್ಳಿ ಜವರಯ್ಯ, ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್, ಜಯರಾಂ, ಮಹದೇವಯ್ಯ ಇನ್ನಿತರರು ಉಪಸ್ಥಿತರಿದ್ದರು.

ಪಂಥೀಯ ತಿಳುವಳಿಕೆಯಿಂದ ಆಚೆಗೂ ಆಲೋಚನಾ ಕ್ರಮ ಇರಲಿ

●ಪ್ರೊ. ಕೃಷ್ಣೇಗೌಡ ಪ್ರತಿಪಾದನೆ ●ಧೀರ ಸನ್ಯಾಸಿ ಸೇರಿ 4 ಕೃತಿಗಳ ಬಿಡುಗಡೆ



ಮೈಸೂರಿನ ಸರಸ್ವತಿಪುರಂನ ರೋಟರಿ ವೆಸ್ಟ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಭಾನುವಾರ ಧೀರ ಸನ್ಯಾಸಿ ಸೇರಿ 4 ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಜೂ.19(ಪಿಎಂ)–ಪ್ರಸ್ತುತ ಎಡ ಮತ್ತು ಬಲಪಂಥೀಯ ಚರ್ಚೆ ಹೆಚ್ಚಾಗಿದ್ದು, ಈ ಪಂಥೀಯ ತಿಳುವಳಿಕೆಯಿಂದ ಆಚೆಗೂ ಆಲೋಚನಾ ಕ್ರಮ ಇರಬೇಕು ಎಂದು ನಿವೃತ್ತ ಪ್ರಾಂಶುಪಾಲ ಹಾಗೂ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಪ್ರತಿಪಾದಿಸಿದರು.

ಮೈಸೂರಿನ ಸರಸ್ವತಿಪುರಂನ ರೋಟರಿ ವೆಸ್ಟ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಸಂವಹನ ಪ್ರಕಾಶನ ಮತ್ತು ಉಷಾ ಸಾಹಿತ್ಯ ಮಾಲೆ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಚಂದ್ರಶೇಖರಯ್ಯ ಅವರ 'ಧೀರ ಸನ್ಯಾಸಿ (ತರಳಬಾಳು ಶ್ರೀ ಶಿವಕುಮಾರ ಸ್ವಾಮೀಜಿಯವರ ಜೀವನ ಚಿತ್ರ)' ಕೃತಿ ಬಿಡುಗಡೆಗೊಳಿಸಿ, ಮಾತನಾಡಿದರು. ನಮ್ಮ ಆಲೋಚನಾ ಕ್ರಮಗಳನ್ನು ಮೀರಿ ಆಚೆ ಹೋಗುವುದನ್ನು ಶಿಕ್ಷಣ ಕಲಿಸಬೇಕು. ನಮ್ಮ ಜಗತ್ತಿನ ಎಲ್ಲಾ ಅನ್ವೇಷಣೆಗಳೂ ಆವರೆಗೆ ನಂಬಿದ್ದ ಜ್ಞಾನದ ಚೌಕಟ್ಟಿನಿಂದ ಆಚೆ ಹೋದ ಕಾರಣಕ್ಕೆ ಅನಾವರಣಗೊಂಡಿವೆ ಎಂದರು.

ವಿಶ್ವವಿದ್ಯಾನಿಲಯದ ಓದು ವಿದ್ಯಾವಂತರನ್ನು ಪೂರ್ವಾಗ್ರಹ ಪೀಡಿತರಾನ್ನಾಗಿ ಮಾಡುತ್ತಿದೆ. ವಿದ್ಯಾವಂತರು ಇದರಿಂದ ಮುಕ್ತವಾಗಬೇಕು. ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು ತಾವು ಓದಿರುವುದೇ ಪರಮ ಪ್ರಮಾಣ ಎಂದುಕೊಂಡಿದ್ದಾರೆ. ಮನುಷ್ಯನ ಯಾವ ಜ್ಞಾನವೂ ಪರಿಪೂರ್ಣವಲ್ಲ. ಪರಿಪೂರ್ಣತೆ ಎನ್ನುವುದು ನಮಗೆ ಸಿಗುವುದೇ ಇಲ್ಲ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಮಾತನಾಡಿ, ಸಮಾಜದಲ್ಲಿ ಅಸಂಖ್ಯಾತ ಮಠಗಳಿವೆ. ಅವುಗಳಲ್ಲಿ ಜನತೆಯ ವಿಶ್ವಾಸಕ್ಕೆ ಭಾಜನವಾದ ಮಠಗಳ ಪೈಕಿ ತರಳಬಾಳು ಮಠ ಕೂಡ ಒಂದು ಎಂದರು. ಇದಕ್ಕೂ ಮುನ್ನ ಡಾ.ಹೆಚ್.ಎಸ್.ರುದ್ರೇಶ್ ಅವರ 'ತಪಸ್ವಿನಿ (ಊರ್ಮಿಳೆ ನಾಟಕ)', ಕಣ್ಣಾಮುಚ್ಚೆ ಕಾಡೇಗೂಡೆ (ಕಥಾಸಂಕಲನ) ಮತ್ತು ಭಾವಬಿಂಬ (ಕವನ ಸಂಕಲನ) ಎಂಬ ಮೂರು ಕೃತಿಗಳನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟನಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಬಿಡುಗಡೆ ಮಾಡಿದರು. ಹಿರಿಯ ರಂಗಕರ್ಮಿ ನಾ.ನಾಗಚಂದ್ರ, ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕ ಡಾ. ಮಹೇಂದ್ರಮೂರ್ತಿ ದೇವನೂರು, ಲೇಖಕರಾದ ಡಾ.ಚಂದ್ರಶೇಖರಯ್ಯ, ಡಾ.ಹೆಚ್.ಎಸ್.ರುದ್ರೇಶ್, ಸಂವಹನ ಪ್ರಕಾಶಕ ಡಿ.ಎನ್.ಲೋಕಪ್ಪ ಮತ್ತಿತರರು ಹಾಜರಿದ್ದರು.



ಮೈಸೂರಿನ ಎನ್.ಆರ್.ಮೊಹಲ್ಲಾದ 15ನೇ ವಾರ್ಡ್‌ನಲ್ಲಿ ಕುರುಬರ ಬೀದಿ ಶ್ರೀ ಬೀರೇಶ್ವರ ಶ್ರೀರಾಮಮಂದಿರ ಟ್ರಸ್ಟ್‌ನ ಸಮುದಾಯ ಭವನದ ಎರಡನೇ ಮಹಡಿ ತಾರಸಿಗೆ ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್‌ಸೇಠ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಮಾನ್ಯತೆ ನವೀಕರಿಸದ ಶಾಲೆಗಳ ನೋಂದಣಿ ರದ್ದು

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಎಚ್ಚರಿಕೆ

ಮೈಸೂರು, ಜೂ.19–ಮಾನ್ಯತೆ ಅವಧಿಯು ಮುಗಿದಿರುವ ಶಾಲೆಗಳ ಆಡಳಿತ ಮಂಡಳಿಗಳು ತಮ್ಮ ಶಾಲೆಗಳ ಮಾನ್ಯತೆ ನವೀಕರಿಸಿಕೊಳ್ಳಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂ.27 ಅಂತಿಮ ದಿನಾಂಕವಾಗಿದೆ. ಒಂದು ವೇಳೆ ನಿಗದಿತ ಕಾಲಮಿತಿಯೊಳಗೆ ಮಾನ್ಯತೆ ನವೀಕರಿಸಿಕೊಳ್ಳಲು ಅರ್ಜಿ ಸಲ್ಲಿಸದ ಶಾಲೆಗಳ ನೋಂದಣಿಯನ್ನು ರದ್ದುಪಡಿಸಿ ಅಂತಹ ಶಾಲೆಗಳನ್ನು ಅನಧಿಕೃತ ಶಾಲೆಗಳೆಂದು ಘೋಷಿಸಿ, ಮುಂದಿನ ಕ್ರಮ ವಹಿಸಲಾಗುವುದು ಎಂದು ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ರಾಮಯ್ಯ



ಮೈಸೂರು,ಜೂ.19–ಕೆ.ಆರ್.ಆಸ್ಪತ್ರೆ ನಿವೃತ್ತ ಡಿ–ಗ್ರೂಪ್ ನೌಕರರೂ ಆದ ಮೈಸೂರು ಜೆ.ಪಿ.ನಗರ 2ನೇ ಹಂತದಲ್ಲಿರುವ ನವೋದಯ ಕಾಲೋನಿ ನಿವಾಸಿ ರಾಮಯ್ಯ(85) ಅವರು ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ವೆಂಕಟಮ್ಮ, ಪುತ್ರ ದಲಿತ ಅಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಆರ್.ದಾಸು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11.30ಕ್ಕೆ ಸ್ಟರ್ಲಿಂಗ್ ಥಿಯೇಟರ್ ಬಳಿ ಇರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಜಿ ಮೇಯರ್ ನಾರಾಯಣ, ದಲಿತ ಅಭಿವೃದ್ಧಿ ಸಂಘ, ಜನ ಚೈತನ್ಯ ಫೌಂಡೇಷನ್, ರಮಾಬಾಯಿ ಅಂಬೇಡ್ಕರ್ ಮಹಿಳಾ ಸ್ವ–ಸಹಾಯ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ವಿಶ್ವ ಮಾನವರಾಗಿ ಹುಟ್ಟಿ ವಿಶ್ವ ಮಾನವರಾಗೇ ಬೆಳೆದ ಪ್ರೊ.ರಾಮದಾಸ್

ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ ಅಭಿಮತ

ಮೈಸೂರು, ಜೂ.19(ಆರ್‌ಕೆಬಿ)– ಅಂತರ ಜಾತೀಯ ವಿವಾಹ ಆಗುವವರಿಗೆ ಸಾಮಾಜಿಕ ಹಾಗೂ ಕಾನೂನಾತ್ಮಕ ರಕ್ಷಣೆ ನೀಡಲೆಂದೇ ವಿಚಾರವಾದಿ ಪ್ರೊ.ಕೆ.ರಾಮದಾಸ್ ಅವರು ಮಾನವ ಮಂಟಪ ನಿರ್ಮಿಸಿದರು. ಅವರ ಮನೆ ಅಂತರ ಜಾತೀಯ ವಿವಾಹಗಳ ಮ್ಯಾರೇಜ್ ಬ್ಯೂರೋ ರೀತಿ ಆಗಿತ್ತು. ಪ್ರತಿನಿತ್ಯ ಯಾವುದಾದರೊಂದು ಅಂತರ ಜಾತೀಯ ವಿವಾಹ ಇನ್ನಿತರೆ ಕಾರ್ಯಕ್ರಮಗಳಿಂದ ತುಂಬಿರುತ್ತಿತ್ತು ಎಂದು ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮಕುಮಾರ್ ತಿಳಿಸಿದರು.

ಮೈಸೂರಿನ ಕಲಾಮಂದಿರ ಕಿರುರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ಭಾನುವಾರ ಆಯೋಜಿಸಿದ್ದ ವಿಚಾರವಾದಿ ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲಿ... ಸಂವಾದ, ಪುಸ್ತಕ ಬಿಡುಗಡೆ, ಲೇಖನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಮದಾಸ್ ಅವರು ಬಸವಣ್ಣನವರ ತತ್ವ, ಚಿಂತನೆಗಳ ಬಗ್ಗೆ ಅಚಲ ನಂಬಿಕೆ ಮತ್ತು ನಿರಂತರ ಚಲನಶೀಲರಾಗಿದ್ದರು ಎಂದು ತಿಳಿಸಿದರು.



ಮೈಸೂರಿನಲ್ಲಿ ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿನಲಿ... ಸಂವಾದ, ಪುಸ್ತಕ ಬಿಡುಗಡೆ, ಲೇಖನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಲೇಖಕ, ಅಂಕಣಕಾರ ಸನತ್‌ಕುಮಾರ್ ಬೆಳಗಲಿ ಅವರು ಪುಸ್ತಕ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮ ಕುಮಾರ್, ಸಾಮಾಜಿಕ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ, ಚಿಂತಕಿ ಡಾ.ವಸುಂಧರಾ ಭೂಪತಿ, ಕೃಷ್ಣ ಜನಮನ ಇನ್ನಿತರರು ಉಪಸ್ಥಿತರಿದ್ದಾರೆ.

ಪ್ರೇಮ ವಿವಾಹಗಳಿಗೆ ಯಾವುದೇ ಸಂಕೇತಗಳಿಲ್ಲ. ವರದಕ್ಷಿಣೆ ಪಿಡುಗಿಲ್ಲ, ದುಂದುವೆಚ್ಚ ಇರುವುದಿಲ್ಲ, ಪ್ರೇಮ ವಿವಾಹಗಳು ನಿಜವಾದ ಪ್ರೀತಿಯ ಸಂಕೇತ ಎಂದ ಅವರು, ಪುರಾಣಗಳ ಪ್ರಕಾರ ಶಿವ, ಕೃಷ್ಣ, ರಾಮ ಎಲ್ಲರದ್ದು ಪ್ರೇಮ ವಿವಾಹಗಳೇ ಆಗಿದ್ದವು. ಆದರೆ ಅವರನ್ನು ಪೂಜೆ ಮಾಡುವ ಅವರ ಭಕ್ತರು ತಮ್ಮ ದೇವರುಗಳ ಆದರ್ಶ ಪಾಲಿಸುತ್ತಿಲ್ಲ ಎಂದರು.

ವಿಶ್ವ ಮಾನವನಾಗಿ ಹುಟ್ಟಿ, ವಿಶ್ವ ಮಾನವರಾಗಿಯೇ ಒಳ್ಳೆಯ ಜೀವನ ನಡೆಸಿದ್ದು ನಿದರ್ಶನ. ಯಾವ ರೀತಿ ತಮ್ಮ ಜೀವನದಲ್ಲಿ ರಾಮದಾಸ್ ಅವರು ವಿಶ್ವ ಮಾನವರಾಗಿ ಹುಟ್ಟಿ, ವಿಶ್ವ ಮಾನವರಾಗೇ ಬೆಳೆದವರು. ಜಾತ್ಯತೀತ ನಿಲುವಿನ ರಾಮದಾಸ್, ಹುಟ್ಟಿನಿಂದಲೂ ಯಾವುದೇ ಜಾತಿಗೆ ಸೇರಿಲ್ಲ ಎಂಬುದನ್ನು ಪ್ರತಿಪಾದಿಸಿದವರು, ಅವರ ಸಾರ್ವಜನಿಕ ಜೀವನವೂ ಇನ್ನೂ ರೋಚಕ ಹಾಗೂ ಕ್ರಾಂತಿಕಾರಕ ಎಂದು ತಿಳಿಸಿದರು.

'ಇದೇ ಸಂದರ್ಭದಲ್ಲಿ ಹಿರಿಯ ಲೇಖಕ, ಅಂಕಣಕಾರ ಸನತ್‌ಕುಮಾರ್ ಬೆಳಗಲಿ ಅವರು ಪುಸ್ತಕ ಬಿಡುಗಡೆ ಮಾಡಿದರು. ಪ್ರೇಮ ವಿವಾಹಗಳಿಂದ ಸಾಮಾಜಿಕ ಬದಲಾವಣೆ; ಸಾಧಕ–ಬಾಧಕಗಳು' ಕುರಿತು ಸಂವಾದ ನಡೆಯಿತು. ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ಚಿಂತಕಿ ಡಾ.ವಸುಂಧರಾ ಭೂಪತಿ, ಕೃಷ್ಣ ಜನಮನ ಇನ್ನಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್ ಚುನಾವಣೆ; ಬಿಜೆಪಿ ಸೋಲಿಗೆ ಕಾಂಗ್ರೆಸ್‌ನಿಂದ ವ್ಯಾಪಕ ಹಣ ಹಂಚಿಕೆ ಕಾರಣ

ಮೈಸೂರು ವಿಭಾಗದ ಬಿಜೆಪಿ ಉಸ್ತುವಾರಿಯೂ ಆದ ಎಂಎಲ್‌ಸಿ ರವಿಕುಮಾರ್ ಆರೋಪ

ಮೈಸೂರು,ಜೂ.19(ಪಿಎಂ)– ನಾಲ್ಕು ಪರಿಷತ್ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಎರಡು ಸ್ಥಾನಗಳಲ್ಲಿ ಪರಾಭವಗೊಳ್ಳಲು ಕಾಂಗ್ರೆಸ್‌ನಿಂದ ಹಣ ಹಂಚಿಕೆ ಕಾರಣ ಎಂದು ಆರೋಪಿಸಿದ ವಿಧಾನ ಪರಿಷತ್ ಸದಸ್ಯರೂ ಆದ ಮೈಸೂರು ವಿಭಾಗದ ಬಿಜೆಪಿ ಉಸ್ತುವಾರಿ ರವಿಕುಮಾರ್, ಆದಾಗ್ಯೂ ಸೋಲಿನ ಪರಾಮರ್ಶೆಗಾಗಿ ಪಕ್ಷದ ರಾಜ್ಯಾಧ್ಯಕ್ಷರೊಂದಿಗೆ ಚರ್ಚಿಸಿ ಸಮಿತಿ ರಚಿಸುವುದಾಗಿ ತಿಳಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಎಂಎಲ್‌ಸಿ ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಈ ಚುನಾವಣೆಯಲ್ಲಿ ನಮಗೆ ಎರಡು ಸ್ಥಾನಗಳು ಉಳಿದುಕೊಂಡಿವೆ. ದಕ್ಷಿಣ ಪದವೀಧರರ ಕ್ಷೇತ್ರ ಮಾತ್ರವಲ್ಲದೆ, ಈ ಚುನಾವಣೆಯಲ್ಲಿ ಎಲ್ಲಾ ನಾಲ್ಕು ಸ್ಥಾನಗಳನ್ನು ಬಿಜೆಪಿ ಗೆಲ್ಲುತ್ತದೆ ಎಂಬ ವಿಶ್ವಾಸ ಇತ್ತು. ಆದರೆ ಎರಡರಲ್ಲಿ ಸೋಲು ಕಾಣಬೇಕಾಯಿತು. ಇದಕ್ಕೆ ಕಾರಣ ನಾನು ನೇರವಾಗಿ ಹೇಳುತ್ತೇನೆ. ಕಾಂಗ್ರೆಸ್‌ನವರು ವಿಪರೀತವಾಗಿ ಹಣ ಹಂಚಿದ್ದಾರೆ ಎಂದು ಆರೋಪಿಸಿದರು.

ಆದಾಗ್ಯೂ ವಾಯುವ್ಯ ಶಿಕ್ಷಕರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಅರುಣ ಶಹಾಪುರ್ ಮತ್ತು ಇಲ್ಲಿ ಮೈ.ವಿ.ರವಿಶಂಕರ್ ಸೋಲಿನ ಕಾರಣ ತಿಳಿಯಲು ರಾಜ್ಯಾಧ್ಯಕ್ಷರೊಂದಿಗೆ ಮಾತನಾಡಿ ಸಮಿತಿ ರಚಿಸಲಾಗುವುದು ಎಂದು ಹೇಳಿದರು.

ಪ್ರಸ್ತುತ ಚುನಾವಣೆಯಲ್ಲಿ ಹಣ, ಜಾತಿ ಇವೆಲ್ಲವೂ ನಡೆಯುತ್ತಿದೆ. ಪಕ್ಷ ಈ ಬಗ್ಗೆ ಚರ್ಚೆ ಮಾಡಿ ಎಲ್ಲಾ ಸವಾಲುಗಳಿಗೆ ಉತ್ತರ ಕಂಡುಕೊಳ್ಳಲಿದೆ ಎಂದರಲ್ಲದೆ, ಕೆಲವು ವಿಷಯಗಳನ್ನು ಮಾಧ್ಯಮಗಳೊಂದಿಗೆ ನೇರವಾಗಿ ಹೇಳಲು ಸಾಧ್ಯವಿಲ್ಲ. ಎಲ್ಲಿ ಓಟು ಕಡಿಮೆಯಾಯಿತು ಎಂದು ಚರ್ಚೆ ಮಾಡುತ್ತೇವೆ. ಕೆಲವು ಸಂದರ್ಭದಲ್ಲಿ ಬಹಿರಂಗವಾಗಿ ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಿಲ್ಲ. ಕಾಲ ಮಿಂಚಿ ಹೋಗಿದ್ದು ಚಿಂತಿಸಿ ಫಲವಿಲ್ಲ. ಆದರೆ ಮುಂದೆ ಹೀಗಾದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದ್ದೇವೆ. ಈ ನಿಟ್ಟಿನಲ್ಲಿ ಸೋಲಿನ ಪರಾಮರ್ಶೆಗೆ ಸಮಿತಿ ರಚನೆ ಮಾಡಲಿದ್ದೇವೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಮೈ.ವಿ.ರವಿಶಂಕರ್ 2ನೇ ಬಾರಿಗೆ ಸೋಲು ಕಂಡಿದ್ದಾರೆ. ಮೈಸೂರು–ಚಾಮರಾಜನಗರ ಸ್ಥಳೀಯ ಸಂಸ್ಥೆಗಳಿಂದ ಪರಿಷತ್‌ಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಕೌಟಿಲ್ಯ ರಘು ಪರಾಭವಗೊಂಡರು. ಇದರಿಂದ ನಾವು ಪಾಠ ಕಲಿಯಬೇಕಿದೆ. ಮುಂದಿನ ದಿನಗಳಲ್ಲಿ ಈಗ ಆಗಿರುವ ನ್ಯೂನತೆ ಸರಿಪಡಿಸಿಕೊಳ್ಳಬೇಕಿದೆ. ಬೇರೆ ಬೇರೆ ಆಸೆ ಆಮಿಷಗಳನ್ನು ಕಾಂಗ್ರೆಸ್‌ನವರು ತೋರಿಸಿದ್ದಾರೆ. ಇದೆಲ್ಲವೂ ಚುನಾವಣೆಯಲ್ಲಿ ಸೋಲಲು ಕಾರಣವಾಗಿದೆ. ಜೊತೆಗೆ ಕಾರ್ಯಕರ್ತರು, ಮುಖಂಡರು ಇನ್ನಷ್ಟು ತೊಡಗಿಕೊಳ್ಳಬೇಕಿತ್ತು ಎಂದು ಎಂಎಲ್‌ಸಿ ರವಿಕುಮಾರ್ ತಿಳಿಸಿದರು.

ನಿಮ್ಮ ಪಕ್ಷದ ನಾಯಕರಲ್ಲಿನ ಸಮನ್ವಯದ ಕೊರತೆ ಕಾರಣವೇ? ಎಂಬುದಕ್ಕೆ ಉತ್ತರಿಸಿ, ಇನ್ನಷ್ಟು ಸರಿಪಡಿಸಿಕೊಳ್ಳಬೇಕು. ಪಕ್ಷದ ಆಂತರಿಕ ವಿಚಾರಗಳನ್ನು ಚರ್ಚೆ ಮಾಡಿ, ಸರಿಪಡಿಸಿಕೊಳ್ಳುತ್ತೇವೆ. ರಾಜ್ಯದ ವರಿಷ್ಠರು ಈ ಚುನಾವಣೆ ಸಂಬಂಧ ಎಲ್ಲವನ್ನೂ ಗಮನಿಸಿದ್ದಾರೆ ಎಂದರು. ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರತಾಪ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಅರ್ಜಿ ಆಹ್ವಾನ

ಮೈಸೂರು,ಜೂ.19–ಶರಣರ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿಗೆ ಸಾಲ ಸೌಲಭ್ಯ ಒದಗಿಸಲು ಅರ್ಹ ಫಲಾನುಭವಿಗಳಿಂದ ಸುವಿಧ ತಂತ್ರಾಂಶದ ಮುಖಾಂತರ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಜುಲೈ 14 ಕೊನೆ ದಿನವಾಗಿದೆ. ಬೆಸ್ತ, ಅಂಬಿಗ ಅಥವಾ ಅಂಬಿ, ಬರಕಿ ಅಥವಾ ಬಾರಿಕ, ಬೆಸ್ತರ್, ಭೋಯಿ, ರಾಜಬೋಯಿ, ಬುಂಡೆ, ಬೆಸ್ತರ್, ದಾಲ್ಜಿ, ದಾವತ್, ಗಬಿಟ್, ಗಲಾಡ ಕೊಂಕಣಿ, ಗಂಗೆ ಮಕ್ಕಳು, ಗಂಗಾ ಕುಲ, ಗಂಗಾಮತ, ಗಂಗಾಮತಸ್ಥ, ಗಂಗಾಪುತ್ರ, ಗೌರಿ ಮತ, ಬುಂಡೆ ಬೆಸ್ತ ಅಥವಾ ಗುಂಡೆ ಬೆಸ್ತ ಹರತಂತ್ರ ಜಲಗಾರ, ಕಬ್ಬೇರ, ಕಬ್ಬಲಿಗ, ಕಬ್ಬಿಲಿ, ಕಹರ್, ಖಾರ್ವಿ ಅಥವಾ ಕೊಂಕಣ ಖಾರ್ವಿ, ಕೋಳಿ, ಕೋಳಿ ಮಹದೇವ್, ಮಡ್ಡರ್, ಮೀನಗಾರ, ಮೊಗವೀರ, ಮಗೇರ್, ಮುಕ್ಕವಾನ್, ಪರಿವಾರ, ಸಿವಿಯರ್, ಸುಣಗಾರ, ತೊರೆಯ, ಪಾಗಿ ಜಾತಿಗೆ ಸೇರಿದ ಅರ್ಹ ಫಲಾಪೇಕ್ಷಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿಗೆ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ /ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಭೇಟಿ ನೀಡಬಹುದು. https://ambigaradeve lopment .karnataka.gov.in ಅಥವಾ ಸಹಾಯವಾಣಿ : 080–22864099 ಸಂಪರ್ಕಿಸಿ.

ಪ್ರಧಾನಿ ಮೋದಿ ಮೈಸೂರು ಭೇಟಿ ಹಿನ್ನೆಲೆ; ವೃತ್ತಗಳಿಗೆ ಅಲಂಕಾರ

ಮೈಸೂರು,ಜೂ.19(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ಮೈಸೂರು ಭೇಟಿ ಹಿನ್ನೆಲೆಯಲ್ಲಿ ಅವರು ಸಂಚರಿಸುವ ಮಾರ್ಗದ ವೃತ್ತಗಳನ್ನು ಪಕ್ಷದ ಧ್ವಜದೊಂದಿಗೆ ಅಲಂಕರಿಸಲಾಗುವುದು. ಅಲ್ಲದೆ, ರಸ್ತೆ ಇಕ್ಕಲಗಳಲ್ಲಿ ಪಕ್ಷದ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದು ಪ್ರಧಾನಿಗಳಿಗೆ ಸ್ವಾಗತ ಕೋರಲಿದ್ದಾರೆ ಎಂದು ಪರಿಷತ್ ಸದಸ್ಯರೂ ಆದ ಮೈಸೂರು ವಿಭಾಗದ ಬಿಜೆಪಿ ಉಸ್ತುವಾರಿ ರವಿಕುಮಾರ್ ತಿಳಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಹೆಮ್ಮೆಯ ನಾಯಕ ಪ್ರಧಾನಿ ನರೇಂದ್ರ ಮೋದಿಯವರು ಜೂ.20 ಮತ್ತು 21ರಂದು ಮೈಸೂರು ಪ್ರವಾಸ ಕೈಗೊಂಡಿದ್ದಾರೆ. ಪ್ರಧಾನಿಗಳು ಐತಿಹಾಸಿಕ ನಗರ ಮೈಸೂರಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಅದ್ಧೂರಿ ಸ್ವಾಗತ ಕೋರುವ ಸಲುವಾಗಿ ಎಲ್ಲಾ ವೃತ್ತಗಳಲ್ಲಿ ಪಕ್ಷದ ಧ್ವಜ ಅಳವಡಿಸಿ ಅಲಂಕಾರ ಮಾಡಲಿದ್ದೇವೆ. ಮಾರನೇ ದಿನ ಅವುಗಳನ್ನು ತೆರವುಗೊಳಿಸುವ ಕೆಲಸವನ್ನೂ ಮಾಡಲಿದ್ದೇವೆ. ಸುಮಾರು 34 ವೃತ್ತಗಳನ್ನು ಅಲಂಕಾರ ಮಾಡಲಾಗುತ್ತಿದೆ ಎಂದರು.

ಪ್ರಧಾನಿಗಳು ಸಾಗುವ ರಸ್ತೆ ಇಕ್ಕಲಗಳಲ್ಲಿ ಪಕ್ಷದ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದು ಸ್ವಾಗತ ಮಾಡಲಿದ್ದಾರೆ. ಕೇಂದ್ರದ ಆಯುಷ್ ಇಲಾಖೆ ಸಚಿವ ಸರ್ಬಾನಂದ ಸೋನಾವಾಲ್ ಸಹ ಪ್ರಧಾನಿಗಳೊಂದಿಗೆ ಆಗಮಿಸುತ್ತಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಚಿವರಾದ ಗೋಪಾಲಯ್ಯ, ವಿ.ಸೋಮಣ್ಣ ಸಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದರು.

ಜೂ.20ರಂದು ಬೆಂಗಳೂರಿನಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಂದು ಸಂಜೆ 6ಕ್ಕೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸರ್ಕಾರದ ವತಿಯಿಂದ ಹಮ್ಮಿಕೊಂಡಿರುವ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಪ್ರಧಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ರವಿಕುಮಾರ್ ತಿಳಿಸಿದರು.

ಸಮಾವೇಶದಲ್ಲಿ 30 ಸಾವಿರ ಮಂದಿ ಭಾಗಿ; ಎಂಎಲ್‌ಸಿ ರವಿಕುಮಾರ್

ಯೋಜನೆಗಳ ಫಲಾನುಭವಿಗಳು 30 ಸಾವಿರಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಪೈಕಿ 8ರಿಂದ 10 ಸಾವಿರ ಮಂದಿ ಪಕ್ಷದ ಕಾರ್ಯಕರ್ತರ ಸಂಪರ್ಕದಲ್ಲಿರುವ ಫಲಾನುಭವಿಗಳಾದರೆ, ಉಳಿದವರನ್ನು ವಿವಿಧ ಇಲಾಖೆಗಳು ಗುರುತಿಸಿ ಕರೆತರಲಿದ್ದಾರೆ ಎಂದು ತಿಳಿಸಿದರು.

ಜೂ.21ರಂದು ನಡೆಯುವ ಯೋಗ ದಿನಾಚರಣೆ ಮುಖ್ಯ ಕಾರ್ಯಕ್ರಮವಾಗಿದ್ದು, ನಮ್ಮ ದೇಶ ಯೋಗ, ತ್ಯಾಗ ಮತ್ತು ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಈ ವಿಚಾರಗಳನ್ನು ಪ್ರಧಾನಿ ನರೇಂದ್ರ ಮೋದಿಯವರು ಜಗತ್ತಿಗೆ ತಿಳಿಸುತ್ತಿದ್ದಾರೆ. ಯೋಗ ನಮ್ಮ ಜೀವನದ ಭಾಗವಾಗಬೇಕೆಂದು ಆಗಿಂದಾಗೆ ಹೇಳುವ ಮೂಲಕ ಕೋಟ್ಯಂತರ ಜನ ತಮ್ಮ ಜೀವನದಲ್ಲಿ ಯೋಗ ರೂಢಿಸಿಕೊಳ್ಳಲು ಪ್ರಧಾನಿಗಳು ಪ್ರೇರಣೆಯಾಗಿದ್ದಾರೆ ಎಂದು ಹೇಳಿದರು.

ಪ್ರಧಾನಿಗಳ ಮೈಸೂರು ಭೇಟಿ ಸಂಬಂಧ ಬಿಜೆಪಿಯವರು 'ಮೋದಿ ದಸರಾ' ಮಾಡಲು ಹೊರಟ್ಟಿದ್ದಾರೆಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ವಿರೋಧ ಏಕೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಪ್ರಧಾನಿಗಳು ಯೋಗದ ಬಗ್ಗೆ ಜಾಗೃತಿ ಮೂಡಿಸಲು ಬರುತ್ತಿದ್ದಾರೆ. ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಲು ಉತ್ತೇಜನ ನೀಡಲಿದ್ದಾರೆ ಎಂದರು. ಪಾಪ ವಿರೋಧಿಸುವವರಿಗೆ ಹೊಟ್ಟೆಬೇನೆ ಇರಬಹುದು. ಏಕೆಂದರೆ ಎಲ್ಲಾ ವ್ಯವಸ್ಥೆ ಮಾಡಿ ಕರೆದುಕೊಂಡು ಹೋಗುತ್ತೇವೆ ಎಂದರೂ ವಿರೋಧಿಸುತ್ತಿರುವವರ ಜೊತೆಗೆ ಜನ ಬರುವುದಿಲ್ಲ. ಅದೇ ಮೋದಿಯವರು ಬರುವೆಡೆ ಲಕ್ಷಾಂತರ ಮಂದಿ ಸೇರುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್, ಜೆಡಿಎಸ್‌ನಂತೆ ಅಲ್ಲ, ನಮ್ಮದು ಧರ್ಮ ಅಳವಡಿಸಿಕೊಂಡ ಪಕ್ಷ: ಇದು ಮುಂದಿನ ವಿಧಾನಸಭಾ ಚುನಾವಣೆಗೆ ಪೂರಕವಾಗಿ ನಡೆಯುತ್ತಿರುವ ಕಾರ್ಯಕ್ರಮ ಎಂಬ ಆರೋಪವಿದೆ ಎಂಬುದಕ್ಕೆ ಉತ್ತರಿಸಿ, ಚುನಾವಣೆ ಇರಲಿ, ಇಲ್ಲದಿರಲಿ ಯೋಗ ದಿನಾಚರಣೆ ನಡೆಯುತ್ತದೆ. ನಮ್ಮ ಪಕ್ಷವು ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಇನ್ನಾವುದೂ ಪಕ್ಷದಂತೆ ಅಲ್ಲ. ಯೋಗ ಮತ್ತು ಧರ್ಮ ಹಾಗೂ ಈ ದೇಶಕ್ಕೆ ಅಗತ್ಯವಿರುವ ಚಟುವಟಿಕೆಗಳನ್ನು ಅಳವಡಿಸಿಕೊಂಡಿರುವ ಪಕ್ಷ ನಮ್ಮದು. ಚುನಾವಣೆಗೆ ಇನ್ನು ಸಾಕಷ್ಟು ತಿಂಗಳು ಇದ್ದು, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.06.2022 ಸೋಮವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ : ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9 ಗಂಟೆವರೆಗೆ

■ **ಸಂಸ್ಕೃತಿ ಪ್ರಕಾಶನ:** ಡಾ.ಜಿ.ಎನ್.ಮಧುರಾನಾಥ ದೀಕ್ಷಿತ್ ಅವರ 'ಶಿಕ್ಷಣ ಕ್ಷೇತ್ರದಲ್ಲಿ ಲೌಕಿಕ ಅಲೌಕಿಕಗಳ ಸಂಶ್ಲೇಷಣೆ' ಒಂದು ವಿವೇಚನ ಪುಸ್ತಕ ಬಿಡುಗಡೆ, ಅಧ್ಯಕ್ಷತೆ: ಎಂಐಟಿ ವಿದ್ಯಾ ಸಂಸ್ಥೆ ಅಧ್ಯಕ್ಷ ಡಾ.ಮುರಳಿ, ಪುಸ್ತಕ ಲೋಕಾರ್ಪಣೆ: ಪ್ರೊ. ಸುಧೀಂದ್ರ ಗರ್ಗೇಶ್, ಉಪಸ್ಥಿತಿ: ಡಾ.ಜಿ.ಎನ್.ಮಧುರಾನಾಥ ದೀಕ್ಷಿತ್, ಪ್ರಾಸ್ತಾವಿಕ ನುಡಿ: ಸಂಸ್ಕೃತಿ ಸುಬ್ರಹ್ಮಣ್ಯ, ಸ್ಥಳ: ಗೋಪಾಲಸ್ವಾಮಿ ಕಾಲೇಜು ಸಭಾಂಗಣ, ಲಕ್ಷ್ಮೀಪುರಂ, ಮಧ್ಯಾಹ್ನ 3ಕ್ಕೆ

■ **ಅಜಾದಿ ಅಮೃತ ಮಹೋತ್ಸವ:** ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಭೆ, ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರಧಾನಿ ಮೋದಿಯವರಿಗೆ ಸ್ವಾಗತ ಕಾರ್ಯಕ್ರಮ, ಶಾಸಕ ರಾಮದಾಸ್ ಮತ್ತು ಕ್ಷೇತ್ರದ ಜನರೊಂದಿಗೆ ಮಧ್ಯಾಹ್ನ 3.30ಕ್ಕೆ, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ:** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** 'ಶ್ರೀ ಮಹಾಭಾರತದ ಉದ್ಯೋಗ ಪರ್ವ' ಕುರಿತು ವಿಶೇಷ ಪ್ರವಚನ, ವಿದ್ವಾನ್ ಡಾ.ಬೆ.ನಾ.ವಿಜಯೇಂದ್ರಾಚಾರ್ಯರಿಂದ ಸಂಜೆ 5 ಗಂಟೆಗೆ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಯರ ಮಠ.

■ **ಜೆಎಸ್‌ಎಸ್ ವಿದ್ಯಾಪೀಠ :** ಕೆಎಸ್‌ಎಸ್ ಸಂಸ್ಕೃತ ಪಾಠಶಾಲಾ (ಕ್ಯಾತನಹಳ್ಳಿ ಸಾಹುಕಾರ್ ಸಿದ್ದಲಿಂಗಯ್ಯ ಸಂಸ್ಕೃತ ಪಾಠಶಾಲಾ), ವಿದ್ಯಾರ್ಥಿಗಳ ಹೊಸ ಹಾಸ್ಟೆಲ್ ಕಟ್ಟಡ, ವಿಜಯಪುರ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ 'ಪತಂಜಲಿ ಯೋಗ ಸೂತ್ರ: ವಿವರಣೆ, 'ಶಿವಸೂತ್ರಗಳು' ಮತ್ತು 'ನಾರದ ಭಕ್ತಿ ಸೂತ್ರಗಳು' ಪುಸ್ತಕಗಳ ಬಿಡುಗಡೆ. ಪ್ರಧಾನಿ ನರೇಂದ್ರ ಮೋದಿ ಅವರಿಂದ, ದಿವ್ಯ ಸಾನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಅಧ್ಯಕ್ಷತೆ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯ ಅತಿಥಿಗಳು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದ ಪ್ರತಾಪ್ ಸಿಂಹ, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಸಾನ್ನಿಧ್ಯ: ತುಮಕೂರು ಶ್ರೀ ಸಿದ್ದಗಂಗಾ ಕ್ಷೇತ್ರದ ಶ್ರೀ ಸಿದ್ದಲಿಂಗ ಮಹಾ ಸ್ವಾಮೀಜಿ, ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 7 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ: ಮಾಲಿಕೆ ಲೇಖನ ಪ್ರಸ್ತುತಿ: ಡಾ. ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5ಕ್ಕೆ ಶತಮಾನದ ಸ್ಮೃತಿಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ: ಡಿ.ಎನ್.ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ: ಕೆ.ಬಿ.ಸುನೀತಾ ಆಚಾರ್ಯ ಮತ್ತು ಎನ್. ಹೇಮಾ, ವ್ಯಾಖ್ಯಾನ: ಪ್ರೋ. ಮೈಸೂರು ಕೃಷ್ಣಮೂರ್ತಿ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ: ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ: ಎಸ್. ಸುಬ್ರಹ್ಮಣ್ಯ, ಭಾಗವಹಿಸುವರು: ಡಾ. ಶೀಲಾ ಶ್ರೀಧರ್, 11.15 ಯೋಗದತ್ತ ಜಗತ್ತು: ವಿಶೇಷ ಸರಣಿ– ಸುತ್ತುರು ಮಹಾ ಸಂಸ್ಥಾನದ ಶ್ರೀ ಶಿವರಾತ್ರಿ, ದೇಶಿಕೇಂದ್ರ ಸ್ವಾಮೀಜಿ ಅವರಿಂದ 'ಯೋಗ–ಶಿವಯೋಗ' ಸಂದೇಶ, 12.05 ವನಿತಾ ವಿಹಾರ: 'ಯೋಗ ಹಾಗೂ ಮಹಿಳೆ' ಶೋಭಾ ಹುಳೀಕಟ್ಟೆ ಅವರೊಂದಿಗೆ ಸಂದರ್ಶನ, 12.30 ಭಕ್ತಿಗೀತೆಗಳು: ರಾಜ್ಕುಮಾರ್ ಭಾರತಿ, ರಾಜು ಅನಂತಸ್ವಾಮಿ, 12.45 ನಮ್ಮ ಆರೋಗ್ಯ: 'ಬಾಯಿಯ ಆರೋಗ್ಯ' ಕುರಿತು ಡಾ. ಶ್ರೀ ಶೈಲಾ ಹೆಚ್.ಎಸ್. ಅವರೊಂದಿಗೆ ಮಾತುಕತೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ 'ಯೋಗ ಸುಯೋಗ' ಬಾನುಲಿ ಸರಣಿ, 3.00 ಎನ್.ಚೊಕ್ಕಮ್ಮ, ವೀಣಾವಾದನ ಹಾಗೂ ಹಾಡುಗಾರಿಕೆ, 4.00 ಮಹಿಳಾರಂಗ: 'ಆಕಾಶವಾಣಿ ಅಡುಗೆ ಮನೆ' ಪ್ರಸ್ತುತಿ: ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ:–ಸುರೇಖಾ ಭೀಮಕುಳಿ, ಸಂಗೀತ: ಬಿ.ಆರ್. ಗೀತಾ, ಭಾಗವಹಿಸುವವರು ಬೆಂಗಳೂರು ಬನಶಂಕರಿಯ ಲಿಟಲ್ ಫ್ಲವರ್ ಪಬ್ಲಿಕ್ ಶಾಲೆಯ ಮಕ್ಕಳು, 5.50 ರಿಂದ 7.20: ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿನಲ್ಲಿ ಪಾಲ್ಗೊಳ್ಳುವ ಕಾರ್ಯಕ್ರಮದ ನೇರ ಪ್ರಸಾರ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ: 'ದೇಶ ವಿಭಜನೆಯ ರಾಜೀ ಸೂತ್ರ'–ಶಬ್ಧಚಿತ್ರ ಭಾಗವಹಿಸುತ್ತಾರೆ ಮೈಸೂರಿನ ಪ್ರೊ. ಬಿ. ಪರಮೇಶ್ವರ, ನಿರ್ಮಾಣ:– ದಿವಾಕರ ಹೆಗಡೆ, 10.05 ಪ್ರಧಾನಿ ನರೇಂದ್ರ ಮೋದಿಯವರ ಬೆಂಗಳೂರು ಭೇಟಿ ಕುರಿತು ಬಾನುಲಿ ವರದಿ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 20 ಸೋಮವಾರ 2022

ಸಂಪುಟ: 43 | ಸಂಚಿಕೆ: 65 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523,
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಇಂದು ಮೈಸೂರಿಗೆ ಪ್ರಧಾನಿ ಮೋದಿ

ಮೈಸೂರು,ಜೂ.19(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನ ಸೇರಿದಂತೆ ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗ ಮನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಮೈಸೂರಲ್ಲಿ ಪ್ರಧಾನಿ ಮೋದಿ ಅವರು ಪಾಲ್ಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ಪ್ರಧಾನಮಂತ್ರಿಗಳ ಕಾರ್ಯಾಲಯ ಬಿಡುಗಡೆ ಮಾಡಿದೆ.

ಜೂ.20 ಮತ್ತು 21ರಂದು ಕರ್ನಾಟಕದ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಿಂದ ವಿಶೇಷ ವಿಮಾನದಲ್ಲಿ ಜೂ.20ರಂದು ಬೆಳಗ್ಗೆ 11.55ಕ್ಕೆ ಬೆಂಗಳೂರಿಗೆ ಆಗಮಿಸಲಿದ್ದಾರೆ. ಯಲಹಂಕ ವಾಯುನೆಲೆಗೆ ಆಗಮಿಸಲಿರುವ ಮೋದಿ ಅವರು, ಮಧ್ಯಾಹ್ನ 12ಕ್ಕೆ ಹೆಲಿಕಾಪ್ಟರ್ ಮೂಲಕ ಹೊರಟು 12.30ಕ್ಕೆ ಇಂಡಿಯನ್ ಇನ್ಸ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಇ)ಗೆ ತಲುಪಲಿದ್ದಾರೆ. ಅಲ್ಲಿ ಸೆಂಟರ್ ಫಾರ್ ಬ್ರೈನ್ ರಿಸರ್ಚ್ ಉದ್ಘಾಟನೆ ಹಾಗೂ ಬಚ್ಚಿ ಪಾರ್ಥಸಾರಥಿ ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ 1.05ಕ್ಕೆ ಐಐ ಎಸ್‌ಇ ಇಂದ ನಿರ್ಗಮಿಸಲಿದ್ದಾರೆ. 1.10ಕ್ಕೆ ಐಐಎಸ್‌ಇ ಹೆಲಿ ಪ್ಯಾಡ್‌ನಿಂದ ಹೆಲಿಕಾಪ್ಟರ್ ಮೂಲಕ ಪ್ರಯಾಣ ಬೆಳೆಸಿ 1.35ಕ್ಕೆ ಕೊಮ್ಮಘಟ್ಟ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ.

ನಂತರ ಅಲ್ಲಿಂದ ರಸ್ತೆ ಮಾರ್ಗವಾಗಿ ಕೊಮ್ಮಘಟ್ಟದಲ್ಲಿ ಆಯೋಜಿಸಿರುವ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಧ್ಯಾಹ್ನ 3.10ಕ್ಕೆ ಕೊಮ್ಮಘಟ್ಟ ಹೆಲಿಪ್ಯಾಡ್ ತಲುಪಿ ಅಲ್ಲಿಂದ 3.35ಕ್ಕೆ ಬೇಸ್ ಹೆಲಿಪ್ಯಾಡ್‌ಗೆ ತೆರಳಿ 3.45ಕ್ಕೆ ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ತಲುಪಲಿದ್ದಾರೆ. ಅಲ್ಲಿ 4.30ರವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಉದ್ಘಾಟನೆ ಮತ್ತು ಬೇಸ್ ಯುನಿವರ್ಸಿಟಿ ಉದ್ಘಾಟನೆ ಹಾಗೂ ▶ 7ನೇ ಪುಟಕ್ಕೆ



ಪ್ರಧಾನಿ ನರೇಂದ್ರ ಮೋದಿ ಅವರಿಂದ ಸೋಮವಾರ ಮೈಸೂರಿನ ಸುತ್ತೂರು ಶಾಖಾ ಮಠದಲ್ಲಿ ಉದ್ಘಾಟನೆಗೊಳ್ಳುತ್ತಿರುವ ಎಂಜಿ ರಸ್ತೆಯಲ್ಲಿರುವ ಕೆಎಸ್‌ಎಸ್ ಸಂಸ್ಕೃತ ಪಾಠಶಾಲಾ ಕಟ್ಟಡ ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿದೆ.

ಮೈಸೂರಲ್ಲಿ ಹೈ–ಅಲರ್ಟ್



ಮೈಸೂರು: ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ವಿಶ್ವ ಮಟ್ಟದ ನಾಯಕನಿಗೆ ಏನೆಲ್ಲಾ ಭದ್ರತೆ ನೀಡಬೇಕೆಂಬ ಆಲೋಚನೆಯೊಂದಿಗೆ ಮೈಸೂರಿನಾದ್ಯಂತ ಹೈ–ಅಲರ್ಟ್‌ನೊಂದಿಗೆ ಕಟ್ಟುನಿಟ್ಟಿನ ಭದ್ರತೆ ಆಯೋಜಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಪ್ರಧಾನಿ ಮೋದಿ ಇಂದು ವಿಶ್ವ ಮಟ್ಟದ ನಾಯಕರಾಗಿದ್ದಾರೆ. ▶ 7ನೇ ಪುಟಕ್ಕೆ

ಸಿಎಂಗೆ ಕೋವಿಡ್ ಪರೀಕ್ಷೆ

ಬೆಂಗಳೂರು, ಜೂ.19– ನಾಳೆ ಪ್ರಧಾನಿ ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ. ಬೆಂಗಳೂರು ಹಾಗೂ ಮೈಸೂರಿನ ವಿವಿಧ ಕಾರ್ಯಕ್ರಮಗಳಲ್ಲಿ ಮೋದಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕೋವಿಡ್ ಮುಂಜಾಗ್ರತಾ ಕ್ರಮಗಳು ಹಾಗೂ ಭದ್ರತೆ ಬಗ್ಗೆ ತೀವ್ರ ಗಮನ ಹರಿಸಲಾಗುತ್ತಿದೆ. ಅದರಲ್ಲೂ ಪಿಎಂ ಕಾರ್ಯಕ್ರಮದಲ್ಲಿ ಭಾಗಿಯಾಗುವವರು ಕಡ್ಡಾಯ ಕೋವಿಡ್ ಟೆಸ್ಟ್‌ಗೆ ಒಳಗಾಗಿರಬೇಕೆಂದು ಸೂಚಿಸಲಾಗಿದೆ. ನಾಳೆಯ ಕಾರ್ಯಕ್ರಮದಲ್ಲಿ ಸಿಎಂ ಬೊಮ್ಮಾಯಿ ಕೂಡ ಭಾಗಿಯಾಗಲಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರ ಆರ್.ಟಿ ನಗರ ನಿವಾಸಕ್ಕೆ ಆಗಮಿಸಿದ ಆರೋಗ್ಯ ಸಿಬ್ಬಂದಿ ಕೋವಿಡ್ ಪರೀಕ್ಷೆ ನಡೆಸಿದರು.

ನಾಳೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ

ಅರಮನೆ ಆವರಣದಲ್ಲಿ 12 ಸಾವಿರ ಯೋಗಪಟುಗಳಿಂದ

ಅಂತಿಮ ಪೂರ್ವಾಭ್ಯಾಸ



ಮೈಸೂರು, ಜೂ.19(ಆರ್‌ಕೆಬಿ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನೋತ್ಸವದ ಅಂತಿಮ ಪೂರ್ವಾಭ್ಯಾಸ ಕಾರ್ಯಕ್ರಮ ಭಾನುವಾರ ಬೆಳಗ್ಗೆ ಅರಮನೆ ಆವರಣದಲ್ಲಿ ನಡೆಯಿತು. ಸುಮಾರು 12 ಸಾವಿರಕ್ಕೂ ಹೆಚ್ಚು ಯೋಗಪಟುಗಳು ಭಾಗವಹಿಸಿ, ಯೋಗ ಪ್ರದರ್ಶಿಸಿದರು.



ಖ್ಯಾತ ಕೊಳಲು ವಾದಕ ಶ್ರೀನಿಧಿ ಕಿಟ್ಟಿ ಅವರ ಸುಶ್ರಾವ್ಯ ಕೊಳಲು ವಾದನದ ಹಿನ್ನೆಲೆ ಸಂಗೀತದಲ್ಲಿ ಯೋಗಪಟುಗಳು ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಯೋಗ ನಿರ್ದೇಶಕ ಡಾ.ಈಶ್ವರ ಬಸವಾರೆಡ್ಡಿ ಅವರ ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ನೀಡಿದ ಮಾರ್ಗದರ್ಶನದಲ್ಲಿ ಯೋಗ ಪ್ರದರ್ಶನ ನೀಡಿದರು. ಮೊದಲಿಗೆ ಡಾ. ಗಣೇಶ್‌ಕುಮಾರ್ ಶಂಖನಾದ, ▶ 7ನೇ ಪುಟಕ್ಕೆ


ಜಯಮಾರ್ತಾಂಡ ದ್ವಾರದಿಂದ ಪ್ರಧಾನಿಯೊಂದಿಗೆ ಸಿಎಂ, ರಾಜ್ಯಪಾಲರ ಪ್ರವೇಶ

ಸಂಸದ ಪ್ರತಾಪ್‌ಸಿಂಹರಿಂದ ಮಾಹಿತಿ



ಮೈಸೂರು, ಜೂ.19– ಅರಮನೆ ಆವರಣದಲ್ಲಿ ಜೂ.21ರಂದು ನಡೆಯುವ ಯೋಗ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಅರಮನೆ ಎದುರಿನ ಜಯಮಾರ್ತಾಂಡ ದ್ವಾರದ ಕಡೆಯಿಂದ ವೇದಿಕೆಗೆ ಬರಲಿದ್ದಾರೆ ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರ್‌ಚಂದ್ರ ಗೆಹ್ಲೋಟ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ▶ 7ನೇ ಪುಟಕ್ಕೆ

ಪರಿಸರ ಉಳಿಸಲು ಇಕಲಾಜಿಕಲ್ ಬಜೆಟ್



ಬೆಂಗಳೂರು, ಜೂ.19– ದೇಶದಲ್ಲೇ ಮೊದಲ ಬಾರಿಗೆ ಪರಿಸರ ಉಳಿಸಲು ಸರ್ಕಾರದಿಂದ ಇಕಲಾಜಿಕಲ್ ಬಜೆಟ್ ಮಂಡನೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಸರ ಉಳಿಸಲು 100 ಕೋಟಿ ಮೊತ್ತದ ಇಕಲಾಜಿಕಲ್ ಬಜೆಟ್ ಮಂಡನೆ ಮಾಡುತ್ತೇವೆ. ಇದರ ಜೊತೆಗೆ ಎಲ್ಲೆಲ್ಲಿ ಅರಣ್ಯ ನಾಶ ಆಗಿದೆಯೋ, ಬಂಜರು ಭೂಮಿ ಇದೆಯೋ ಅದನ್ನು ಪುನಶ್ಚೇತನ ಮಾಡುತ್ತೇವೆ. ರಾಜ್ಯದಲ್ಲಿ ಅರಣ್ಯವು 24% ಇದೆ. ಇದನ್ನು ಮುಂದಿನ 5 ವರ್ಷಗಳಲ್ಲಿ ಶೇ.30ಕ್ಕೆ ಏರಿಸುವ ಯೋಜನೆ ಹಾಕಿಕೊಳ್ಳುತ್ತೇವೆ ಎಂದು ಭರವಸೆ ನೀಡಿದರು. ಪಂಚಭೂತಗಳಲ್ಲಿ ಶ್ರೇಷ್ಠವಾದುದ್ದು ಮಣ್ಣು. ಮಣ್ಣಿನಲ್ಲಿ ಎಲ್ಲ ಪಂಚಭೂತಗಳೂ ಅಡಕವಾಗಿವೆ. ಆದರೆ ನಾವು ಯಾವ್ಯಾವುದೋ ▶ 7ನೇ ಪುಟಕ್ಕೆ

'ಅಗ್ನಿಪಥ್ ಯೋಜನೆ': ಯಾವುದೇ ಕಾರಣಕ್ಕೂ ಹಿಂಪಡೆಯುವುದಿಲ್ಲ


ಉನ್ನತ ಮಿಲಿಟರಿ ಅಧಿಕಾರಿ ಅನಿಲ್ ಪುರಿ



ನವದೆಹಲಿ: ಕೇಂದ್ರ ರಕ್ಷಣಾ ಸಚಿವಾಲಯ ತಂದಿರುವ ಭಾರತೀಯ ಮಿಲಿಟರಿಗೆ ಅಗ್ನಿಪಥ್ ನೇಮಕಾತಿ ಯೋಜನೆಯನ್ನು ಯಾವುದೇ ಕಾರಣಕ್ಕೂ ಹಿಂತೆಗೆದುಕೊಳ್ಳುವುದಿಲ್ಲ. ದೇಶದ ಯುವಶಕ್ತಿಯನ್ನು ಹೆಚ್ಚಿಸಲು ಇರುವ ಏಕೈಕ ಪ್ರಗತಿಪರ ಹೆಜ್ಜೆ ಎಂದು ದೇಶಾದ್ಯಂತ ಯೋಜನೆಗೆ ಪ್ರತಿಭಟನೆ ತೀವ್ರವಾಗಿರುವ ಸಂದರ್ಭದಲ್ಲಿ ಸೇನೆಯ ಹಿರಿಯ ಅಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಭಾರತೀಯ ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಯ ಹಿರಿಯ ಅಧಿಕಾರಿಗಳು ದೆಹಲಿಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದರು. ಕೇಂದ್ರ ಸರ್ಕಾರ ಕಳೆದ ಜೂನ್ 14ರಂದು ಮಿಲಿಟರಿಯಲ್ಲಿ ಯುವಕರನ್ನು ನೇಮಕಾತಿ ಮಾಡುವ ಅಗ್ನಿಪಥ್ ಯೋಜನೆಯನ್ನು ಜಾರಿಗೆ ತಂದಿದ್ದು, ವಾಯುಸೇನೆಗೆ ಜೂನ್ 24ರಂದು ನೇಮಕಾತಿ ಆರಂಭವಾಗಲಿದೆ. ಈ ಮಧ್ಯೆ ಅಗ್ನಿಪಥ ಯೋಜನೆ ಮಿಲಿಟರಿಗೆ ಸೇರುವ ಯುವಕರಿಗೆ ಮಾರಕವಾಗಿದೆ, ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ ಎಂದು ಬಿಹಾರ, ಪಶ್ಚಿಮ ಬಂಗಾಳ, ಹೈದರಾಬಾದ್, ಸಿಕಂದರಾಬಾದ್, ತೆಲಂಗಾಣ, ಪಂಜಾಬ್, ಕೇರಳ ರಾಜ್ಯಗಳಲ್ಲಿ ತೀವ್ರವಾಗಿ ಸಾವು ನೋವುಗಳು ಸಂಭವಿಸಿವೆ. ▶ 7ನೇ ಪುಟಕ್ಕೆ

ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ: ಸಾಧಕರ ಆಯ್ಕೆಗೆ ತಜ್ಞರ ಸಮಿತಿ



ಬೆಂಗಳೂರು, ಜೂ.19– ಬೆಂಗಳೂರು ಸಂಸ್ಥಾಪಕ, ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಹಲವು ರಂಗಗಳ ಸಾಧಕರಿಗೆ 'ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ ಅರ್ಹರನ್ನು ಆಯ್ಕೆ ಮಾಡಲು ಸರ್ಕಾರದ ನವೋದ್ಯಮ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಈ ಬಗ್ಗೆ ಮಾತನಾಡಿದ ಅವರು, ಉದ್ಯಮಿ ಟಿ.ವಿ. ಮೋಹನದಾಸ್ ಪೈ, ವಿದ್ವಾಂಸ ಡಾ.ರಾಮಸ್ವಾಮಿ ಬಾಲಸುಬ್ರಹ್ಮಣ್ಯಂ, ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಅವರು ಈ ಆಯ್ಕೆ ಸಮಿತಿಯ ಸದಸ್ಯರಾಗಿದ್ದು, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ವಿನಯ ಅವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಎಂದು ವಿವರಿಸಿದರು.

ಮೈಸೂರಲ್ಲಿ 'ಮಣ್ಣು ಉಳಿಸಿ' ಅಭಿಯಾನ

ನಾವು ಮಣ್ಣನ್ನು ರಕ್ಷಿಸದಿದ್ದರೆ ಮನುಕುಲ ನಾಶ

ಇಶಾ ಪ್ರತಿಷ್ಠಾನದ ಜಗ್ಗಿ ವಾಸುದೇವ್ ಎಚ್ಚರಿಕೆ



ಮಣ್ಣು ಉಳಿಸಿ ಅಭಿಯಾನದ ಪೋಸ್ಟರ್ ಪ್ರದರ್ಶಿಸುತ್ತಿರುವ ಸಂಸದ ಪ್ರತಾಪ್ ಸಿಂಹ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇಶಾ ಫೌಂಡೇಷನ್ ಸಂಸ್ಥಾಪಕರಾದ ಜಗ್ಗಿ ವಾಸುದೇವ್

ಮೈಸೂರು,ಜೂ.19(ಎಂಕೆ)–ಮಣ್ಣಿನ ಸಂರಕ್ಷಣೆಗಾಗಿ ಈಗಲೇ ಎಚ್ಚರಗೊಳ್ಳಬೇಕು. ಮುಂದಿನ 8–12 ವರ್ಷದೊಳಗೆ ಮಣ್ಣಿನ ರಕ್ಷಣೆ ಆಗಬೇಕು. ಇಲ್ಲದಿದ್ದರೆ ನಾಶವಾಗಿರುವ 27 ಸಾವಿರ ಪ್ರಭೇದಗಳ ಜೊತೆಗೆ ನಾವೂ ಸೇರಬೇಕಾಗುತ್ತದೆ ಎಂದು ಇಶಾ ಪ್ರತಿಷ್ಠಾನದ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ್ ಎಚ್ಚರಿಸಿದರು.

'ಮಣ್ಣು ಉಳಿಸಿ' ಅಭಿಯಾನದ ಅಂಗವಾಗಿ ಮೈಸೂರಿಗೆ ಆಗಮಿಸಿ, ಮೈಸೂರು ವಿವಿ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುವ ಸಮೂಹವನ್ನುದ್ದೇಶಿಸಿ ಮಾತನಾಡಿದ ಅವರು, 'ಮಣ್ಣು ಉಳಿಸಿ' ಅಭಿಯಾನದಲ್ಲಿ 28 ಸಾವಿರ ಕಿ.ಮೀ ಬೈಕ್ ರ್‍ಯಾಲಿ ನಡೆಸಿದ್ದು, 74 ದೇಶಗಳಲ್ಲಿನ ನಾಯಕರನ್ನು ಭೇಟಿ ಮಾಡಿ ಸಹಿ ಪಡೆಯಲಾಗಿದೆ. ಎಲ್ಲರೂ 'ಮಣ್ಣು ಉಳಿಸಿ' ಅಭಿಯಾನಕ್ಕೆ ಬೆಂಬಲ ನೀಡಿದ್ದು, ಮಣ್ಣಿನ ಸಂರಕ್ಷಣೆಗೆ ಭರವಸೆ ನೀಡಿದ್ದಾರೆ. ಅಲ್ಲದೆ ಕಳೆದ 2 ವರ್ಷಗಳಿಂದ ವಿಶ್ವದಲ್ಲಿನ ಪ್ರಖ್ಯಾತ ವಿಜ್ಞಾನಿಗಳನ್ನೂ ಭೇಟಿ ಮಾಡಿ ಮಣ್ಣಿನ ಸಂರಕ್ಷಣೆಯನ್ನು ಹೇಗೆ? ಮಾಡಬೇಕು. ಯಾವ ರೀತಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬಿತ್ಯಾದಿ ವಿಚಾರಗಳನ್ನು ಚರ್ಚಿಸಿದ್ದು, ಎಲ್ಲಾ ಅಂಶಗಳನ್ನು ದಾಖಲಿಸಿ, ರೈತರಿಗೆ ಹಾಗೂ ಎಲ್ಲರಿಗೂ ಮಣ್ಣಿನ ಅಗತ್ಯತೆ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದರು. ▶ 7ನೇ ಪುಟಕ್ಕೆ

ಪ್ರಕೃತಿ ಬಗ್ಗೆ ಅಪಾರ ಪ್ರೇಮ ಹೊಂದಿರುವ ಸದ್ಗುರು...

ಪ್ರಕೃತಿ, ಭೂ ಮಂಡಲದ ಬಗ್ಗೆ ಅಪಾರ ಪ್ರೇಮ ಹೊಂದಿರುವ ಸದ್ಗುರು ಜಗ್ಗಿ ವಾಸುದೇವ್, ಮಣ್ಣು ಉಳಿಸಿ ಅಭಿಯಾನದ ಮೂಲಕ ಹೊಸ ಸಾಹಸ ಮಾಡುತ್ತಿದ್ದಾರೆ. ಅವರ ಈ ಅಭಿಯಾನ ಪುಸ್ತಕದ ಹಾಳೆಗಳಿಗೆ ಸೀಮಿತವಾಗಿ ಉಳಿಯದೆ ಆಚರಣೆಗೆ ಬರಬೇಕು. ಈಗಾಗಲೇ ನದಿಗಳ ಉಳಿವು, ಕಾವೇರಿ ಕೂಗು ಅಭಿಯಾನ ನಡೆಸಿರುವ ಅವರು, ತಮ್ಮ 65ನೇ ವಯಸ್ಸಿನಲ್ಲೂ 45ನೇ ವಯಸ್ಸಿನವರಂತೆ ಉತ್ಸಾಹದಿಂದ ಎಲ್ಲರಿಗೂ ಸ್ಫೂರ್ತಿ ನೀಡುತ್ತಾ ವಿಶ್ವದ ಗಮನ ಸೆಳೆಯುತ್ತಿದ್ದಾರೆ.

–ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಮಾನಸಗಂಗೋತ್ರಿ ಬಯಲುರಂಗ ಮಂದಿರದಲ್ಲಿ ಭಾನುವಾರ ನಡೆದ ಮಣ್ಣು ಉಳಿಸಿ ಅಭಿಯಾನದಲ್ಲಿ ನೆರೆದಿದ್ದ ಜನಸ್ತೋಮ.

ಮಣ್ಣನ್ನು ಭೂತಾಯಿ ಎಂದು ಪೂಜಿಸುವುದು ನಮ್ಮ ಸಂಸ್ಕೃತಿ

ಮೈಸೂರು, ಜೂ.19(ಜಿಎ)– ಮಣ್ಣು ಯಾವತ್ತು ಭೋಗದ ವಸ್ತು ಅಲ್ಲ. ನಮ್ಮ ದೇಶದಲ್ಲಿ ಮಣ್ಣನ್ನು ಭೂತಾಯಿ ಎಂದು ಪೂಜಿಸುವ ಸಂಸ್ಕೃತಿ ಇತ್ತು. ಆ ಸಂಸ್ಕೃತಿಯ ಬಗ್ಗೆ ಸದ್ಗುರು ಅವರು ಮತ್ತೆ ಜನರಲ್ಲಿ ಜಾಗೃತಿ, ಪ್ರೀತಿ, ಅಭಿಮಾನ ಮೂಡಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗ ಮಂಟಪದಲ್ಲಿ ನಡೆದ 'ಮಣ್ಣು ಉಳಿಸಿ' ಅಭಿಯಾನದಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ಕಲ್ಲು ಮತ್ತು ಮಣ್ಣಿಗೆ ಪೂಜ್ಯನೀಯ ಸ್ಥಾನವನ್ನು ನೀಡುತ್ತಿದ್ದೇವೆ. ▶ 7ನೇ ಪುಟಕ್ಕೆ

ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುತ್ತಿದ್ದಾರೆ ಎಂದು ಮೈಸೂರನ್ನು ಸ್ವಚ್ಛಗೊಳಿಸಿಲ್ಲ. ಈ ಹಿಂದೆ 2019, 20, 21ನಲ್ಲಿಯೂ ಸ್ವಚ್ಛ ಮಾಡಿಸಿದ್ದೆ. ನೀವುಗಳು ಹೊಸಮನೆ ಕಟ್ಟಿಸುವಾಗ ಹಳೆ ಮನೆ ಕಟ್ಟಡದ ತ್ಯಾಜ್ಯವನ್ನು ರಿಂಗ್ ರೋಡ್‌ನಲ್ಲಿ ಹಾಕುತ್ತಿದ್ದೀರಿ ಹಾಗೂ ಕಸವನ್ನು ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಬಿಸಾಕುತ್ತೀರಿ. ದಯವಿಟ್ಟು ಈ ಕೆಲಸವನ್ನು ಮಾಡದಂತೆ ಪ್ರಜ್ಞೆಯನ್ನು ಬೆಳೆಸಿಕೊಳ್ಳಿ. ಅದಕ್ಕಾಗಿ ಘಟಕವನ್ನು ಮಾಡುತ್ತಿದ್ದೇವೆ ಅಲ್ಲಿಗೆ ಹಾಕಿ.

–ಪ್ರತಾಪ್ ಸಿಂಹ, ಮೈಸೂರು–ಕೊಡಗು ಸಂಸದ

ನಕ್ಕರೆ ಅದೇ ಸ್ವರ್ಗ

ಟೀಚರ್ : ಲೇ ಗುಂಡ, ಇವತ್ತು ಯಾಕೋ ಅರ್ಧ ಪ್ಯಾಂಟ್ ಹಾಕ್ಕೊಂಡು ಬಂದಿದ್ದೀಯಾ?

ಗುಂಡ : ಮೇಡಮ್ ಇವತ್ತು ಶನಿವಾರ ಅಲ್ವ, ಅರ್ಧ ದಿನ ಮಾತ್ರ ಶಾಲೆ, ಅದಕ್ಕೆ ಅರ್ಧ ಪ್ಯಾಂಟ್ ಹಾಕ್ಕೊಂಡು ಬಂದಿದ್ದೀನಿ.

ಟೀಚರ್ : ದಯವಿಟ್ಟು ಭಾನುವಾರದ ಸ್ಪೆಷಲ್ ಕ್ಲಾಸ್‌ಗೆ ಮಾತ್ರ ಬರಬೇಡಪ್ಪ.

ಮೈಸೂರು ಮಿತ್ರ

ಸೋಮವಾರ, 20 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ವಾದ ಮಾಡುವಾಗ ಬೈಯ್ಗುಳವನ್ನು ಬಳಸಬಾರದು, ತರ್ಕವನ್ನಷ್ಟೇ ಉಪಯೋಗಿಸಬೇಕು. ಏಕೆಂದರೆ ಮಳೆಯಿಂದ ಬೆಳೆಯೇ ಹೊರತು, ಗುಡುಗು–ಸಿಡಿಲುಗಳಿಂದಲ್ಲ...

–ವಾಲ್ಟೇರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಂಬಲಿ ಕುಡಿಯುವವನಿಗೆ ಮೀಸೆ ತಿರುವೋಕೆ ಒಬ್ಬ ಆಳು...

ನಿಮ್ಮ ಪತ್ರಗಳು

ಪ್ರತಿದಿನ 'ಅಪ್ಪಂದಿರ ದಿನ' ಆಚರಿಸೋಣ

ಮಾನ್ಯರೆ,

ಭಾನುವಾರ 'ವಿಶ್ವ ಅಪ್ಪಂದಿರ ದಿನಾಚರಣೆ'. ಎಲ್ಲೆಡೆ ಸಂಭ್ರಮ–ಸಡಗರದಿಂದ ಆಚರಿಸಿದ್ದನ್ನು ನೋಡಿ, ಕೇಳಿದ್ದೇವೆ. ಇದು ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ. ಇವತ್ತು ಫೇಸ್‌ಬುಕ್, ವಾಟ್ಸಾಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ತಂದೆಯ ಫೋಟೋಗಳನ್ನು ಹಾಕಿಕೊಂಡು ಹಾಡಿ ಹೊಗಳಿದ್ದನ್ನು ನೋಡಿದ್ದೇವೆ.

ಏಕೆ ವರ್ಷಕ್ಕೊಮ್ಮೆ ಮಾತ್ರ ಅಪ್ಪಂದಿರ ನೆನಪಾಗೋದು. ಬೇರೆ ದಿನಗಳಲ್ಲಿ ತಂದೆ ಬೇಡವೆ. ಇತ್ತೀಚಿನ ದಿನಗಳಲ್ಲಿ ತಂದೆ–ತಾಯಿಗೆ ಗೌರವ ಕೊಡದವರು ಕೂಡ ತೋರಿಕೆಗೆ ಮಾತ್ರ ಅಪ್ಪಂದಿರ ದಿನವನ್ನು ಆಚರಿಸುತ್ತಾರೆ. ಇದು ಯಾವ ಸೀಮೆ ಆಚರಣೆ. ನಿಜವಾಗಿಯೂ ತಂದೆಯ ಬಗ್ಗೆ ಗೌರವ ಇರುವವರು, ಅವರ ಶ್ರಮದ ಬಗ್ಗೆ ತಿಳಿದವರು ಪ್ರತಿನಿತ್ಯ ಅವರನ್ನು ಪ್ರೀತಿಸಿ, ಗೌರವದಿಂದ ಕಾಣಿ..., ಅವರ ಸೇವೆ ಮಾಡಿ, ಈ ಮೂಲಕ ಪ್ರತಿದಿನ ಅಪ್ಪಂದಿರ ದಿನವನ್ನು ಆಚರಿಸಿ, ತಂದೆ–ತಾಯಿಯನ್ನು ಗೌರವಿಸಿ, ಪ್ರೀತಿಸಿ, ಸೇವೆ ಮಾಡುವುದೇ ಭಾರತೀಯರ ಸಂಸ್ಕಾರ. ಇದನ್ನು ಯಾರೂ ಮರೆಯಬಾರದು ಎಂಬುದು ನನ್ನ ಮನವಿ.

ಎಷ್ಟೋ ಜನರಿಗೆ ತಂದೆ–ತಾಯಿ ಇಬ್ಬರು ಇರುವುದಿಲ್ಲ. ಅವರು ಅಂತಹವರ ಜೊತೆ ಭೌತಿಕವಾಗಿ ಇಲ್ಲದೆ ಇರಬಹುದು. ಆದರೆ ಮಾನಸಿಕವಾಗಿ ಅವರ ಜೊತೆಯಲ್ಲಿಯೇ ಇರುತ್ತಾರೆ. ಅವರನ್ನು ಸ್ಮರಿಸಿ, ನಾಲ್ಕು ಜನ ಹಿರಿಯ ಜೀವಗಳ ಸೇವೆ ಮಾಡಿದರೆ, ಅದು ಅಪ್ಪ–ಅಮ್ಮಂದಿರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ನಾವು ಭಾರತೀಯರು ನಮ್ಮ ಸಂಸ್ಕಾರ ಬಿಡದೆ ತಂದೆ–ತಾಯಿಯನ್ನು ಪ್ರತಿನಿತ್ಯ ಗೌರವಿಸಿ, ಪ್ರೀತಿಸಿ, ಸೇವೆ ಮಾಡುವ ಮೂಲಕ ಅವರ ಆಶೀರ್ವಾದ ಪಡೆಯುವ ಸಂಕಲ್ಪ ಮಾಡೋಣವೇ.....

– ಶಾರದಾ, ದಟ್ಟಗಳ್ಳಿ, ಮೈಸೂರು.

ಶಾಲಾ ಹಂತದಲ್ಲೇ ಯೋಗ ಕಲಿಸಿದರೆ ಒಳಿತು

ಮಾನ್ಯರೆ,

ಜೂನ್ 21 ಅಂತರರಾಷ್ಟ್ರೀಯ ಯೋಗ ದಿನ. ವಿಶ್ವಕ್ಕೆ ಯೋಗ ವಿಜ್ಞಾನವನ್ನು ಕೊಡುಗೆಯಾಗಿ ನೀಡಿದ ಹೆಮ್ಮೆ ನಮ್ಮ ಭಾರತ ದೇಶದ್ದು. ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯ ಭಾಗವಾಗಿ ಬಂದಿರುವ ಜೀವನ ವಿಧಾನ ಮತ್ತು ಜೀವನ ಕಲೆ.



ಔಷಧ ರಹಿತ ಜೀವನ ಸಾಗಿಸಲು ಶತಮಾನಗಳ ಹಿಂದೆಯೇ ಪತಂಜಲಿ ಮಹರ್ಷಿಯು ನಮಗೆಲ್ಲ ನೀಡಿದ ವರದಾನವೆಂದರೆ ತಪ್ಪಾಗಲಾರದು.

ಈ ಅತ್ಯಾಧುನಿಕ ಯುಗದಲ್ಲಿ ಯಾಂತ್ರಿಕ ಬದುಕಿನ ಪಯಣದಲ್ಲಿ ಎಲ್ಲರೂ ಒತ್ತಡದಿಂದ ಓಡುತ್ತಿದ್ದೇವೆ.

ಮಕ್ಕಳಿಂದ ವೃದ್ಧರವರೆಗೂ ಒಂದಲ್ಲ ಒಂದು ರೀತಿ ಮಾನಸಿಕ ಒತ್ತಡ ಖಿನ್ನತೆ, ದೈಹಿಕ ತೊಂದರೆಗಳು ಇದ್ದೇ ಇರುತ್ತದೆ... ಇವುಗಳಿಂದ ಹೊರಬರಲು ದೈಹಿಕ ಮಾನಸಿಕ ಆರೋಗ್ಯವನ್ನು ಗಳಿಸಿಕೊಳ್ಳಲು ಹಾಗೂ ಉಳಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಯೋಗಾಭ್ಯಾಸ.

ಶಾಲಾ ಹಂತದಲ್ಲೇ ಮಕ್ಕಳಿಗೆ ಯೋಗವನ್ನು ಒಂದು ವಿಷಯವಾಗಿ ಕಲಿಸಿ ಬೋಧಿಸಿದರೆ ಮುಂದೆ ಸದೃಢ ಆರೋಗ್ಯವಂತ ಸಮಾಜ ನಿರ್ಮಾಣವಾಗುವುದು ಖಚಿತ. ಯೋಗದ ವೈಜ್ಞಾನಿಕ ಮಹತ್ವವನ್ನು ಅರಿತು ಇಡೀ ವಿಶ್ವವೇ ಒಪ್ಪಿ ಅಳವಡಿಸಿಕೊಂಡಿರುವಾಗ ನಾವುಗಳು ಯೋಗವನ್ನು ಮತ್ತಷ್ಟು ಪ್ರಚಲಿತಗೊಳಿಸಿ ಅಳವಡಿಸಿಕೊಂಡಾಗ ಅದು ಕೇವಲ ಹಿತ್ತಲ ಗಿಡವಾಗದೇ ಮದ್ದಾಗುವುದರಲ್ಲಿ ಸಂಶಯವಿಲ್ಲ...

– ಪುಷ್ಪಲತಾ ಫಣಿರಾಜ್
ಅಗ್ರಹಾರ ಮೈಸೂರು

ಆತ್ಮಹತ್ಯೆಯೇ ಪರಿಹಾರವಲ್ಲ...

ಮಾನ್ಯರೆ,

2022ರ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ಫಲಿತಾಂಶ ಹೊರಬಿದ್ದಿದೆ. ಕೆಲವರಿಗೆ ನಿರೀಕ್ಷಿತ ಅಂಕಗಳು ದೊರೆತರೆ, ಮತ್ತೆ ಕೆಲವರಿಗೆ ಸಿಕ್ಕಿಲ್ಲ. ಹಾಗಂತ ಮರ್ಯಾದೆ, ಅವಮಾನ ಅಂತೆಲ್ಲಾ ದುಡುಕಿನ ನಿರ್ಧಾರ ತೆಗೆದುಕೊಳ್ಳುವ ಮುನ್ನ ನಿಮ್ಮ ಆತ್ಮೀಯ ಸ್ನೇಹಿತರಿಗೆ ಮತ್ತು ಸಂಬಂಧಿಕರಿಗೆ ಫೋನ್ ಮಾಡಿ, ಇಲ್ಲ ಅವರನ್ನು ಹುಡುಕಿಕೊಂಡು ಹೋಗಿ. ಮನೆಯವರಿಗೂ ತಿಳಿಸಿ ನಾನು ಅಲ್ಲೇ ಉಳಿದು ನಾಳೆ ಬರುವೆನು ಎಂದು ಹೋಗಿ, ವಾತಾವರಣ ಬದಲಾಗಿರಲಿ. ಅದು ಬಿಟ್ಟು ಆತ್ಮಹತ್ಯೆ ಅಂತಹ ಪಾಪ ಕೃತ್ಯಕ್ಕೇಕೆ ಬಲಿಯಾಗುವಿರಿ.

ಒಮ್ಮೆ ನಿಮ್ಮ ಪೋಷಕರ ಸ್ಥಿತಿಯನ್ನು ಗಮನಿಸಿದ್ದೀರಾ, ನೀವು ಅವರನ್ನ ಶಾಶ್ವತವಾಗಿ ಬಿಟ್ಟು ಹೋಗಿಬಿಡುವಿರಿ, ಆದರೆ ಅವರ ದುಃಖವನ್ನು ಅಳೆಯಬಲ್ಲಿರ ಹೇಳಿ... ಚಿಕ್ಕಂದಿನಿಂದ ಪಾಲನೆ–ಪೋಷಣೆ ಮಾಡಿ ಯಾವುದರಲ್ಲೂ ಕಡಿಮೆ ಮಾಡದೇ, ಸಾಕಿ ಸಲುಹಿ ನಿಮ್ಮ ಭವಿಷ್ಯವನ್ನು ರೂಪಿಸುವಲ್ಲಿ ಸಹಕಾರ ನೀಡುವ ತಂದೆ, ತಾಯಿ, ಪೋಷಕರಿಗೆ ನೀವು ಈ ರೀತಿ ಮಾಡುವ ಅನ್ಯಾಯಕ್ಕೆ ನಿಮಗೆ ಕ್ಷಮೆಯಿಲ್ಲ. ನಿಮ್ಮ ಭವಿಷ್ಯವನ್ನು ನೆನೆಸಿ ಕಂಡಿರುವ ಅವರ ಅದೆಷ್ಟೋ ಕನಸುಗಳಿಗೆ ಬೆಂಕಿಹಚ್ಚಿ ಹೋಗುವ ನೀವು ಅವರನ್ನು ಒಮ್ಮೆ ನೆನೆಸಿಕೊಳ್ಳಿರಿ.

ಈಗ ಅಂಕ ಕಡಿಮೆ ಬಂದರೇನು, ವಿದ್ಯಾಭ್ಯಾಸ ಇಲ್ಲಿಗೆ ಮುಗಿದುಹೋಯಿತೆ, ಮುಂದೆ ಪದವಿಯಲ್ಲಿ ಆ ತಪ್ಪುಗಳನ್ನು ಸರಿಮಾಡಿಕೊಳ್ಳಿ. ಪರೀಕ್ಷೆಯಲ್ಲಿ ಫೇಲಾದವರೇ ಮುಂದೆ ತಮ್ಮ ಜೀವನದಲ್ಲಿ ಪಾಸ್ ಆಗಿರುವುದು.

ಪೋಷಕರೇ, ನೀವು ಸಹ ಅವರೊಂದಿಗೆ ಸ್ನೇಹಿತರ ಹಾಗೇ ನೋಡಿಕೊಳ್ಳಿ. ಮಕ್ಕಳು ಫೇಲಾದರೆ ಪಾಸಾದವರ ಬಗೆಗೆ ಹೋಲಿಸಿ ಹೀಯಾಳಿಸಬೇಡಿ. ಮತ್ತೆ ಬರೆ, ಪಾಸಾಗ್ತೀಯ ಅಂತ ಧೈರ್ಯ ತುಂಬಿ ಅವರಿಗೆ ತಿಳಿಹೇಳಿ. ಅವರಿಷ್ಟದಂತೆ ಇರಲು ಬಿಡಿ. ಒಂದು ವಾರ ಅವರನ್ನು ಕೇರ್ ಮಾಡಿ. ಅವರಿಷ್ಟದಂತೆ ನಡೆದುಕೊಳ್ಳಿರಿ. ಅವರಿಗೆ ಯಾವುದೇ ಕಾರಣಕ್ಕೂ ಒಬ್ಬಂಟಿ ಇರಬೇಡವೆಂದು ತಿಳಿಸಿ. ಎರಡು ದಿನದ ಮಟ್ಟಿಗೆ ಅವರನ್ನು ಯಾವುದಾದರೂ ಪ್ರವಾಸಕ್ಕೆ ಕರೆದುಕೊಂಡು ಹೋಗಿ. ಮಕ್ಕಳಿಗಿಂತ ಆಸ್ತಿ ಮಾಡ್ತೀವೆ, ಮಕ್ಕಳನ್ನೇ ಆಸ್ತಿ ಎನ್ನುವುದನ್ನೇ ಮರೆತು ಪ್ರಾಯದಲ್ಲಿ ಕಳೆದುಕೊಂಡು ನಿರಂತರ ಕೊರಗುವುದು ಏಕೆ ಬೇಕು ಅಲ್ಲವೇ... ಯೋಚಿಸಿ...

– ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಲೂಕು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ

ಮೈಸೂರಿಗೆ ಯೋಗಾ ಯೋಗ...



ಯೋಗ ಎಂಬೆರಡು ಅಕ್ಷರಗಳು 'ಯುಜ್' ಎಂಬ ಸಂಸ್ಕೃತದ ಮೂಲ ಧಾತುವಿನಿಂದ ಬಂದಿದ್ದು, ಇದರ ಅರ್ಥ ಜೋಡಿಸುವುದು, ಸೇರಿಸುವುದು, ಒಟ್ಟಾಗಿ ಕೂಡಿಸುವುದು ಎಂಬುವುದಾಗಿದೆ. ಯೋಗವು ಅನಾರೋಗ್ಯವನ್ನು ಆರೋಗ್ಯವಾಗಿ ಪರಿವರ್ತಿಸುವ ಕ್ರಿಯೆಯಾಗಿದೆ. ನಮ್ಮೊಳಗೆ ಸುಪ್ತವಾಗಿರುವ ದಿವ್ಯತ್ವವನ್ನು ಅಭಿವ್ಯಕ್ತಗೊಳಿಸಿ ಆತ್ಮ ಸಾಕ್ಷಾತ್ಕಾರದ ಕಡೆಗೆ ಮುನ್ನಡೆಯಲು ಇರುವ ವ್ಯವಸ್ಥಿತ ಮಾರ್ಗವೇ ಯೋಗ. ಯೋಗ ಸಾಧನೆಯಲ್ಲಿ ಭಕ್ತಿ, ಶ್ರದ್ಧೆ, ಕಾರ್ಯ–ಕುಶಲತೆ ಮನೋಸ್ಥೈರ್ಯಗಳ ಏಕತ್ರ ಸಂಬಂಧದಿಂದ ಯೋಗ ಸಾಧಕರಾಗಬಹುದು. ಯೋಗ ವಿದ್ಯೆಗೆ ಸನಾತನ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ಯೋಗ ಶಾಸ್ತ್ರವು ಅತೀ ಪ್ರಾಚೀನ ಭಾರತೀಯ ಶಾಸ್ತ್ರ. ಇದು ಶ್ರೀ ಬ್ರಹ್ಮದೇವನಿಂದ ಮಾನವರಿಗೆ ದೊರೆತ ವರವಾಗಿದೆ. ಬುದ್ಧಿ, ಮನಸ್ಸು ಹಾಗೂ ಭಾವನೆಗಳ ಸಂಯಮವೂ ಸಹ ಯೋಗವೇ ಆಗಿದೆ. ಮಾನವನ ಶರೀರ ಮತ್ತು ಆತ್ಮವನ್ನು ಯೋಗದಿಂದಷ್ಟೇ ಸಂಯಮೀಕರಿಸಬಹುದು. ಎಲ್ಲಾ ಚಿಂತನೆಗಳನ್ನು ಬಿಟ್ಟು ನಿಶ್ಚಿಂತೆಯಿಂದ ಇರುವುದೇ ಯೋಗ ಎಂದು ಪರಮಾತ್ಮನು ಶ್ರೀ ಭಗವದ್ಗೀತಾದಲ್ಲಿ ಹೇಳಿದ್ದಾನೆ. ಗಂಡು–ಹೆಣ್ಣಾಗಲೀ, ಪ್ರಾಯದವರಾಗಲಿ–ವೃದ್ಧರಾಗಲೀ, ರೋಗಿಗಳಾಗಲಿ–ಆರೋಗ್ಯವಂತರಾಗಿರಲೀ ಎಲ್ಲರೂ ಯೋಗ ಸಾಧನೆಗೆ ಅರ್ಹರಾಗಿರುತ್ತಾರೆ. ಹಗುರ ಶರೀರ ಮತ್ತು ಲವಲವಿಕೆ, ಕೆಲಸ ಮಾಡಲು ಉಲ್ಲಾಸ, ಅನವಶ್ಯಕ ಕೊಬ್ಬನ್ನು ಕರಗಿಸುವುದು, ಸರ್ವ ಅಂಗಾಂಗಳು ಪ್ರಮಾಣಬದ್ಧವಾಗಲು ಮತ್ತು ಶಕ್ತಿ ಹೊಂದಲು ಯೋಗ ಸಹಕಾರಿ. ಈ ಗುಣಗಳೆಲ್ಲವು ನಿತ್ಯ ಯೋಗಾಭ್ಯಾಸದಿಂದ ದೊರಕುತ್ತದೆ. ದೇಹದಾರ್ಢ್ಯ ಶರೀರ, ಆರೋಗ್ಯ, ಬುದ್ದಿಯ ವಿಕಾಸ, ಮನಸ್ಸಿನ ಸಂಯಮ, ಚಿತ್ತೈಕಾಗ್ರತೆ, ದೀರ್ಘಾಯಸ್ಸು, ಬ್ರಹ್ಮಚರ್ಯೆ ಇವುಗಳನ್ನು ಪಡೆಯಲು ಸಹಾಯಕವಾಗುವ ಪ್ರಯತ್ನಕ್ಕೆ ನಿರಂತರ ಶ್ರದ್ಧಾಪೂರಕ ಯಾಗಾಭ್ಯಾಸವೇ ದಿವ್ಯೌಷಧ.

ಒಬ್ಬ ವ್ಯಕ್ತಿಯ ವಿಕಾಸವು ಅವರವರು ಅನುಸರಿಸುವ ಶೈಲಿಯ ಯೋಗಾಭ್ಯಾಸದ ಮೇಲೆ ಅವಲಂಬಿತವಾಗಿರುತ್ತದೆ. ಸಾಮಾನ್ಯ ವ್ಯಕ್ತಿಗಳಲ್ಲಿ ಮೂರು ಬಗೆಯ ಸ್ವಭಾವಗಳುಂಟು. ಅದೇ ಸಾತ್ವಿಕ, ತಾಮಸ ಮತ್ತು ರಜೋಗುಣಗಳು. ಬೇರೆ ಬೇರೆ ಸ್ವಭಾವದ ವ್ಯಕ್ತಿಗಳಲ್ಲಿ ಶೀಘ್ರ ವ್ಯಕ್ತಿತ್ವದ ಬದಲಾವಣೆಗಾಗಿ ಬೇರೆ ಬೇರೆ ಶೈಲಿಯ ಯೋಗಾಭ್ಯಾಸದ ಅವಶ್ಯಕತೆ ಇರುತ್ತದೆ.

:ಸೂರ್ಯ ನಮಸ್ಕಾರ:

ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ಗ್ರಹಗಳಲ್ಲಿ ವಿಶಿಷ್ಟತೆಯು ಪರಿಸರದತ್ತವಾಗಿದ್ದು ಅವೆಲ್ಲದರ ಪ್ರಮುಖ ಜೀವನಾಡಿ ಹಾಗೂ ತೇಜೋವಂತವಾದುದು ಸೂರ್ಯ. ತೇಜಸ್ಸು, ಶಕ್ತಿಯನ್ನು ಪಡೆಯಲು ಸೂರ್ಯೋಪಾಸನೆ ಉತ್ತಮ ಮಾಧ್ಯಮ. ಅದಕ್ಕಾಗಿ ಸೂರ್ಯ ನಮಸ್ಕಾರವನ್ನು ಉಪಾಸನ ವಿಧಿ ಎಂದು ಕರೆಯಲಾಗಿದೆ. ಸೂರ್ಯ ನಮಸ್ಕಾರ ವ್ಯಾಧಿಗಳು ಬರುವುದನ್ನು ತಡೆಯುವುದಷ್ಟೇ ಅಲ್ಲ, ಮಹಾವ್ಯಾಧಿಗಳನ್ನು ಗುಣಪಡಿಸಬಲ್ಲದು. ಸೂರ್ಯ ನಮಸ್ಕಾರದಿಂದ ಮೊದಲ್ಗೊಂಡು ಶವಾಸನದವರೆಗೆ ಒಟ್ಟು ಐವತ್ತನಾಲ್ಕು ಆಸನಗಳನ್ನು ಕ್ರಮಬದ್ಧವಾಗಿ ಸೂಕ್ತ ಗುರುಗಳ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುವುದು ಉತ್ತಮ.

ಕ್ರಿ.ಪೂ. 200 ವರ್ಷಗಳಿಗೂ ಮುಂಚೆಯೇ ಶ್ರೀ ಪತಂಜಲಿ ಮಹರ್ಷಿಗಳು ಯೋಗ ಶಾಸ್ತ್ರವನ್ನು ಸೂಕ್ತಬದ್ಧವಾಗಿ ಆಸ್ತಿಕ ಲೋಕಕ್ಕೆ ಕ್ರಿಯಾ ಯೋಗದ ಮೂಲಕ ಸರಳವಾಗಿ ಮಾರ್ಗದರ್ಶನ ನೀಡಿದ್ದಾರೆ. ಆದುದರಿಂದ ಶ್ರೀ ಪತಂಜಲಿ ಮಹರ್ಷಿಯನ್ನು ಯೋಗದ ಮೂಲ ಪುರುಷರೆಂದು ಹೇಳಲಾಗುತ್ತದೆ. ಶ್ರೀ ಪತಂಜಲಿ ಮಹರ್ಷಿಗಳ ಜನನದ ಬಗ್ಗೆ ಬಹು ಸೂಚ್ಯತವಾದ ಕತೆಯಿದೆ. ಇವರ ತಾಯಿ ಗೋಣಿಕರವರು ಶ್ರದ್ಧಾ–ಭಕ್ತಿ ಹಾಗೂ ಸಂಸ್ಕಾರಸ್ಥರಾಗಿದ್ದರು. ಒಂದು ದಿನ ನದಿಯಲ್ಲಿ ಸ್ನಾನ ಮಾಡುವಾಗ ಗೋಣಿಕ ಸೂರ್ಯ ದೇವನಿಗೆ ಪ್ರಾರ್ಥಿಸುತ್ತಾ "ಓ ದೇವರೇ, ದಯವಿಟ್ಟು ನನಗೆ ಪ್ರಕಾಶಮಾನವಾದ ಒಬ್ಬ ಮಗನನ್ನು ಕರುಣಿಸು" ಎಂದು ಪ್ರಾರ್ಥಿಸಿದಳು. ಸೂರ್ಯದೇವನು ಗೋಣಿಕಳಾ ಪ್ರಾರ್ಥನೆಗೆ ಸಂತೃಪ್ತಿಯಾಗಿ ಶೇಷನಾದ ಅನಂತನಿಗೆ ಅವಳ ಮಗನಾಗಿ ಜನಿಸುವಂತೆ ಆದೇಶಿಸುತ್ತಾನೆ. ತಕ್ಷಣ ಶೇಷನು ಒಂದು ಸಣ್ಣ ಹಾವಾಗಿ ಗೋಣಿಕಾಳ ಮುಗಿದ ಕೈಗಳ ಬೊಗಸೆಯಲ್ಲಿ ಬೀಳುತ್ತಾನೆ.

"2014ರ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮೊದಲ ಬಾರಿಗೆ ಯೋಗ ದಿನಾಚರಣೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸುವ ಕುರಿತಾಗಿ ಮಾನ್ಯ ಪ್ರಧಾನಿ ನರೇಂದ್ರ ಮೋದಿಯವರು ಪ್ರಸ್ತಾಪ ಮಾಡಿದ್ದರು. ಹಾಗೂ ಉತ್ತರಗೋಳಾರ್ಧದಲ್ಲಿ ವರ್ಷದ ಅತೀ ದೀರ್ಘ ದಿನವಾದ ಜೂನ್ 21 ರಂದು ಪ್ರಕೃತಿಗೆ ಗೌರವ ಸಲ್ಲಿಸುವ ನಿಮಿತ್ತವಾಗಿ ಆ ದಿನವನ್ನು ಆಯ್ಕೆ ಮಾಡಿ ಅಂತರರಾಷ್ಟ್ರೀಯ ಯೋಗ ದಿನವಾಗಿ ಆಚರಿಸುವಂತೆ ಸೂಚಿಸಿದ್ದರು. ಅಂತೆಯೇ ಜೂನ್ 21, 2015ರಂದು ಮೊದಲ ಬಾರಿಗೆ ವಿಶ್ವಮಟ್ಟದಲ್ಲಿ ಯೋಗ ದಿನವನ್ನು ವರ್ಷಂಪ್ರತಿ ಆಚರಿಸಲು ವಿಶ್ವ ಸಂಸ್ಥೆಯಲ್ಲಿ ತೀರ್ಮಾನಿಸಿ ಆಚರಿಸಲಾಯಿತು. ಅಂದು ವಿಶ್ವ ಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 177 ಸದಸ್ಯ ರಾಷ್ಟ್ರಗಳು ಅನುಮೋದನೆ ನೀಡಿದ್ದು ವಿಶ್ವ ಸಂಸ್ಥೆಯಲ್ಲೇ ಒಂದು ಐತಿಹಾಸಿಕ ತೀರ್ಮಾನವಾಗಿದೆ.

ಈ ಹಾವು ಸುಂದರ ಮಗುವಾಗಿ ಬದಲಾವಣೆ ಹೊಂದುತ್ತದೆ. ಗೋಣಿಕಾಳಿಗೆ ಆಶ್ಚರ್ಯವಾಗಿ ಮಗುವಿಗೆ ಪತ ಅಂಜಲಿ, ಪತ ಎಂದರೆ ಬಿದ್ದ, ಅಂಜಲಿ ಎಂದರೆ ಕೈಮಡುಚಿದ ಪ್ರಾರ್ಥನೆಯ ಹಸ್ತ ಎಂದು ಹೆಸರಿಸುತ್ತಾರೆ. ಪತಂಜಲಿಯು ಶ್ರೀಬ್ರಹ್ಮದೇವನ ಕೃಪೆಯಿಂದ ದಿವ್ಯ ಶಕ್ತಿಯನ್ನು ಹೊಂದಿ ಮಹಾ ವೇದಾಂತಿ ಹಾಗೂ ಜ್ಞಾನಿಯಾಗಿ ಬೆಳೆದು ಮಾನವ ಕುಲಕ್ಕೆ ಯೋಗ ಸೂತ್ರವನ್ನು ನೀಡಿದ್ದಾರೆ. ನಿರ್ದಿಷ್ಟವಾದ ಒಂದು ಗುರಿ ತಲುಪಲು ವಿವಿಧ ಮಾರ್ಗಗಳು ಇರುವಂತೆಯೇ ಜೀವಾತ್ಮ, ಪರಮಾತ್ಮ ಸಂಯೋಗ ಹೊಂದಲು ಹಲವಾರು ಮಾರ್ಗಗಳಿವೆ. ಅವುಗಳಲ್ಲಿ ಕರ್ಮಯೋಗ, ಭಕ್ತಿಯೋಗ, ಜ್ಞಾನ ಯೋಗ ಹಾಗೂ ರಾಜಯೋಗ ಇವು ಪ್ರಮುಖವಾಗಿವೆ. ಶ್ರೀ ಪತಂಜಲಿ ಮಹರ್ಷಿಗಳು ರಾಜಯೋಗದಲ್ಲಿ ಎಂಟು ಮೆಟ್ಟಿಲುಗಳನ್ನು ಸೂಚಿಸಿದ್ದಾರೆ. ಆದ್ದರಿಂದಲೇ ರಾಜಯೋಗವನ್ನು ಅಷ್ಟಾಂಗ ಯೋಗ, ಅಷ್ಟಾಂಗ ಮಾರ್ಗ ಎಂದೂ ಕರೆಯಲಾಗಿದೆ. ಈ ಎಂಟು ಮೆಟ್ಟಿಲುಗಳೆಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಹಾಗೂ ಸಮಾಧಿ ಆಗಿದೆ.

:ಹಿತ್ತಲಗಿಡ ಮದ್ದಲ್ಲ:

ಹಿತ್ತಲಗಿಡ ಮದ್ದಲ್ಲ ಎಂಬ ನಾಣ್ನುಡಿಯಂತೆ, ಅದು ಮದ್ದಾಗುವುದು ಹೊರಗಿನವರು ಆ ಗಿಡವನ್ನು ಆರಿಸಿಕೊಂಡಾಗ. ಯೋಗ ಮತ್ತು ಆಯುರ್ವೇದ ಮೊಟ್ಟ ಮೊದಲು ಪ್ರಾರಂಭವಾಗಿದ್ದು ಭಾರತದಲ್ಲೇ ಎಂಬುದು ಹೆಮ್ಮೆಯ ವಿಷಯ. ವಿದೇಶಿಯರು ತಮ್ಮ ಆತ್ಮಶಾಂತಿ, ದೇಹಸ್ವಾಸ್ಥಕ್ಕಾಗಿ ಭಾರತದ ಯೋಗ ವಿದ್ಯೆಯ ಕಡೆ ತಿರುಗಿ ನೋಡುತ್ತಿರುವಾಗ, ನಮಗೆ ನಮ್ಮಲ್ಲೊಂದು ಇಂತಹ ಸನಾತನ ಮಹಾ ವಿದ್ಯೆ ಇದೆ ಎಂಬ ಅಚ್ಚರಿ ಉಂಟಾಗಿದೆ.





ಶ್ರೀ ಪತಂಜಲಿ ಮಹರ್ಷಿಯ ನಂತರ ಅನೇಕರು ಯೋಗ ವಿದ್ಯೆಯನ್ನು ಪರಂಪರಾನುಗತವಾಗಿ ಮುಂದುವರಿಸಿದ್ದಾರೆ. ಅವರುಗಳಲ್ಲಿ ಶ್ರೇಷ್ಠರಾದ ಶ್ರೀ ಸ್ವಾಮಿ ವಿವೇಕಾನಂದರು, ಸ್ವಾಮಿ ಶಿವಾನಂದ ಸರಸ್ವತಿಜೀ, ಶ್ರೀ ಪರಮಹಂಸ ಯೋಗಾನಂದಜೀ, ಶ್ರೀ ಸದಾಶಿವ ಬ್ರಹ್ಮೇಂದ್ರರು, ಧಾರನಗರದ ಮಹಾರಾಜ ಭೋಜರಾಜ ಪ್ರಭು, ಮೈಸೂರು ಸಂಸ್ಥಾನದ ಪ್ರಭು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಪ್ರೋತ್ಸಾಹ ಹಾಗೂ ಅವರು ರಚಿಸಿದ ಶ್ರೀತತ್ವನಿಧಿ ಗ್ರಂಥದಲ್ಲಿಯೂ ಸಹ ಯೋಗದ ಬಗ್ಗೆ ಉಲ್ಲೇಖಿಸಿದಂತೆ ಕಂಡು ಬರುತ್ತದೆ. ಇತ್ತೀಚೆಗಿನ ಮಲ್ಲಾಡಹಳ್ಳಿಯ ಶ್ರೀ ರಾಘವೇಂದ್ರ ಸ್ವಾಮೀಜಿ, ಯೋಗಾಚಾರ್ಯ ಬಿ.ಕೆ.ಎಸ್ ಅಯ್ಯಂಗಾರ್, ತಪಸ್ವಿನಿ ರಮಾಮಣಿ ಅಯ್ಯಂಗಾರ್, ಯೋಗಗುರು ಬಾಬಾ ರಾಮ್‌ದೇವ್, ರಾಷ್ಟ್ರೋತ್ಥಾನದ ಶ್ರೀ ಅಜಿತ್ ಕುಮಾರ್‌ಜೀ, ಮೈಸೂರಿನ ವಿಶ್ವ ಪ್ರಖ್ಯಾತ ಯೋಗಾಚಾರ್ಯರುಗಳಾದ ಶ್ರೀ ಪಟ್ಟಾಭಿ ಜೋಯಿಸ್, ಎಂ.ಟಿ ಕೃಷ್ಣಮಾಚಾರ್ಯ, ಬಿ.ಎನ್.ಸುಂದರರಾಜ ಅಯ್ಯಂಗಾರ್, ಡಾ. ಹೆಚ್.ಎಸ್ ಕೇಶವಮೂರ್ತಿ, ಡಾ. ಗಣೇಶ್ ಕುಮಾರ್‌ರವರುಗಳು ಯೋಗ ವಿದ್ಯೆಯನ್ನು ಮುಂದಿನ ಜನಾಂಗಕ್ಕೂ ಜೀವಂತವಾಗಿಸಿರುವುದು ಹೆಮ್ಮೆಯ ವಿಷಯ.



– ನಂ.ಶ್ರೀಕಂಠಕುಮಾರ್
ಮೊ : 9481067333

:ಅಂತರರಾಷ್ಟ್ರೀಯ ಯೋಗ ದಿನಾಚರಣೆ:

2014ರ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮೊದಲ ಬಾರಿಗೆ ಯೋಗ ದಿನಾಚರಣೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸುವ ಕುರಿತಾಗಿ ಮಾನ್ಯ ಪ್ರಧಾನಿ ನರೇಂದ್ರ ಮೋದಿಯವರು ಪ್ರಸ್ತಾಪ ಮಾಡಿದ್ದರು. ಹಾಗೂ ಉತ್ತರಗೋಳಾರ್ಧದಲ್ಲಿ ವರ್ಷದ ಅತೀ ದೀರ್ಘ ದಿನವಾದ ಜೂನ್ 21 ರಂದು ಪ್ರಕೃತಿಗೆ ಗೌರವ ಸಲ್ಲಿಸುವ ನಿಮಿತ್ತವಾಗಿ ಆ ದಿನವನ್ನು ಆಯ್ಕೆ ಮಾಡಿ ಅಂತರರಾಷ್ಟ್ರೀಯ ಯೋಗ ದಿನವಾಗಿ ಆಚರಿಸುವಂತೆ ಸೂಚಿಸಿದ್ದರು. ಅಂತೆಯೇ ಜೂನ್ 21, 2015ರಂದು ಮೊದಲ ಬಾರಿಗೆ ವಿಶ್ವಮಟ್ಟದಲ್ಲಿ ಯೋಗ ದಿನವನ್ನು ವರ್ಷಂಪ್ರತಿ ಆಚರಿಸಲು ವಿಶ್ವ ಸಂಸ್ಥೆಯಲ್ಲಿ ತೀರ್ಮಾನಿಸಿ ಆಚರಿಸಲಾಯಿತು. ಅಂದು ವಿಶ್ವ ಸಂಸ್ಥೆಯ 193 ಸದಸ್ಯ ರಾಷ್ಟ್ರಗಳ ಪೈಕಿ 177 ಸದಸ್ಯ ರಾಷ್ಟ್ರಗಳು ಅನುಮೋದನೆ ನೀಡಿದ್ದು ವಿಶ್ವ ಸಂಸ್ಥೆಯಲ್ಲೇ ಒಂದು ಐತಿಹಾಸಿಕ ತೀರ್ಮಾನವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಯೋಗ ದಿನಾಚರಣೆಯನ್ನು ಆಸಕ್ತಿ ವಹಿಸಿ ತಾವೇ ಬಾಗವಹಿಸಿ ಆಚರಣೆಗೆ ಹೆಚ್ಚಿನ ಮೆರಗನ್ನು ನೀಡುತ್ತಾ ಬಂದಿರುವುದು ಸಂತೋಷದ ವಿಷಯ.


ಈ ವರ್ಷ ದೇಶಾದ್ಯಂತ ಆಚರಿಸುತ್ತಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 75 ಪ್ರಮುಖ ಸ್ಥಳಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲು ಕೇಂದ್ರ ಸರ್ಕಾರ ನಿರ್ದರಿಸಿದ್ದು ಪ್ರಮುಖವಾಗಿ ಮೈಸೂರು ನಗರದ ವಿಶ್ವವಿಖ್ಯಾತ ಅರಮನೆ ಅಂಗಳದಲ್ಲಿನ ಯೋಗಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿರವರು ನೇತೃತ್ವ ವಹಿಸಲಿದ್ದು ಮೈಸೂರಿನ ಜನತೆಗೆ ಸಂತಸ ತಂದಿದೆ. ಅಂತೆಯೇ ರಾಜ್ಯದಲ್ಲಿ ವಿವಿಧ ಐತಿಹಾಸಿಕ ಸ್ಥಳಗಳಾದ ಹಂಪಿ, ಪಟ್ಟದಕಲ್ಲು, ಹಳೇಬೀಡು ಮತ್ತು ಗೋಳಗುಮ್ಮಟದಲ್ಲಿಯೂ ಸಹ ವಿಶೇಷವಾಗಿ ಯೋಗ ದಿನಾಚರಣೆಯನ್ನು ಆಚರಿಸುತ್ತಿರುವುದು ರಾಜ್ಯದ ಯೋಗಾಸಕ್ತರಲ್ಲಿ ಸಂತಸ ಮೂಡಿದೆ.

ಮೈಸೂರಲ್ಲಿ ಯೋಗ ವಿವಿ ಸ್ಥಾಪನೆಯಾದರೆ ಯೋಗಕ್ಕೆ ಸುಯೋಗ

ಮೈಸೂರು ಯೋಗ ನಗರಿ ಎಂದೇ ಪ್ರಪಂಚದ ಭೂಪಟದಲ್ಲಿ ಪ್ರಸಿದ್ಧ. ಮೈಸೂರಿನಲ್ಲಿ ಸುಮಾರು 100ಕ್ಕೂ ಹೆಚ್ಚು ಯೋಗ ತರಬೇತಿ ಕೇಂದ್ರಗಳಿದ್ದು, 20000ಕ್ಕೂ ಹೆಚ್ಚು ಮಂದಿ ನಿತ್ಯ ಯೋಗ ಕಲಿಯುತ್ತಿದ್ದಾರೆ. ಪ್ರತಿ ವರ್ಷ ಸುಮಾರು 5000 ರಿಂದ 6000 ವಿದೇಶೀಯರು ಮೈಸೂರಿನಲ್ಲಿ ಯೋಗ ತರಬೇತಿ ಪಡೆದು ವಿಶ್ವದಾದ್ಯಂತ ಪಸರಿಸುತ್ತಿದ್ದಾರೆ. ಆದರೂ ಯಾವುದೇ ಅಧಿಕೃತ ಕೋರ್ಸ್ ಇಲ್ಲದಿರುವುದರಿಂದ ಶತಮಾನ ಪೂರೈಸಿರುವ ನಮ್ಮ ಹೆಮ್ಮೆಯ ಮೈಸೂರು ವಿಶ್ವವಿದ್ಯಾನಿಲಯದ ಗರಿಮೆಗೆ ಕಿರೀಟವಿದ್ದಂತೆ ರಾಜ್ಯದ ಮೊದಲ 'ಯೋಗ ವಿಶ್ವ ವಿದ್ಯಾಲಯ'ವು ಮೈಸೂರಿನಲ್ಲಿ ಸ್ಥಾಪನೆಯಾದರೆ ಜಾಗತಿಕ ಮಟ್ಟದಲ್ಲಿ ಮೈಸೂರಿನ ಹಿರಿಮೆ ಹೆಚ್ಚಾಗುವುದರಲ್ಲಿ ಸಂಶಯವೇ ಇಲ್ಲ.

ಪದ್ಮಾಸನದಲ್ಲಿ ಕುಳಿತು, ಕಣ್ಣು ಮುಚ್ಚಿ 'ಯೋಗ' ಎಂಬುದನ್ನು ಮನಸಿನಲ್ಲೇ ಕಲ್ಪಿಸಿಕೊಂಡರೆ ನಿಮ್ಮ ಕಣ್ಣು ಮುಂದೆ ಬರುವ ಚಿತ್ರ ಯಾವುದು ಟಿವಿಯಲ್ಲಿ ಬರುವ ಒಬ್ಬ ಭಾರತದ ವ್ಯಕ್ತಿಯಾಗಿರಬಹುದು (ಬಾಬಾ ರಾಮದೇವ್, ಫಿಲಂ ತಾರೆ, ಇತ್ಯಾದಿ) ಅಥವಾ ಒಬ್ಬ ಪಾಶ್ಚಾತ್ಯ ದೇಶದ ವ್ಯಕ್ತಿಯೇ ಆಗಿರಬಹುದು. ಅಲ್ಲವೇ? ಭಾರತದ ಓರ್ವ ಮಹಾನ್ ವ್ಯಕ್ತಿಯ ಮುಖಚಿತ್ರ ಯಾರಿಗೂ ಕಾಣಿಸುವುದಿಲ್ಲ. ಏಕೆಂದರೆ ಅಂತಹ ಮನುಷ್ಯ ಇದ್ದರು ಎನ್ನುವುದು ಅನೇಕರಿಗೆ ಗೊತ್ತೆ ಇಲ್ಲ.

ಪತಂಜಲಿ ಮಹರ್ಶಿಗಳು ಯೋಗ ಸೂತ್ರಗಳನ್ನು ಬರೆದು ಸುಮಾರು 2400 ವರ್ಷಗಳೇ ಆಗಿರಬಹುದು. ಮೊದಲಿಗೆ ಮುಸ್ಲಿಮರು, ನಂತರ ಬ್ರಿಟಿಷರ ದಬ್ಬಾಳಿಕೆಯಲ್ಲಿ ನಮ್ಮ ಗುರುಕುಲ ಶಿಕ್ಷಣ ಪದ್ಧತಿ ನಾಶವಾಯಿತು. ಇದರ ಜೊತೆಗೆ ಯೋಗಾಸನದ ವಿದ್ಯೆಯು ಕ್ಷೀಣವಾಯಿತು. ಇಪ್ಪತ್ತನೇ ಶತಮಾನದಲ್ಲಿ ಅದಕ್ಕೆ ಪುನರ್ಜೀವ ನೀಡಿದವರೇ 'ಶ್ರೀ ತಿರುಮಲೈ ಕೃಷ್ಣಮಾಚಾರ್ಯ'. ಇಡೀ ವಿಶ್ವದಲ್ಲಿ ಕೋಟ್ಯಾಂತರ ಜನರು ವಿವಿಧ ಶೈಲಿಗಳಲ್ಲಿ ಯೋಗಾಭ್ಯಾಸ ಮಾಡುತ್ತಿದ್ದಾರೆ. ಅದಕ್ಕೆಲ್ಲ ಮೂಲ 125ಕ್ಕೂ ಹೆಚ್ಚು ವರುಷಗಳ ಹಿಂದೆ ಜನಿಸಿದ ಕೃಷ್ಣಮಾಚಾರ್ಯರು.



ಚಿತ್ರದುರ್ಗದಲ್ಲಿ ಜನಿಸಿದ ಕೃಷ್ಣಮಾಚಾರ್ಯರು (18 ನವೆಂಬರ್ 1888–28 ಫೆಬ್ರುವರಿ 1989) ಸಂಸ್ಕೃತ ಮತ್ತು ವೇದಗಳ ಜೊತೆಗೆ, ತಮ್ಮ ತಂದೆಯವರಾದ 'ಶ್ರೀ ತಿರುಮಲೈ ಶ್ರೀನಿವಾಸ ತಾತಾಚಾರ್ಯ' ಅವರಿಂದ ಯೋಗ ಹಾಗೂ ಪ್ರಾಣಾಯಾಮವನ್ನು ಕಲಿತರು. ಮೈಸೂರು, ಪಟ್ನಾ ಹಾಗೂ ಕಾಶಿಯಲ್ಲಿ ಶಡ್ದರ್ಶನಗಳಲ್ಲಿ ಪಾಂಡಿತ್ಯ ಪಡೆದರು. ಮಾನಸ ಸರೋವರದ ಬಳಿ ಒಂದು ಗುಹೆಯಲ್ಲಿ ವಾಸವಾಗಿದ್ದ 'ರಾಮ ಮೋಹನ ಬ್ರಹ್ಮಚಾರಿ' ಅವರಿಂದ ಕೂಡ ವಿದ್ಯೆ ಸ್ವೀಕರಿಸಿದರು.

ನಂತರ ಮೈಸೂರಿಗೆ ಹಿಂದುರಿಗಿ ಶ್ರೀಕೃಷ್ಣರಾಜ ಒಡೆಯರ್–4 ಅವರ ಆಸ್ಥಾನ ವಿದ್ವಾಂಸರಾದರು. ಮಹಾರಾಜರ ಪ್ರೋತ್ಸಾಹದಲ್ಲಿ ಭಾರತದಾದ್ಯಂತ ಉಪನ್ಯಾಸಗಳನ್ನು ನೀಡುವುದರ ಜೊತೆಗೆ ಯೋಗಾಸನವನ್ನೂ ಪ್ರದರ್ಶಿಸಿದರು. ಇದರ ಮಧ್ಯೆ ಆಚಾರ್ಯರು ಅನೇಕ ಪುಸ್ತಕಗಳನ್ನು ಬರೆದರು. ಅದರಲ್ಲಿ ಮುಖ್ಯವಾದುದು 'ಯೋಗ ಮಕರಂದ', 'ಯೊಗಾಸನಗಳು', 'ಯೋಗ ರಹಸ್ಯ' ಮತ್ತು 'ಯೋಗವಲ್ಲಿ'. 1933ರಲ್ಲಿ ಜಗನ್ಮೋಹನ ಅರಮನೆಯಲ್ಲಿ ಯೋಗಾಶಾಲೆಯೊಂದನ್ನೂ ಆರಂಭಿಸಿದರು. ದುರಾದೃಷ್ಟವಶಾತ್ ಈ ಯೋಗಾಶಾಲೆಯನ್ನು ಸ್ವಾತಂತ್ರ ಭಾರತದ ಮೈಸೂರಿನ ಮೊದಲ ಮುಖ್ಯಮಂತ್ರಿಯಾದ ಕೆ.ಸಿ.ರೆಡ್ಡಿಯವರು ಮುಚ್ಚಿಸಿದರು. ಅದರ ಕಾರಣ ಆಚಾರ್ಯರು ಮೈಸೂರಿನಿಂದ ಬೆಂಗಳೂರಿಗೆ, ಅನಂತರ ಮದ್ರಾಸಿಗೆ ತೆರಳಿದರು. ಮದ್ರಾಸಿನಲ್ಲಿ ಕೆಲ ಕಾಲ ವಿವೇಕಾನಂದ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. 1989ರಲ್ಲಿ ತಮ್ಮ ದೇಹ ತ್ಯಾಗ ಮಾಡಿದರು.

ಕೃಷ್ಣಮಾಚಾರ್ಯರು ಮೈಸೂರಿನಲ್ಲಿ ಯೋಗಾಶಾಲೆಯನ್ನು ನಡೆಸುತ್ತಿದ್ದ ಆ ದಿನಗಳೆ ಭಾರತದಲ್ಲಿ ಯೋಗದೀಪವನ್ನು ಮತ್ತೆ ಬೆಳಗಿದ ದಿನಗಳು. ಆ ಜ್ಯೋತಿ ನಿರಂತರ ಬೆಳಗಿಸುವ ಹೊಣೆಯನ್ನು ಹೊತ್ತವರು ಮುಖ್ಯವಾಗಿ ಅವರ ಮೂರು ಶಿಷ್ಯರು. ಕೆ ಪಟ್ಟಾಭಿ ಜೋಯಿಸ್, ಮಗನಾದ ದೇಶಿಕಾಚಾರ್ ಹಾಗೂ ಭಾವಮೈದುನನಾದ ಬಿ.ಕೆ.ಎಸ್ ಅಯ್ಯಂಗಾರ್. ಪಟ್ಟಾಭಿ ಜೋಯಿಸ್ ಅವರು ಮೈಸೂರಿನಲ್ಲಿ, ದೇಶಿಕಾಚಾರ್ ಅವರು ಮದ್ರಾಸಿನಲ್ಲಿ ಮತ್ತು ಬಿ.ಕೆ.ಎಸ್ ಅಯ್ಯಂಗಾರ್ ಅವರು ಪುಣೆಯಲ್ಲಿ ಯೋಗವೃಕ್ಷದ ಇನ್ನಷ್ಟು ಬೀಜಗಳನ್ನು ಬಿತ್ತಿದರು. ಕ್ರಮೇಣ ಭಾರತದಲ್ಲಷ್ಟೇ ಅಲ್ಲ ಇಡೀ ವಿಶ್ವದಲ್ಲೇ ಈ ಮೂವರು ಯೋಗ ಪ್ರಚಾರಣೆಗೆ ಕಾರಣರಾದರು. ಭಾರತ ಅಥವಾ ಅಮೇರಿಕ, ಯುರೋಪಿನ ಯಾವುದೇ ದೇಶವಿರಬಹುದು, ಯೋಗದ ಯಾವುದೇ ಶೈಲಿ ಇರಬಹುದು, ಅದೆಲ್ಲದರ ಋಷಿಮೂಲ ದಕ್ಷಿಣ ಭಾರತದ ತಿರುಮಲೈ ಕೃಷ್ಣಮಾಚಾರ್ಯ.

ಕೃಷ್ಣಮಾಚಾರ್ಯರು ಹೇಳಿದಂತೆ ಶ್ರದ್ಧೆಯಿಂದ ಯೋಗಾಭ್ಯಾಸ ಮಾಡುವಾಗ

ಉಸಿರನ್ನು ತೆಗೆದುಕೊಂಡರೆ ಪರಮಾತ್ಮ ನಮ್ಮಲ್ಲಿಗೆ ಬರುತ್ತಾನೆ,

ಆ ಉಸಿರನ್ನು ಹಿಡಿದರೆ ಪರಮಾತ್ಮ ನಮ್ಮಲ್ಲಿ ಉಳಿಯುತ್ತಾನೆ,

ಆ ಉಸಿರನ್ನು ಬಿಟ್ಟಾಗ ನಾವು ಪರಮಾತ್ಮನೆಡೆಗೆ ಹೋಗುತ್ತೇವೆ,

ಆ ಬಿಟ್ಟ ಉಸಿರಿನ ಸ್ಥಿತಿಯನ್ನು ಹಿಡಿದರೆ ನಮ್ಮನ್ನು ನಾವು ಪರಮಾತ್ಮನಿಗೆ ಸಮರ್ಪಿಸುತ್ತೇವೆ

ಇಂತಹ ಮಹಾನ್ ಚೇತನದ ಸಿದ್ಧಿಯಲ್ಲಿ ಅರಳಿದ ಯೋಗ ವಿಜ್ಞಾನ ಇಂದು ಮೈಸೂರಿನಲ್ಲಿ ಕಮರ್ಷಿಯಲ್ ಆಗಿದೆ. ಇನ್ನಾದರೂ ನಮ್ಮ 'ಯೋಗ ನಗರಿ' ಮೈಸೂರು ಇದರ ಬಗ್ಗೆ ಮರು ಚಿಂತಿಸಬೇಕಾಗಿದೆ.



– ಡಾ. ಎಂ.ಎನ್.ಸುಧಾ,
ಮೊ:9448071933

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯೋಗ ಕಾರ್ಯಕ್ರಮದಲ್ಲಿ ಮೋದಿ ಅವರೊಂದಿಗೆ ಭಾಗವಹಿಸಲು ರಾಜವಂಶಸ್ಥರಿಗೆ ಅಧಿಕೃತ ಆಹ್ವಾನ



ಮೈಸೂರು, ಜೂ.19(ಆರ್‌ಕೆಬಿ)– ಮೈಸೂರು ಅರಮನೆ ಆವರಣದಲ್ಲಿ ಜೂ.21ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸುತ್ತಿದ್ದು, ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮೈಸೂರು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಮತ್ತು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಭಾನುವಾರ ಜಿಲ್ಲಾಡಳಿತದಿಂದ ಅಧಿಕೃತ ಆಹ್ವಾನ ನೀಡಲಾಯಿತು.

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ ಇನ್ನಿತರರು ಮೈಸೂರು ಅರಮನೆಯ ಅವರ ನಿವಾಸದಲ್ಲಿ ಅವರಿಗೆ ಹೂಗುಚ್ಛ, ಫಲತಾಂಬೂಲ ನೀಡಿ ಆಹ್ವಾನ ನೀಡಿದರು.

ಇದಕ್ಕೆ ಸಮ್ಮತಿಸಿದ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪ್ರಧಾನಿ ಮೋದಿ ಅವರೊಂದಿಗೆ ಯೋಗ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಅವರು ತಿಳಿಸಿದರು.

ಇಂದಿನಿಂದ ಪುನಶ್ಚೇತನ ತರಬೇತಿ ಶಿಬಿರ

ಮೈಸೂರು, ಜೂ.19– ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಪರಿಶಿಷ್ಟ ಪಂಗಡದ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಇಂಗ್ಲೀಷ್, ಗಣಿತ ಹಾಗೂ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ ಜೂ.20ರಿಂದ 25 ರವರೆಗೆ ಒಟ್ಟು ಆರು ದಿನಗಳು ಪುನಶ್ಚೇತನ ತರಬೇತಿಯನ್ನು ಪ್ರಾದೇಶಿಕ ದೂರವಾಣಿ ತರಬೇತಿ ಕೇಂದ್ರ ಟಿ.ಕೆ. ಲೇಔಟ್‌ನಲ್ಲಿ ಆಯೋಜಿಸಲಾಗಿದ್ದು, ನುರಿತ ವಿಷಯ ತಜ್ಞರು ತರಬೇತಿ ನೀಡಲಿದ್ದಾರೆ. ತರಬೇತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭವನ್ನು ಜೂ.20ರಂದು ಬೆಳಗ್ಗೆ 11 ಗಂಟೆಗೆ ಪ್ರಾದೇಶಿಕ ದೂರವಾಣಿ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಹೆಚ್.ಪಿ.ಜ್ಯೋತಿ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ನಿರ್ದೇಶಕ ಕಾಂತರಾಜು, ಸಾರ್ವಜನಿಕ ಶಿಕ್ಷಣ ಇಲಾಖೆಜಂಟಿ ನಿರ್ದೇಶಕಿ ಭಾರತಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲ ರಘುನಂದನ್ ಹಾಗೂರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾ ಸಂಸ್ಥೆಯ ಅಧಿಕಾರಿ ಸಿ.ಶಿವಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ನಗರಸಭಾ ಕಾರ್ಯಾಲಯ, ಹಾಸನ, ಬಿ.ಎಂ. ರಸ್ತೆ, ಸಂತೇಪೇಟೆ ವೃತ್ತ, ಹಾಸನ.

Email:commn_hassan@yahoo.com — ದೂರವಾಣಿ: 08172-268276, 263033
web: http://www.hassancity.gov.in — ಸಹಾಯವಾಣಿ: 233702 ಫ್ಯಾಕ್ಸ್: 234792

ಸಂ:ಪೌಆ/ಹಾನಸ/ಇ.ವಿ/ಜೆ.ಇ-1/ಟೆಂಡರ್ ಶಾಖೆ/2022-23 — ದಿನಾಂಕ:17-06-2022

ಟೆಂಡರ್ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಹಾಸನ ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯ ಅನುದಾನಗಳಡಿಯಲ್ಲಿ ಕಾಮಗಾರಿ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ-2000ರ ಅನ್ವಯ ಐಟಂವಾರು ದರಗಳ ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:04-07-2022 ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172-268276, ಕಾಮಗಾರಿ ವಿವರ ಈ ಕೆಳಕಂಡಂತಿದೆ. 2018-19ನೇ ಸಾಲಿನ 14ನೇ ಹಣಕಾಸು ಯೋಜನೆಯ ಜನರಲ್ ಬೇಸಿಕ್ ಅನುದಾನ ಕ್ರ.ಸಂ.1)ಕಾಮಗಾರಿ ಹೆಸರು: ಹಾಸನ ನಗರಕ್ಕೆ ನೀರು ಸರಬರಾಜು ಮಾಡುವ ಗೊರೂರು ನೀರು ಸರಬರಾಜು ಕೇಂದ್ರದ ಪಂಪ್‌ಹೌಸ್, ಫಿಲ್ಟರ್ ಹೌಸ್‌ಗಳ ಉನ್ನತೀಕರಣ ಕಾಮಗಾರಿ. INDENT NO: DMA/2022-23/0W/WORK INDENT 132717 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 7.50 ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಡಬ್ಲ್ಯೂ-1 2021-22ನೇ ಸಾಲಿನ ನಗರಸಭಾ ನಿಧಿಯಡಿ ಶೇ.29.00 ಅನುದಾನ 2)ಹಾಸನ ನಗರದ 11ನೇ ವಾರ್ಡ್‌ನ ರಂಗೋಲಿಹಳ್ಳ ಬಡಾವಣೆ ಬಣ್ಣದ ರಾಜಣ್ಣ ಮನೆಯಿಂದ, ಅರಳೀಮರ ವೃತ್ತದ ಮುಖಾಂತರ, ಬ್ರಹ್ಮಕುಮಾರಿ ಸಮಾಜ ಮುಖಾಂತರ ಸಂಸ್ಕೃತ ಭವನದ ವರೆಗೆ ಮಳೆ ನೀರಿನ ದೊಡ್ಡ ಚರಂಡಿಯ ಎರಡು ಬದಿ ಒಳಚರಂಡಿ ನಿರ್ಮಾಣ ಕಾಮಗಾರಿ, INDENT NO: DMA/2022-23/0W/WORK INDENT132718 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 35.00 ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಡಬ್ಲ್ಯೂ-2 2021-22ನೇ ಸಾಲಿನ ನಗರಸಭಾ ನಿಧಿ ಶೇ.5.00 ಅನುದಾನ 3)ಹಾಸನ ನಗರ ವ್ಯಾಪ್ತಿಯಲ್ಲಿನ ಅಂಗವಿಕಲರಿಗೆ ಎಲೆಕ್ಟ್ರಾನಿಕ್ ಮೂರು ಚಕ್ರದ ವಾಹನಗಳನ್ನು ಖರೀದಿಸುವುದು.. INDENT NO: cmc/hsn/3wheeler/2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 2021-22ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ 4)ಹಾಸನ ನಗರಸಭೆಯ ನೀರು ಸರಬರಾಜು ವ್ಯವಸ್ಥೆಯಲ್ಲಿರುವ ಮಿನಿ ಕ್ಯಾಂಟರ್ ವಾಹನ ಸಂಖ್ಯೆ: ಕೆಎ-13-2345 ವಾಹನವು ನಾ-ದುರಸ್ಥಿ. ಸ್ಥಿತಿಯಲ್ಲಿರುವುದರಿಂದ ಬದಲಿಗೆ ಹೊಸದಾಗಿ ಮಿನಿ ಕ್ಯಾಂಟರ್ ವಾಹನ ಖರೀದಿಸುವ ಕೆಲಸ. INDENT NO: cmc/hsn/minicantarvehical/2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00 ಕಾಲಾವಧಿ: 03 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 5)ಹಾಸನ ನಗರಸಭೆಯ ಒಳಚರಂಡಿ ವಿಭಾಗಕ್ಕೆ 5000 ಲೀ ಸಾಮರ್ಥ್ಯದ 39.80 ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರ ಖರೀದಿಸುವ ಕೆಲಸ. INDENT NO: cmc/hsn/amc/machion/2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 39.80 ಕಾಲಾವಧಿ: 06 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-2 6)ಹಾಸನ ನಗರದ 13ನೇ ವಾರ್ಡ್ ವಿದ್ಯುತ್ ನಗರ ಬಡಾವಣೆಯಲ್ಲಿನ ಪಾರ್ಕ್ ಅಭಿವೃದ್ಧಿ ಕಾಮಗಾರಿ. INDENT NO: cmc/hsn/amc/Park/2021-22 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 5.50 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ 7)ಹಾಸನ ನಗರಸಭೆಯ ಏರುಕೊಳವೆಯ ವಿವಿಧ ಅಳತೆಯ ಪೈಪ್‌ಗಳು ಮತ್ತು ಮೆಕ್ಯಾನಿಕಲ್ ಜಾಯಿಂಟ್ ಕಾಲರ್‌ಗಳಲ್ಲಿ ಖರೀದಿಸಿ ವಿವಿಧ ಸ್ಥಳಗಳಲ್ಲಿ ಅಳವಡಿಸುವ ಕೆಲಸ, INDENT NO:cmc/hsn/15ih fainance/2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 6.00 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 2021-22ನೇ ಸಾಲಿನ ನಗರಸಭಾ ನಿಧಿ ಶೇ.29.00 ಅನುದಾನ 8)ಪರಿಶಿಷ್ಟ ಜಾತಿ ವರ್ಗದವರು ವಾಸಿಸುವ ಹಾಸನ ನಗರದ ವಾರ್ಡ್ ನಂ:2ರ ಆಡುವಳ್ಳಿ ಬಡಾವಣೆಯಲ್ಲಿರುವ ಸುಮದಾಯ ಭವನ ಹಾಗೂ ಅಂಗನವಾಡಿ ಕಟ್ಟಡಕ್ಕೆ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸುವುದು INDENT NO: cmc/hsn/municipalfund29%/2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 9.00 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 9)ಪರಿಶಿಷ್ಟ ಪಂಗಡದವರು ವಾಸಿಸುವ ಹಾಸನ ನಗರದ ವಾರ್ಡ್ ನಂ:16 ರಾಜ್‌ಕುಮಾರ್ ನಗರ ಬಡಾವಣೆಯಲ್ಲಿರುವ ಅಂಗನವಾಡಿ ಕಟ್ಟಡಕ್ಕೆ ಕುರ್ಚಿ ಟೇಬಲ್ ಹಾಗೂ ಇತರೆ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸುವುದು. INDENT NO: cmc/hsn/Anganavadi items /2022-23 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 3.24 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಜಿ-1 2022-23ನೇ ಸಾಲಿನ ನಗರಸಭಾ ಅನುದಾನ 10)ಹಾಸನ ನಗರದ ವಾರ್ಡ್ ನಂ:2, ಅಶೋಕ ಬಡಾವಣೆಯ ರಸ್ತೆಯಿಂದ ಕೆ.ಎಸ್.ಆರ್.ಟಿ.ಸಿ. ಡಿಪೋ ರಸ್ತೆಯ ಮುಂಭಾಗದ ವರೆಗೆ ಪಾರ್ಕ್ ಅಭಿವೃದ್ಧಿ ಕಾಮಗಾರಿ (UNDENT NO: DMIA/2022-23/OW/WORK_INDENT132715) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 14.40 ಕಾಲಾವಧಿ: 03 ತಿಂಗಳು ಅನ್ವಯಿಸುವ ಟೆಂಡರ್ ದಾಸ್ತಾವೇಜು: kw-1 ಹಾಸನ ನಗರಸಭೆಯ ಎಸ್.ಎಫ್.ಸಿ.ವಿಶೇಷ ಅನುದಾನ. 2022-23ನೇ ಸಾಲಿನ ಹಾಸನ ನಗರಸಭಾ ಅನುದಾನ. 11)Repair, reconstruction of Manholes. Contruction of Damaged Manholes, Construction of New Manholes and Rising or lowering of manholes in main and cross roads of Ward No: 01 10 35 in Hassan City for the year 2022-23. (INDENT NO: DMA/2022-23/0W/WORK INDENT 132679) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00 ಕಾಲಾವಧಿ: 12 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: kw-2 12)Construction of New UGD Pipe line, Reconstruction of Damaged UGD Pipe line and UGD Missing Link Pipe line work in Main Roads and Cross Roads of Ward No: 01 to 35 in Hassan City for the year 2022-23 (INDENT NO: DMA/2022-23/OW/WORK_INDENT132680) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.00 ಕಾಲಾವಧಿ: 12 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: kw-2 ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಅಧ್ಯಕ್ಷರು ನಗರಸಭೆ, ಹಾಸನ. ಉಪಾಧ್ಯಕ್ಷರು ನಗರಸಭೆ, ಹಾಸನ. ಪೌರಾಯುಕ್ತರು, ನಗರಸಭೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/188/2022-23

ವಿಕಲಚೇತನರ ಸಬಲೀಕರಣಕ್ಕಾಗಿ ಜೂ.30, ಬೃಹತ್ ಉದ್ಯೋಗ ಮೇಳ


ಮೈಸೂರು, ಜೂ.19–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿ ವತಿಯಿಂದ ಬೆಂಗಳೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆಯವರು ದೇಶಾದ್ಯಂತ ವಿಕಲಚೇತನರ ಸಬಲೀಕರಣಕ್ಕಾಗಿ ಬೃಹತ್ ಉದ್ಯೋಗ ಮೇಳ ನಡೆಸಿಕೊಂಡು ಬರುತ್ತಿದ್ದಾರೆ. ಅದರಂತೆ ಸಮರ್ಥನಂ ಅಂಗವಿಕಲರ ಸಂಸ್ಥೆಯು ಜೂ.30ರಂದು ಬೆಳಗ್ಗೆ 9 ಗಂಟೆಗೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಕರ್ಜನ್ ಪಾರ್ಕ್ ಹತ್ತಿರವಿರುವ ಮೈಸೂರಿನ ತೋಟಗಾರಿಕಾ ಇಲಾಖೆ ಕಚೇರಿ ಆವರಣದಲ್ಲಿರುವ ಡಾ.ಎಂ.ಹೆಚ್.ಮರಿಗೌಡ ಆಡಿಟೋರಿಯಂನಲ್ಲಿ ವಿಕಲಚೇತನರ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ವಿಕಲಚೇತನ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಮಾಹಿತಿಗೆ ವೀರಭದ್ರ ಪಾಟೀಲ್ ಮೊ.ಸಂ:9480812121 placements @samarthanam.org, ಸುಭಾಷ್ ಮೊ.ಸಂ: 9449864693 centre head_banglore@samarthanam.org ಅನ್ನು ಸಂಪರ್ಕಿಸಬಹುದು.

ಮೈಸೂರು ವಿವಿ ಶಿಕ್ಷಣ ಮಂಡಳಿಗೆ ನೇಮಕ

ಮೈಸೂರು, ಜೂ.19– ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಕೇಂದ್ರದಲ್ಲಿ ಮೊದಲನೇ ವರ್ಷದ ಎಂ.ಕಾಂ. ವ್ಯಾಸಂಗ ಮಾಡುತ್ತಿರುವ ಮುಸ್ಕನ್ ಬಾನು ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ ವಿದ್ಯಾರ್ಥಿ ಸದಸ್ಯರಾಗಿ ಮುಂದಿನ ಎರಡು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ ಎಂದು ಕಾಲೇಜು ಪ್ರಾಂಶುಪಾಲ ಡಾ. ಎಸ್.ಮರೀಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ-ಎನ್.ಎಸ್.ಸ್ವಾಮಿ
(ಮಾಜಿ ವೈಸ್ ಛೇರ್ಮನ್)

ಇವರು ದಿ: 11.06.2022 ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 21.06.2022ನೇ ಮಂಗಳವಾರ ಬೆಳಗ್ಗೆ 11 ಗಂಟೆಗೆ ಮೃತರ ಸ್ವಗೃಹ ನಗುವನಹಳ್ಳಿ ಗ್ರಾಮ, ಶ್ರೀರಂಗಪಟ್ಟಣ ತಾ॥, ಮಂಡ್ಯ ಜಿಲ್ಲೆ. ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು

ಮೃತರ ಪತ್ನಿ ಶ್ರೀಮತಿ ಎನ್.ಎಸ್.ಸುಶೀಲಮ್ಮ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಮತ್ತು ಲೇ॥ ಕೆಂಪಮ್ಮನ ಸಿದ್ದೇಗೌಡರ ಕುಟುಂಬ ಬಂಧು-ಮಿತ್ರರು ಹಾಗೂ ನಗುವನಹಳ್ಳಿ ಗ್ರಾಮಸ್ಥರು



ಕೆಆರ್‌ಎಸ್ ಜಲಾಶಯಕ್ಕೆ ಗುಂಡಿಗಳ ರಸ್ತೆ ಸ್ವಾಗತ



- ಪ್ರವಾಸಿಗರು, ಸ್ಥಳೀಯರಿಗೂ ಕಿರಿಕಿರಿ
- ಪ್ರಸಿದ್ಧ ಪ್ರವಾಸಿ ತಾಣ ತಲುಪಲು ಹರಸಾಹಸ



● ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಜೂ.19– ಇನ್ನು ಕೆಲವೇ ಗಂಟೆಯಲ್ಲಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುತ್ತಿದ್ದು, ಇದಕ್ಕಾಗಿ ಕಳೆದೊಂದು ತಿಂಗಳಿಂದ ಹಗಲು–ರಾತ್ರಿ ಎನ್ನದೆ ದಿನದ 24 ಗಂಟೆಯೂ ಮೈಸೂರಿನ ಪ್ರಮುಖ ರಸ್ತೆಗಳ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಇದನ್ನು ಕಂಡ ಕಾರೇಕುರ ಗ್ರಾಮಸ್ಥರೊಬ್ಬರು ಮೋದಿಜೀ ನಮ್ಮೂರಿನ ರಸ್ತೆ ಮಾರ್ಗವಾಗಿ ಬಂದಿದ್ದರೆ ನಮ್ಮೂರ ರಸ್ತೆಯೂ ದುರಸ್ತಿಯಾಗುತ್ತಿತ್ತು ಎಂದು ಬೇಸರದಿಂದ ತಮ್ಮ ದಿನನಿತ್ಯದ ಸಮಸ್ಯೆ ಬಗ್ಗೆ ತಿಳಿಸಿದರು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನಿಂದ ಸುಮಾರು 20 ಕಿಮೀ ದೂರದಲ್ಲಿರುವ ಪ್ರಸಿದ್ಧ ಪ್ರವಾಸಿತಾಣ ಕೆಆರ್‌ಎಸ್ ಜಲಾಶಯ ತಲುಪುವ ರಸ್ತೆ ಕಳೆದ ಹಲವು ವರ್ಷಗಳಿಂದ ಡಾಂಬರನ್ನೇ ಕಾಣದ ಪರಿಣಾಮ ಹಳ್ಳ–ಕೊಳ್ಳ ಗಳಿಂದ ಕೂಡಿದ್ದು, ಪ್ರವಾಸಿಗರು ಹಾಗೂ ಸ್ಥಳೀಯರು ವ್ಯವಸ್ಥೆಯ ವಿರುದ್ಧ ಹಿಡಿಶಾಪ ಹಾಕುವಂತಾಗಿದೆ.

ಇಲ್ಲಿನ ಪ್ರಮುಖ ಪ್ರವಾಸಿ ತಾಣಗಳಾದ ಪಶ್ಚಿಮ ವಾಹಿನಿ, ರಂಗನತಿಟ್ಟು ಪಕ್ಷಿಧಾಮ, ಎಡಮುರಿ, ಬಲಮುರಿ, ವಿಶ್ವವಿಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟೆಯ ಬೃಂದಾವನಕ್ಕೆ ಪ್ರತಿನಿತ್ಯ ಆಗಮಿಸುವ ಸಾವಿರಾರು ಪ್ರವಾಸಿಗರ ವಾಹನಗಳು ಈ ರಸ್ತೆ ಮಾರ್ಗವಾಗಿ ಸಂಚರಿಸುತ್ತವೆ. ಇವುಗಳನ್ನು ಹೊರತುಪಡಿಸಿ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ನಿತ್ಯ ಸಾವಿರಾರು ಟಿಪ್ಪರ್‌ಗಳು ನಿಯಮ ಮೀರಿ ಅಧಿಕ ತೂಕದ ಕಲ್ಲು, ಜಲ್ಲಿ, ಎಂ.ಸ್ಯಾಂಡ್, ಮರಳು ಸೇರಿದಂತೆ ಕಚ್ಚಾ ವಸ್ತುಗಳನ್ನು ಸಾಗಿಸಲೂ ಕೂಡ ಇದೇ ಮಾರ್ಗವನ್ನು ಅವಲಂಬಿಸಿದೆ. ಇದರ ಜೊತೆಗೆ ಮೈಸೂರು–ಬೆಂಗಳೂರು ಹೆದ್ದಾರಿ ಕೆಲಸಕ್ಕೆ ತಾಲೂಕಿನ ಬೆಳಗೊಳ ಹೋಬಳಿಯ ವಿವಿಧೆಡೆಯಿಂದ ಸಾವಿರಾರು ಲೋಡ್‌ಗಟ್ಟಲೆ ಮಣ್ಣನ್ನು ಇದೇ ರಸ್ತೆಯಲ್ಲಿ ಸಾಗಿಸುತ್ತಿದ್ದಾರೆ. ಇದೆಲ್ಲದರ ಪರಿಣಾಮ ಶ್ರೀರಂಗಪಟ್ಟಣದಿಂದ ಕೆಆರ್‌ಎಸ್‌ಗೆ ತೆರಳುವ ರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆ ತುಂಬಾ ಗುಂಡಿಗಳು ಸೃಷ್ಟಿಯಾಗಿದೆ.

ಪ್ರತಿನಿತ್ಯ ಅಪಘಾತ: ಈ ಮಾರ್ಗದಲ್ಲಿ ಅಂದಾಜು 12 ರಿಂದ 15 ಕಿಮೀ ರಸ್ತೆ ಸಂಪೂರ್ಣ ಹಾಳಾಗಿದ್ದು, ಇದರಿಂದ ಪ್ರತಿನಿತ್ಯ ಸಂಚರಿಸುವ ಸಾರ್ವಜನಿಕರು ಜೀವ ಭಯದಿಂದ ವಾಹನ ಚಲಾಯಿಸುವಂತಾಗಿದೆ. ಎಷ್ಟೇ ಎಚ್ಚರದಿಂದ ಇಲ್ಲಿ ವಾಹನ ಚಲಾಯಿಸಿದರೂ ಕೂಡ ಆಗಾಗ ಅಪಘಾತಗಳು ಸಂಭವಿಸುತ್ತಲೇ ಇದೆ. ಸಾಕಷ್ಟು ಜೀವ ಹಾನಿಗಳು ಸಂಭವಿಸಿದ್ದು, ನೂರಾರು ಮಂದಿ ಕೈ–ಕಾಲು ಮುರಿದುಕೊಂಡಿದ್ದಾರೆ.

ಶೀಘ್ರ ದುರಸ್ತಿ: ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದೆ. ಆದ್ದರಿಂದ ರಸ್ತೆಗೆ ಸುಮಾರು 10 ಕೋಟಿ ಅನುದಾನದ ಅವಶ್ಯಕತೆ ಇದ್ದು, ಪಶ್ಚಿಮ ವಾಹಿನಿಯಿಂದ ಕೆಆರ್‌ಎಸ್‌ವರೆಗೂ ಸುಸಜ್ಜಿತ ವಾದ ರಸ್ತೆ ನಿರ್ಮಾಣಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಆರ್ಥಿಕ ಸಚಿವಾಲಯದಿಂದ ಅಂತಿಮ ಅನುಮೋದನೆ ದೊರೆತ್ತಿಲ್ಲ. ಆದ್ದರಿಂದ ರಸ್ತೆ ಕೆಟ್ಟ ಸ್ಥಿತಿ ನೋಡಿ ನನ್ನ ಬೇರೆ ಅನುದಾನದ 3 ಕೋಟಿಯನ್ನು ತುರ್ತಾಗಿ ಈ ರಸ್ತೆ ನಿರ್ಮಿಸಲು ನೀಡಿದ್ದೇನೆ. ಈ ಸಂಬಂಧ ಕಳೆದ ವಿಧಾನಸಭಾದಲ್ಲಿ ಪ್ರಶ್ನೋತ್ತರ ವೇಳೆ ಈ ವಿಷಯ ಪ್ರಸ್ತಾಪ ಮಾಡಿದ್ದೆ. ಮುಂದಿನ ದಿನಗಳಲ್ಲಿ ಆರ್ಥಿಕ ಸಚಿವಾಲಯದಿಂದ ಅನುಮೋದನೆ ದೊರೆತರೆ ಸಂಪೂರ್ಣ ರಸ್ತೆ ನಿರ್ಮಿಸಲಾಗುವುದು ಎಂದು 'ಮೈಸೂರು ಮಿತ್ರ'ನಿಗೆ ದೂರವಾಣಿ ಮೂಲಕ ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.



" ಕೆಆರ್‌ಎಸ್‌ಗೆ ತೆರಳುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ರಸ್ತೆ ದುರಸ್ತಿಗಾಗಿ ಶಾಸಕರ ಅನುದಾನಡಿ 3 ಕೋಟಿ ರೂ. ಬಿಡುಗಡೆಗೊಳಿಸಲಾಗಿದೆ. ಮೊದಲ ಹಂತದಲ್ಲಿ ಪಶ್ಚಿಮವಾಹಿನಿಯಿಂದ ಪಂಪ್‌ಹೌಸ್ ವೃತ್ತದವರೆಗೆ ರಸ್ತೆ ನಿರ್ಮಾಣ ಮಾಡಲಾಗುವುದು. ಇನ್ನುಳಿದ ಕಾಮಗಾರಿಗೆ ಸರ್ಕಾರದಿಂದ ಹಣ ಬಿಡುಗಡೆಯಾದ ನಂತರ ಪಂಪ್ ಹೌಸ್‌ನಿಂದ ಕೆಆರ್‌ಎಸ್‌ವರೆಗೂ ರಸ್ತೆ ನಿರ್ಮಾಣ ಮಾಡಲಾಗುವುದು.

– ರವೀಂದ್ರ ಶ್ರೀಕಂಠಯ್ಯ, ಶಾಸಕರು.



" ನೂತನ ರಸ್ತೆ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯಿಂದ ಸರ್ಕಾರಕ್ಕೆ 17 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಯಾವುದೇ ಉತ್ತರ ಬಂದಿಲ್ಲ. ಪಶ್ಚಿಮವಾಹಿನಿಯಿಂದ ಪಂಪ್‌ಹೌಸ್‌ವರೆಗೂ ನೂತನ ರಸ್ತೆ ನಿರ್ಮಾಣಕ್ಕೆ 10 ಕೋಟಿ, ಬೆಳಗೊಳದಿಂದ ಇಲವಾಲ ಬೈಪಾಸ್‌ವರೆಗೂ 7 ಕೋಟಿ ಒಟ್ಟು 17 ಕೋಟಿ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಕೆಯಾಗಿದೆ.

– ಮಹೇಶ್, ಎಇಇ, ಲೋಕೋಪಯೋಗಿ ಇಲಾಖೆ.



" ಹಲವು ಪ್ರವಾಸಿ ತಾಣಗಳಿಗೆ ಸಂಪರ್ಕ ಕಲ್ಪಿಸುವ ಹಳೇ ಪಶ್ಚಿಮವಾಹಿನಿ–ಕಣ್ಣಾನೂರು ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಇದರಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಪಾಲಹಳ್ಳಿ ಗ್ರಾಮದಲ್ಲಿ ಕಿರಿದಾದ ರಸ್ತೆ ಇರುವುದರಿಂದ ಇಲ್ಲಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ, ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

–ಟೆಂಪೋ ಪ್ರಕಾಶ್, ಪಾಲಹಳ್ಳಿ ಗ್ರಾಪಂ ಸದಸ್ಯ.

ದೇವಾಲಯಗಳ ಸಂರಕ್ಷಣೆ ಎಲ್ಲರ ಕರ್ತವ್ಯ

ಕೆ.ಆರ್.ಪೇಟೆ, ಜೂ.19(ಶ್ರೀನಿವಾಸ್)– ದೇವಾಲಯಗಳು ಶಾಂತಿ, ನೆಮ್ಮದಿ ನೀಡುವ ತಾಣಗಳಾಗಿವೆ. ಜೊತೆಗೆ ನಮ್ಮ ಸಂಸ್ಕೃತಿ, ಪರಂಪರೆ ಪ್ರತೀಕವಾಗಿರುವ ದೇವಾಲಯಗಳ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದು ಮಿತ್ರ ಫೌಂಡೇಷನ್ ಅಧ್ಯಕ್ಷ ವಿಜಯ್ ರಾಮೇಗೌಡ ತಿಳಿಸಿದರು. ತಾಲೂಕಿನ ವಳಗೆರೆಮೆಣಸ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀತಂಧ್ರಿದೇವಿ ಅಮ್ಮನವರ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಮನುಷ್ಯನಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದು. ಆದರೆ ಶಾಂತಿ, ನೆಮ್ಮದಿ ಕೊಳ್ಳಲು ಸಾಧ್ಯವಿಲ್ಲ. ಬದಲಿಗೆ ದೇವಾಲಯಗಳಿಗೆ ತೆರಳಿ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಿ ಪಡೆಯಬಹುದು. ಬಡವರಿಗೆ ದಾನಧರ್ಮ ಮಾಡುವ ಮೂಲಕವೂ ಶಾಂತಿ, ನೆಮ್ಮದಿ ಪಡೆಯಬಹುದು ಎಂದರು.

ಈ ವೇಳೆ ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗೋವಿಂದರಾಜು, ಕಾಂತರಾಜು, ಎ.ಬಿ.ಕುಮಾರ್, ಮಂಜೇಗೌಡ, ಬಸವರಾಜು, ವಕೀಲ ಎಸ್.ಸತೀಶ್, ಶ್ರೀತಂಧ್ರಿದೇವಿ ದೇವಾಲಯ ಸಮಿತಿ ಅಧ್ಯಕ್ಷ ವಿ.ಸಿ.ಮಂಜುನಾಥ್, ಕಾರ್ಯದರ್ಶಿ ವಿ.ಬಿ.ಮಂಜು, ಖಜಾಂಚಿ ಕೃಷ್ಣ, ಮುಖಂಡರಾದ ವಿ.ಎನ್.ಮಹದೇವೇಗೌಡ, ಸಿಆರ್‌ಪಿ ಕುಮಾರ್, ಎ.ಬಿ.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ನಾಗೇಂದ್ರ, ವಿ.ಡಿ.ಜಯಪ್ರಕಾಶ್, ಮಧು, ಲಕ್ಷ್ಮಣ್, ಅನಂತು, ಗ್ಯಾಸ್ ಕುಮಾರ್, ಅಶೋಕ್, ಮಂಡ್ಯ ಪ್ರಕಾಶ್, ರವಿ ಸೇರಿದಂತೆ ಇತರರಿದ್ದರು. ಇದೇ ವೇಳೆ ಭಕ್ತರಿಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿತ್ತು. ವೇದಬ್ರಹ್ಮ ಗೋಪಾಲಕೃಷ್ಣ ಅವದಾನಿಗಳ ನೇತೃತ್ವದಲ್ಲಿ ಹೋಮ ಹವನ ಸೇರಿದಂತೆ ಪೂಜಾ ವಿಧಿ ವಿಧಾನಗಳು ಎರಡು ದಿನಗಳ ಕಾಲ ನಡೆದವು.



ಚಿನಕುರಳಿ ಹಾಲಿನ ಡೈರಿಗೆ ಸಿ.ಎಸ್.ಲೋಕೇಶ್ ಅಧ್ಯಕ್ಷ



ಚಿನಕುರಳಿ, ಜೂ.19(ಸಿ.ಎ.ಲೋಕೇಶ್)– ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಎಸ್.ಲೋಕೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ವಿಷಕಂಠೇಗೌಡರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಸಿ.ಎಸ್.ಲೋಕೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಶೋಭಾ ಘೋಷಿಸಿದರು.

ಸಿ.ಎಸ್.ಲೋಕೇಶ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಅಲ್ಲದೇ ಡೈರಿ ಉಪಾಧ್ಯಕ್ಷರು ಸೇರಿದಂತೆ ಎಲ್ಲಾ ನಿರ್ದೇಶಕರು, ಸದಸ್ಯರು, ಬೆಂಬಲಿಗರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ನೂತನ ಅಧ್ಯಕ್ಷ ಸಿ.ಎಸ್.ಲೋಕೇಶ್ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು ಆಶೀರ್ವಾದ ಹಾಗೂ ಎಲ್ಲಾ ನಿರ್ದೇಶಕರ ಸಹಕಾರದಿಂದ ಡೇರಿ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರು, ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಜಿಪಂ ಮಾಜಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಅಶೋಕ್, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಡೇರಿ ಉಪಾಧ್ಯಕ್ಷೆ ಗಾಯಿತ್ರಿ, ಮಾಜಿ ಅಧ್ಯಕ್ಷ ವಿಷಕಂಠೇಗೌಡ, ಸಿ.ಪಿ.ಪುಟ್ಟೇಗೌಡ, ಸಿ.ಆರ್.ವನರಾಜು, ಸಿ.ಎಂ.ರಮೇಶ್, ವರದರಾಜು, ನಾಗಣ್ಣ, ಸಿ.ಎಸ್.ರಮೇಶ, ರಾಮಕೃಷ್ಣೇಗೌಡ, ಗೀತಾ, ಸವಿತಾ, ಯ.ಸುಬ್ಬೇಗೌಡ, ಗ್ರಾಪಂ ಸದಸ್ಯ ಸಿ.ಎ.ಲೋಕೇಶ್, ಕೃಷ್ಣೇಗೌಡ, ಪರಮೇಶ್, ಜಯರಾಮೇಗೌಡ, ಮಹದೇವ್, ಕಾರ್ಯದರ್ಶಿ ಕಾಂತರಾಜು ಸೇರಿದಂತೆ ಹಲವರಿದ್ದರು.

ಕಾಶಿ ದರ್ಶನಕ್ಕೆ ಹೋಗಿ ವಾಪಸಾಗಲು ಪರದಾಡುತ್ತಿದ್ದ ಯಾತ್ರಿಕರಿಗೆ ಮಂಡ್ಯ ಜಿಲ್ಲಾಡಳಿತದಿಂದ ಬಸ್ ವ್ಯವಸ್ಥೆ

ಮಂಡ್ಯ, ಜೂ.19–ಅಗ್ನಿಪಥ್ ಪ್ರತಿಭಟನೆ ಎಫೆಕ್ಟ್‌ನಿಂದ ಕಾಶಿಯಲ್ಲಿ ಸಿಲುಕಿದ್ದ ಮಂಡ್ಯ, ರಾಮನಗರ, ಚನ್ನಪಟ್ಟಣ ಮೂಲದ 70 ಜನರಿಗೆ ವಾಪಸ್ಸಾಗಲು ಮಂಡ್ಯ ಜಿಲ್ಲಾಡಳಿತ ಬಸ್ ವ್ಯವಸ್ಥೆ ಮಾಡಿದೆ. ಕಾಶಿ ದರ್ಶನಕ್ಕೆ ಹೋಗಿ ಹಿಂತಿರುಗಲಾಗದೆ ಅತಂತ್ರರಾಗಿದ್ದ ಯಾತ್ರಾರ್ಥಿಗಳನ್ನು ಸಂಪರ್ಕಿಸಿ ಮಂಡ್ಯ ಡಿಸಿ ಅಶ್ವಥಿ ಬಸ್ ವ್ಯವಸ್ಥೆ ಮಾಡಿದ್ದಾರೆ.

ಜೂ.9ರಂದು ಮಂಡ್ಯದಿಂದ ಸಂಗಮಿತ್ರ ರೈಲಿನಲ್ಲಿ 70 ಮಂದಿ ಕಾಶಿಗೆ ತೆರಳಿ ಕಾಶಿಯ ವಿಶ್ವನಾಥನ ದೇವಾಲಯದ ಗಂಗಾರತಿಯನ್ನು ಕಣ್ತುಂಬಿಕೊಂಡಿದ್ದರು. ಜೂ.18ರಂದು ಅದೇ ಸಂಗಮಿತ್ರ ರೈಲಿನ ಮೂಲಕ ಮಂಡ್ಯಕ್ಕೆ ವಾಪಸ್ಸಾಗಬೇಕಿತ್ತು. ಆದರೆ ಅಗ್ನಿಪಥ್ ಹೋರಾಟ ಹೆಚ್ಚಾದ ಕಾರಣ ಬಿಹಾರದಲ್ಲಿ ರೈಲನ್ನು ತಡೆದು ನಿಲ್ಲಿಸಲಾಗಿದೆ. ಅಲ್ಲದೇ ಕೆಲ ಬೋಗಿಗಳಿಗೆ ಕಿಡಿಗೇಡಿಗಳು ಬೆಂಕಿ ಇಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಡ್ಯಕ್ಕೆ ವಾಪಸ್ ಬರಲಾಗದೆ 70 ಮಂದಿ ಯಾತ್ರಿಕರು ಅತಂತ್ರ ಸ್ಥಿತಿಯಲ್ಲಿದ್ದರು. ಯಾತ್ರಿಕರಿಗೆ ಉಳಿದುಕೊಳ್ಳಲು ಜಾಗವಿಲ್ಲದೆ, ಆಹಾರ ಸಮಸ್ಯೆ ಎದುರಿಸುತ್ತಿದ್ದ ಯಾತ್ರಾರ್ಥಿಗಳನ್ನು ಸಂಪರ್ಕಿಸಿದ ಮಂಡ್ಯ ಡಿಸಿ ಅಶ್ವಥಿ ಜಿಲ್ಲಾಡಳಿತದಿಂದ ಬಸ್ ವ್ಯವಸ್ಥೆ ಮಾಡಿದ್ದಾರೆ. ಯಾತ್ರಿಗಳ ಬಳಿ ಹಣದ ಕೊರತೆ ಇದ್ದ ಕಾರಣ ಬಸ್ ಖರ್ಚನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಭರಿಸಿದ್ದಾರೆ.



ಇಂದು ಬಸವ ಜಯಂತಿ, ಬಸವೇಶ್ವರ ಪುತ್ಥಳಿ ಅನಾವರಣ



ಕೆ.ಆರ್.ನಗರ, ಜೂ.19– ಪಟ್ಟಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ಜೂ.20ರಂದು ಸೋಮವಾರ ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕ ಮತ್ತು ವೀರಶೈವ ಸಂಘಟನೆಗಳ ಒಕ್ಕೂಟದಿಂದ ಬಸವ ಜಯಂತಿ, ಕಾಯಕ ಯೋಗಿ ಡಾ.ಶಿವಕುಮಾರ ಸ್ವಾಮೀಜಿ 115ನೇ ಜಯಂತ್ಯುತ್ಸವ ಹಾಗೂ ಧಾರ್ಮಿಕ ಸಭೆ ನಡೆಯಲಿದೆ ಎಂದು ವೀರಶೈವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಲ್.ಪಿ.ರವಿಕುಮಾರ್ ತಿಳಿಸಿದ್ದಾರೆ.

ಬಸವೇಶ್ವರ ಬಡಾವಣೆಯ ಮಲೆ ಮಹದೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಬಸವ ಜಯಂತಿ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೆಳಗ್ಗೆ 8ಗಂಟೆಗೆ ಮಲೆ ಮಹದೇಶ್ವರ ಸ್ವಾಮಿ ದೇವಾಲಯದಿಂದ ಬಸವೇಶ್ವರರ ಭಾವಚಿತ್ರ ಮೆರವಣಿಗೆ ನಡೆಯಲಿದ್ದು, 10ಗಂಟೆಗೆ ಬಸವೇಶ್ವರ ದೇವಾಲಯದ ಮುಂದೆ ನಿರ್ಮಾಣವಾಗಿರುವ ಬಸವೇಶ್ವರರ ಪುತ್ಥಳಿಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿಗಳಾದ ಶಾಸಕ ಈಶ್ವರಖಂಡ್ರೆ ಅನಾವರಣ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

10.30ಕ್ಕೆ ಪುರಸಭೆ ಬಯಲು ರಂಗ ಮಂದಿರದಲ್ಲಿ ಬಸವ ಜಯಂತಿ, ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತೋತ್ಸವ ಹಾಗೂ ಧಾರ್ಮಿಕ ಸಭೆಯು ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸಿದ್ದಗಂಗಾ ಮಠಾಧೀಶರಾದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದ್ದು, ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ ಎಂದರು.

ಬೃಹತ್ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದು, ಬಸವಣ್ಣನವರು ಮತ್ತು ಡಾ.ಶಿವಕುಮಾರಸ್ವಾಮೀಜಿಗಳ ಭಾವಚಿತ್ರಗಳಿಗೆ ಶಾಸಕ ಸಾ.ರಾ.ಮಹೇಶ್ ಪುಷ್ಪನಮನ ಸಲ್ಲಿಸಲಿದ್ದಾರೆ. ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಾಧಕರಿಗೆ ಸನ್ಮಾನ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ತಾಲೂಕು ವೀರಶೈವ ಮಹಾ ಸಭಾದ ಅಧ್ಯಕ್ಷ ಕೆಂಪರಾಜು, ಮಹಿಳಾ ಘಟಕದ ಅಧ್ಯಕ್ಷೆ ಮನೋಹರಿ, ವೀರಶೈವ ಸಂಘಟನೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಾಜಶೇಖರ್, ಪುರಸಭೆ ಸದಸ್ಯ ಕೆ.ಬಿ.ವೀಣಾ, ತಾಲೂಕು ಜೆಡಿಎಸ್ ಕಾರ್ಯದರ್ಶಿ ಎಲ್.ಎಸ್.ಮಹೇಶ್, ಬಸವೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷೆ ರೇಖಾ ರವೀಂದ್ರ, ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ದ್ರಾಕ್ಷಾಯಿಣಿ, ವೀರಶೈವ ಸಂಘಟನೆಗಳ ಪದಾಧಿಕಾರಿಗಳಾದ ಎಸ್.ವಿ.ಪ್ರಕಾಶ್, ಅರುಣ್, ಬಿ.ನರಗುಂದ್, ಕೆ.ಎಸ್.ಮಲ್ಲಪ್ಪ ರೂಪಾ ಸತೀಶ್, ಗಂಗಾಧರ್ ಇದ್ದರು.

ದೇವಾಲಯ ಜೀರ್ಣೋದ್ಧಾರ ಪುಣ್ಯದ ಕೆಲಸ: ಸಾರಾ



ಭೇರ್ಯ, ಜೂ.19– ನೂರು ದೇವಾಲಯ ಕಟ್ಟುವ ಬದಲು ಹಳೆಯ ದೇವಾಲಯ ಜೀರ್ಣೋದ್ಧಾರ ಮಾಡುವುದು ಪುಣ್ಯದ ಕೆಲಸ ಎಂದು ಶಾಸಕ ಸಾ.ರಾ.ಮಹೇಶ್ ಅಭಿಪ್ರಾಯಪಟ್ಟರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿಯ ಹನುಮನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಬಸವೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಶ್ರೀಬಸವೇಶ್ವರ ದೇವಾಲಯ ಹನುಮನಹಳ್ಳಿ, ನರಚನಹಳ್ಳಿ, ಕೊಡಿಯಾಲ ಗ್ರಾಮಗಳಿಗೆ ಸೇರಿದ್ದು, ದೇವಸ್ಥಾನಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ವಿಶೇಷ ಕಾಳಜಿ ವಹಿಸಿ ದೇವಸ್ಥಾನವನ್ನು 10 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಮಾಡಲಾಗುವುದು. ಜೀರ್ಣೋದ್ಧಾರ ಕಾಮಗಾರಿಗೆ ಹಣದ ಕೊರತೆ ಬಂದರೆ ವೈಯಕ್ತಿಕವಾಗಿ ಐದು ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು. ಇದೇ ವೇಳೆ ಹನುಮನಹಳ್ಳಿ, ನರಚನ ಹಳ್ಳಿ, ಕೊಡಿಯಾಲ ಗ್ರಾಮದ ಮುಖಂಡರು ಶಾಸಕ ಸಾ.ರಾ.ಮಹೇಶ್ ಅವರನ್ನು ಅಭಿನಂದಿಸಿದರು.

ತಹಸೀಲ್ದಾರ್ ಮೋಹನ್, ಗ್ರಾಪಂ ಅಧ್ಯಕ್ಷ ಮೋಹನ್, ರಾಜ್ಯ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಗ್ರಾಪಂ ಸದಸ್ಯರಾದ ಮಂಜುನಾಥ್, ನಾಗಮ್ಮ ಪಿಡಿಓ ಗೋವಿಂದರಾಜು, ಉಪ ತಹಸೀಲ್ದಾರ್ ಮಹೇಶ್, ಇನ್ಸ್‌ಪೆಕ್ಟರ್ ಶ್ರೀಕಾಂತ್, ಮಾಜಿ ಸದಸ್ಯ ಅಪ್ಪಾಜಿ, ಮೋಹನ್, ವಿಜಿ, ಕೊಡಿಯಾಲ ನಾಗಭೂಷಣ್, ಶಿಕ್ಷಕ ಮಹದೇವಪ್ಪ, ನಿವೃತ್ತ ಶಿಕ್ಷಕ ಲೋಕೇಶ್, ಡೈರಿ ಸೋಮಶೇಖರ್, ಜೆಡಿಎಸ್ ಉಪಾಧ್ಯಕ್ಷ ತುಕರಾಂ, ಸಾರಾ ಯುವ ಸೇನೆ ರಾಜ್ಯಾಧ್ಯಕ್ಷ ಗೌತಮ, ತಾಲೂಕು ಅಧ್ಯಕ್ಷ ಬಂಡೆ ಕುಮಾರ್, ಸಂಚಾಲಕ ಗೋಪಿ ಸೇರಿದಂತೆ ಅನೇಕರಿದ್ದರು.

ಯೋಗ ತರಬೇತಿ

ಮೈಸೂರು, ಜೂ.19–ಸರ್ಕಾರಿ ಯೂತ್ ಹಾಸ್ಟೆಲ್ ಮೈಸೂರು ವತಿಯಿಂದ ಪತಂಜಲಿ ಯೋಗ ಶಿಕ್ಷಣ ಸಮಿತಿ ಕೃಷ್ಣಧಾಮ ಶಾಖೆ ಸಹಯೋಗದಲ್ಲಿ ಯೋಗ ದಿನಾಚರಣೆ ಅಂಗವಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು SPYSSನ ಆರ್.ಚಂದ್ರಿಕಾ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಯೂತ್ ಹಾಸ್ಟೆಲ್ ವ್ಯವಸ್ಥಾಪಕ ಡಾ.ಪ್ರಸಾದ್, ವಾರ್ತಾ ಇಲಾಖೆಯ ಅಧಿಕಾರಿ ಕೆ.ಎನ್. ರಮೇಶ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿಯ ಗ್ರಂಥಪಾಲಕರಾದ ಗಂಗಾಧರ ಹೆಚ್.ಸಿ. ಮತ್ತು ಯೂತ್ ಹಾಸ್ಟೆಲ್‌ನ ಸಿಬ್ಬಂದಿ ಚೇತನ್ ಕುಮಾರ್ ಸೇರಿದಂತೆ ಅನೇಕ ಯೋಗ ಪಟುಗಳು ಹಾಜರಿದ್ದರು.

ಬೈಲಕುಪ್ಪೆ ಗ್ರಾಪಂ ಅಧ್ಯಕ್ಷರಾಗಿ ಸುಮಾ ಪ್ರಭಾಕರ್



ಬೈಲಕುಪ್ಪೆ, ಜೂ.19(ರಾಜೇಶ್)– ಬೈಲಕುಪ್ಪೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸುಮಾ ಪ್ರಭಾಕರ್ ಶುಕ್ರವಾರ ಆಯ್ಕೆಯಾದರು.

ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆ ಗ್ರಾಪಂನಲ್ಲಿ ಹಿಂದೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶಿವಮ್ಮ ಅವರ ಸ್ಥಾನವು ತೆರವಾದ್ದರಿಂದ ಆ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸುಮಾ ಪ್ರಭಾಕರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದ ಕಾರ್ಯ ಪಾಲಕ ಅಭಿಯಂತರರ ಕಚೇರಿ ಜಯಂತ್ ಅವಿರೋಧ ಆಯ್ಕೆ ಘೋಷಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷೆ ಸುಮಾ ಪ್ರಭಾಕರ್ ಅವರಿಗೆ ಪಿಡಿಓ ಬೋರೇಗೌಡ, ಹೂಗುಚ್ಛ ನೀಡಿ ಶುಭ ಕೋರಿದರು. ಗ್ರಾಮ ಮಾಜಿ ಅಧ್ಯಕ್ಷೆ ಶಿವಮ್ಮ, ಮೈಸೂರು ಜಿಲ್ಲಾ ಕಾಂಗ್ರೆಸ್ ಕಿರಿಯ ಕಾರ್ಯದರ್ಶಿ ಸಮೀ ವುಲ್ಲಾ ಖಾನ್, ಪಂಚಾಯಿತಿ ಸದಸ್ಯರಾದ ರಘು, ಬಾಲಾಜಿ ರಘು, ರಾಜ, ಮಂಜುನಾಥ, ನವೀನ, ನಿಸಾರ್ ಅಹಮದ್, ದಾವತ್, ಗೀತಾ, ಪದ್ಮ ಗೀತಾ ಸುಬ್ರಮಣ್ಯ ಇತರರು ಇದ್ದರು.

ತಂಬಾಕು ಬೆಳೆಗೆ ಉತ್ತಮ ಬೆಲೆ ಕೊಡಿಸುವ ಭರವಸೆ



ಬೆಟ್ಟದಪುರ, ಜೂ.19(ಶಿವದೇವ್)– ನೆರೆಯ ಆಂಧ್ರಪ್ರದೇಶಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿಯೂ ಉತ್ತಮ ಗುಣಮಟ್ಟದ ತಂಬಾಕು ಬೆಳೆಯಲಾಗುತ್ತಿದ್ದು, ರಾಜ್ಯದ ರೈತರಿಗೆ ಅನ್ಯಾಯವಾಗದಂತೆ ಉತ್ತಮ ಬೆಲೆ ಕೊಡಿಸಲು ಪ್ರಯತ್ನಿಸಲಾಗುವುದು ಎಂದು ತಂಬಾಕು ಬೋರ್ಡ್ ಉಪಾಧ್ಯಕ್ಷರೂ ಆದ ಮಾಜಿ ಶಾಸಕ ಹೆಚ್.ಸಿ.ಬಸವರಾಜು ಭರವಸೆ ನೀಡಿದರು.

ರಾಮನಾಥಪುರದಲ್ಲಿರುವ ತಂಬಾಕು ಮಾರುಕಟ್ಟೆಯಲ್ಲಿ ವೀಕ್ಷಣೆ ಮಾಡಿದ ನಂತರ ಸಭೆಯಲ್ಲಿ ಮಾತನಾಡಿದ ಅವರು, ತಂಬಾಕು ಮಾರಾಟ ಮಾಡಿದ ರೈತರಿಂದ ದಂಡ ವಸೂಲಿ ಮಾಡುತ್ತಿರುವುದನ್ನು ಕೈಬಿಡಲು ಹಾಗೂ ತಂಬಾಕು ಮಂಡಳಿ ನೀಡುತ್ತಿರುವ ಸಸಿ, ರಸಗೊಬ್ಬರವನ್ನು ರೈತರಿಗೆ ಸಬ್ಸಿಡಿ ದರದಲ್ಲಿ ನೀಡುವಂತೆ, ತಾತ್ಕಾಲಿಕ ಕಾರ್ಡ್ ಹೊಂದಿರುವವರಿಗೆ ಪರವಾನಗಿ ನೀಡುವಂತೆ ಕೇಂದ್ರ ತಂಬಾಕು ಮಂಡಳಿಯಲ್ಲಿ ನಡೆಯುವ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ರೈತ ಸಂಘದ ಅಧ್ಯಕ್ಷ ಯೋಗೇಶ್ ಮಾತನಾಡಿ, ಆಂಧ್ರ ಪ್ರದೇಶಕ್ಕಿಂತ ರಾಜ್ಯದ ತಂಬಾಕು ಉತ್ತಮ ರೀತಿಯಲ್ಲಿ ಉತ್ಪಾದನೆಯಾಗುತ್ತಿದೆ. ಆದರೆ, ಬೆಲೆಯಲ್ಲಿ ಮೋಸ ಮಾಡಲಾಗುತ್ತಿದೆ. ಎಂದ ಅವರು, ರೈತರಿಂದ ದಂಡ ವಸೂಲಿ ನಿಲ್ಲಿಸಬೇಕು. ರಸಗೊಬ್ಬರಕ್ಕೆ ಸಬ್ಸಿಡಿ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಹೆಚ್.ಸಿ.ಬಸವರಾಜ್, ನೂತನ ನಿರ್ದೇಶಕ ದಿನೇಶ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಂಡಳಿ ಸದಸ್ಯರಾದ ಜಿ.ವಿ.ನೇತ್ರಪಾಲ, ದಿನೇಶ್, ಮುಖಂಡರಾದ ಈರೇಗೌಡ, ಬಾಲರಾಜು, ಶಿವಣ್ಣ, ತಂಬಾಕು ಬೋರ್ಡ್ ವ್ಯವಸ್ಥಾಪಕ ಕೆ.ಎಸ್.ಮಂಜುನಾಥ್, ನಿವೇಶ್ ಕುಮಾರ್ ಪಾಂಡೆ ಇದ್ದರು.



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಮಕ್ಕಳಿಗೆ ತಿರುಮಲ ಗ್ರೂಪ್‌ನಿಂದ ಲೇಖನಿ, ನೋಟ್ ಪುಸ್ತಕ ವಿತರಿಸಲಾಯಿತು. ಈ ವೇಳೆ ಗ್ರೂಪ್‌ನ ಮಹದೇವ, ಮೂರ್ತಿ, ಸ್ವಾಮಿ, ರಾಮಚಂದ್ರ ವೆಂಕಟಮ್ಮ, ರಮೇಶ್, ಶಿಕ್ಷಕರಾದ ಕೇಶವ್ ತಳವಾರ್, ಕಾವೇರಿ ಉಪಸ್ಥಿತರಿದ್ದರು.

ಬಾಚೇಗೌಡನಹಳ್ಳಿ: ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ ಕಾರ್ಯಕ್ರಮ ಯಶಸ್ವಿ

ಹಂಪಾಪುರ, ಜೂ.19(ರಾಜೇಶ್)– ಎಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿ ವ್ಯಾಪ್ತಿಯ ಬಾಚೇಗೌಡನಹಳ್ಳಿ ಗ್ರಾಮದಲ್ಲಿ ತಹಸೀಲ್ದಾರ್ ರತ್ನಾಂಬಿಕಾ ನೇತೃತ್ವದಲ್ಲಿ ನಡೆದ 'ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆ ಕಾರ್ಯಕ್ರಮ ಯಶಸ್ವಿಯಾಯಿತು.

ರಸ್ತೆ, ಕುಡಿಯುವ ನೀರಿನ ಸಮಸ್ಯೆ, ಕಾಡುಪ್ರಾಣಿಗಳ ಹಾವಳಿ, ರಸಗೊಬ್ಬರ ಅಭಾವ, ಪಿಂಚಣಿ ವ್ಯವಸ್ಥೆ ಸೇರಿದಂತೆ ಇನ್ನಿತರ ವಿಚಾರಗಳ ಕುರಿತು ದೂರುಗಳನ್ನು ಗ್ರಾಮಸ್ಥರು ಸಲ್ಲಿಸಿದರು. ಇವುಗಳನ್ನು ಪರಿಶೀಲಿಸಿದ ತಹಸೀಲ್ದಾರ್ ರತ್ನಾಂಬಿಕಾ ಅವರು ಪರಿಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಬಾಚೇಗೌಡನಹಳ್ಳಿ ಗ್ರಾಪಂ ಅಧ್ಯಕ್ಷೆ ಸುಧಾ ಕೆಂಪರಾಜು, ಉಪಾಧ್ಯಕ್ಷ ಪ್ರೇಮಕುಮಾರ್, ತಾಪಂ ಇಓ ರಂಗಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ರಾಮಸ್ವಾಮಿ, ಕೃಷಿ ಇಲಾಖೆಯ ಸಿದ್ದರಾಜು, ಮುಖಂಡ ಕೆಂಡಗಣ್ಣೇಶ್ವರ ಸೇರಿದಂತೆ ಗ್ರಾಪಂ ಸದಸ್ಯರು, ಜನಪ್ರತಿನಿಧಿಗಳು, ಮಹಿಳಾ ಸಂಘದ ಪದಾಧಿಕಾರಿಗಳು ಇದ್ದರು.



ಮೂರನೇ ಪುಟದಿಂದ

ಮೈಸೂರಿಗೆ ಪ್ರಧಾನಿ ಮೋದಿ

ನೇಷನ್ ಆಫ್ ಅಪ್ ಗ್ರೇಡೆಡ್ ಐಟಿಐ ಇಂಟೊ ಟೆಕ್ನಾಲಜಿ ಹಬ್ಸ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ 4.55ಕ್ಕೆ ಬೇಸ್ ಹೆಲಿಪ್ಯಾಡ್‌ಗೆ ಆಗಮಿಸಿ, 5.50ಕ್ಕೆ ಹೆಲಿಕಾಪ್ಟರ್‌ನಲ್ಲಿ ಮೈಸೂರಿನತ್ತ ಪ್ರಯಾಣಿಸಲಿದ್ದಾರೆ. ಭಾರತೀಯ ಸೇನೆಯ ಹೆಲಿಕಾಪ್ಟರ್‌ನಲ್ಲಿ ಮೈಸೂರಿನತ್ತ ಪ್ರಯಾಣ ಬೆಳೆಸಲಿರುವ ಪ್ರಧಾನಿ ಮೋದಿ ಸಂಜೆ 5.50ಕ್ಕೆ ಓವೆಲ್ ಮೈದಾನದಲ್ಲಿ ನಿರ್ಮಾಣ ಮಾಡಿರುವ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ. ಸಂಜೆ 5.55 ಓವೆಲ್ ಮೈದಾನದಿಂದ ಹೊರಟು ಸಂಜೆ 6 ಗಂಟೆಗೆ ಮಹಾರಾಜ ಕಾಲೇಜು ಮೈದಾನ ದಲ್ಲಿ ನಡೆಯುವ ಕೇಂದ್ರ, ರಾಜ್ಯ ಸರ್ಕಾರದ ವಿವಿಧ ಯೋಜನೆ ಗಳ ಫಲಾನುಭವಿಗಳ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ ಆಯಿಷ್ ಇಲಾಖೆ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ. ಸಂಜೆ 7.20ಕ್ಕೆ ಮಹಾರಾಜ ಕಾಲೇಜು ಮೈದಾನದಿಂದ ರಸ್ತೆ ಮಾರ್ಗವಾಗಿ ಹೊರಟು 7 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠ ತಲುಪಲಿದ್ದಾರೆ. ಅಲ್ಲಿನ ನಡೆಯುವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ 8.05ಕ್ಕೆ ಸುತ್ತೂರು ಮಠದಿಂದ ನಿರ್ಗಮಿಸಿ, ರಾತ್ರಿ 8.15ಕ್ಕೆ ರಸ್ತೆ ಮಾರ್ಗವಾಗಿ ಚಾಮುಂಡಿಬೆಟ್ಟ ತಲುಪಲಿದ್ದಾರೆ. 8.30ರವರೆಗೂ ಚಾಮುಂಡೇಶ್ವರಿ ದೇವಾಲಯದಲ್ಲಿ ದೇವಿಯ ದರ್ಶನ ಪಡೆದು, ರಾತ್ರಿ 8.35ಕ್ಕೆ ಬೆಟ್ಟದಿಂದ ಮೈಸೂರಿನತ್ತ ಪ್ರಯಾಣ ಬೆಳೆಸಲಿದ್ದಾರೆ. ರಾತ್ರಿ 8.55ಕ್ಕೆ ರ್‍ಯಾಡಿಸನ್ ಬ್ಲೂ ಹೋಟೆಲ್ ತಲುಪಿ ವಾಸ್ತವ್ಯ ಹೂಡಲಿದ್ದಾರೆ.

ಎರಡನೇ ದಿನ: ಜೂ.21ರಂದು ಬೆಳಗ್ಗೆ 6.20ಕ್ಕೆ ರ್‍ಯಾಡಿಸನ್ ಬ್ಲೂ ಹೋಟೇಲ್‌ನಿಂದ ಹೊರಟು ಬೆ 6.30ಕ್ಕೆ ಅರಮನೆ ಆವರಣದಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 7.45ರವರೆಗೆ ಅರಮನೆಯಲ್ಲೇ ಇರುವ ಪ್ರಧಾನಿ ನರೇಂದ್ರ ಮೋದಿ, ಬಳಿಕ 8 ಗಂಟೆಯಿಂದ 8.20ರವರೆಗೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಿರ್ಮಿಸಿರುವ ಯೋಗ ಕುರಿತ ವಸ್ತುಪ್ರದರ್ಶನ ವೀಕ್ಷಿಸಲಿದ್ದಾರೆ. ನಂತರ ಬೆಳಗ್ಗೆ 8.25ಕ್ಕೆ ಮತ್ತೆ ಅರಮನೆಗೆ ಆಗಮಿಸಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ನಿವಾಸದಲ್ಲಿ ಉಪಾಹಾರ ಸೇವಿಸಲಿದ್ದಾರೆ. ಈ ಸಂದರ್ಭದಲ್ಲಿ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್ ಹಾಗೂ ಆದ್ಯವೀರ್ ಒಡೆಯರ್ ಉಪಸ್ಥಿತರಿರುತ್ತಾರೆ. ಉಪಾಹಾರ ಸೇವಿಸಿದ ಬಳಿಕ 9.05ಕ್ಕೆ ಅರಮನೆಯಿಂದ ನಿರ್ಗಮಿಸಲಿದ್ದಾರೆ. ಮೈಸೂರು–ನಂಜನಗೂಡು ರಸ್ತೆ ಮಾರ್ಗದಲ್ಲಿ ಬೆಳಗ್ಗೆ 9.20ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

ಮೈಸೂರಲ್ಲಿ ಹೈ–ಅಲರ್ಟ್

ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸುತ್ತಿರುವುದು ಹೆಮ್ಮೆಪಡುವಂತಹ ಸಂಗತಿ. ಈ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಿಂದಲೂ ಕೆಎಸ್‌ಆರ್‌ಪಿ, ಸಿಎಆರ್ ಸೇರಿದಂತೆ ಭದ್ರತೆಗೆ ಬೇಕಾಗುವಷ್ಟು ಪೊಲೀಸ್ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಗಿದೆ. ಎಲ್ಲಿಯೂ ಲೋಪವಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಪ್ರಧಾನಿ ಮೋದಿ ಪಾಲ್ಗೊಳ್ಳುವ ಸ್ಥಳದಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಲಾಗಿ ದೆ ಎಂದರು. ಮೋದಿ ಅವರ ಕಾರ್ಯಕ್ರಮಕ್ಕೆ ಇಂತಿಷ್ಟೇ ಸಿಬ್ಬಂದಿಯನ್ನು ನಿಯೋಜಿಸಲಾಗಿದೆಯೆಂದು ಬಹಿರಂಗಪಡಿಸುವುದು ಸಾಧ್ಯವಿಲ್ಲ. ಓರ್ವ ನಾಯಕನಿಗೆ ಎಷ್ಟೆಲ್ಲಾ ಭದ್ರತೆ ನೀಡಬೇಕೆಂದು ನಮಗೆ ಅರಿವಿದೆ. ಆ ನಿಟ್ಟಿನಲ್ಲಿ ಎಡಿಜಿಪಿ, ಡಿಜಿ, ಐಜಿಪಿ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಈಗಾಗಲೇ ಪೂರ್ವ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದರು.

ಪರಿಶೀಲನೆ: ಇದಕ್ಕೂ ಮುನ್ನ ಮೈಸೂರು ಅರಮನೆಯ ಆವರಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸೇರಿದಂತೆ ಇನ್ನಿತರ ಅಧಿಕಾರಿಗಳೊಂದಿಗೆ ತೆರಳಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರಧಾನಿ ಮೋದಿ ಪಾಲ್ಗೊಳ್ಳುವ ವೇದಿಕೆ ಹಾಗೂ ಅರಮನೆ ಆವರಣದಲ್ಲಿ ಕೈಗೊಳ್ಳಬೇಕಾದ ಭದ್ರತೆಯನ್ನು ಅವಲೋಕಿಸಿ ಕೆಲವು ಸಲಹೆ–ಸೂಚನೆ ನೀಡಿದರು.

ಅಂತಿಮ ಪೂರ್ವಾಭ್ಯಾಸ

ನಂತರ ಓಂಕಾರ, ಪ್ರಾರ್ಥನೆಯೊಂದಿಗೆ ಯೋಗ ಪ್ರದರ್ಶನ ಆರಂಭವಾಯಿತು. ಚಲನ ಕ್ರಿಯೆ, ಕುತ್ತಿಗೆ, ಭುಜ, ಸೊಂಟ ಮತ್ತು ಮಡಿಗಳ ವ್ಯಾಯಾಮ ನಡೆಯಿತು. ನಂತರ ತಾಡಾಸನ, ವೃಕ್ಷಾಸನ, ಪಾದ ಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಶಶಂಕಾಸನ, ಮಕರಾಸನ, ಶಲಭಾಸನ, ಪವನಮುಕ್ತಾಸನ, ಶವಾಸನ ಸೇರಿದಂತೆ ವಿವಿಧ ಆಸನಗಳ ಪ್ರದರ್ಶನ ನಡೆಯಿತು. ಬಳಿಕ ಕಪಾಲಭಾತಿ, ನಾಡಿಶೋಧನ ಪ್ರಾಣಾಯಾಮ, ಶೀಲಲೀ ಪ್ರಾಣಾಯಾಮ, ಭ್ರಾಮರೀ ಪ್ರಾಣಾಯಾಮ, ಧ್ಯಾನ ನಂತರ, ಶಾಂತಿ ಮಂತ್ರದೊಂದಿಗೆ 45 ನಿಮಿಷಗಳ ಯೋಗ ಪ್ರದರ್ಶನ ಮುಕ್ತಾಯಗೊಂಡಿತು. ಮೋದಿ ಭೇಟಿ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಬಿಗಿ ಭದ್ರತೆ ಏರ್ಪಡಿಸಿದ್ದು, ಅರಮನೆ ಪ್ರವೇಶಿಸಿದ ಎಲ್ಲರನ್ನೂ ತಪಾಸಣೆ ಬಳಿಕವೇ ಒಳ ಬಿಡಲಾಯಿತು. ಅರಮನೆ ಆವರಣದಲ್ಲಿ ಜೂ.21ರಂದು ನೋಂದಾಯಿತ ಯೋಗಪಟುಗಳು ಕುಳಿತುಕೊಳ್ಳಲು ವಿವಿಧ ಬ್ಲಾಕ್‌ಗಳನ್ನು ರಚಿಸಲಾಗಿದೆ. ಆವರಣದಲ್ಲಿ ಯೋಗ ಪಟುಗಳಿಗೆ ಕಾಣುವಂತೆ ದೊಡ್ಡ ದೊಡ್ಡ ಹಲವು ಟಿವಿ ಸ್ಕ್ರೀನ್‌ಗಳನ್ನು ಅಳವಡಿಸಲಾಗಿದೆ. ಈ ಸಂದರ್ಭದಲ್ಲಿ ಗೃಹ ಸಚಿವ ಅರಗ ಜ್ಞಾನೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಿ.ಎಸ್.ನಿರಂಜನಕುಮಾರ್, ಸಂಸದ ಪ್ರತಾಪ್‌ಸಿಂಹ, ನಗರಸಭೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಅರಮನೆ ಮಂಡಲಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ, ರಾಜ್ಯಪಾಲರ ಪ್ರವೇಶ

ಆರೋಗ್ಯ ಸಚಿವ ಕೆ.ಸುಧಾಕರ್, ಗೃಹ ಸಚಿವ ಅರಗ ಜ್ಞಾನೇಂದ್ರ ಅವರ ವೇದಿಕೆಗೆ ಬರಲಿದ್ದಾರೆ ಎಂದು ಸಂಸದ ಪ್ರತಾಪ್‌ಸಿಂಹ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಅವರೊಂದಿಗೆ ವೇದಿಕೆಯಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇರಲಿದ್ದಾರೆ. ಕರಿಕಲ್ ತೊಟ್ಟಿ ದ್ವಾರದಿಂದ ವಿಐಪಿಗಳು, ಜನಪ್ರತಿನಿಧಿಗಳು ಬರಲಿದ್ದು, ಅವರೆಲ್ಲರೂ ಅರಮನೆ ಎದುರು ಅವರಿಗಾಗಿ ಮೀಸಲಿಟ್ಟ ಬ್ಲಾಕ್‌ನಲ್ಲಿ ಆಸೀನರಾಗಲಿದ್ದಾರೆ ಎಂದರು. ಕಾರ್ಯಕ್ರಮ ಮುಗಿದ ಮೇಲೆ ಮೋದಿ ನೇರವಾಗಿ ವಸ್ತುಪ್ರದರ್ಶನ ಆವರಣಕ್ಕೆ ನಡೆದುಕೊಂಡು ಹೋಗಲಿದ್ದಾರೆ. ನಂತರ ಪ್ರಮೋದಾದೇವಿ ಅವರ ಮನೆಯಲ್ಲಿ ಉಪಾಹಾರ ಸೇವಿಸಿ, ಬಳಿಕ ಅಲ್ಲಿಂದ ದೆಹಲಿಗೆ ವಾಪಸಾಗಲಿದ್ದಾರೆ ಎಂದರು. ಅರಮನೆ ಆವರಣದಲ್ಲಿ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು 12 ಸಾವಿರ ಯೋಗ ಪಟುಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. 3 ಸಾವಿರ ಮಂದಿ ಕೇಂದ್ರ ಸರ್ಕಾರದ ಉದ್ದಿಮೆಗಳು ಮತ್ತು ಕಚೇರಿಗಳಿಂದ ಪಟ್ಟಿ ಪಡೆಯಲಾಗಿದೆ. ಒಟ್ಟಾರೆ 15 ಸಾವಿರ ಮಂದಿ ಅರಮನೆ ಪ್ರಾಂಗಣದಲ್ಲಿ ಯೋಗ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದರು.

ಹಿಂಪಡೆಯುವುದಿಲ್ಲ

ರೈಲು, ಬಸ್ಸು ಸೇರಿದಂತೆ ಸಾರ್ವಜನಿಕ ಆಸ್ತಿಪಾಸ್ತಿಗಳು ಪ್ರತಿಭಟನೆ, ಹಿಂಸಾಚಾರದಲ್ಲಿ ಹಾನಿಗೀಡಾಗಿವೆ. ಈ ಎಲ್ಲದರ ಮಧ್ಯೆ ಇಂದು ದೆಹಲಿಯಲ್ಲಿ ಭಾರತೀಯ ನೌಕಾಪಡೆ ಮತ್ತು ವಾಯುಪಡೆಯ ಅಧಿಕಾರಿಗಳೊಂದಿಗೆ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮಿಲಿಟರಿ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ, ಅಗ್ನಿಪಥ್ ಯೋಜನೆಯನ್ನು ಏಕೆ ಹಿಂತೆಗೆದುಕೊಳ್ಳಬೇಕು. ದೇಶವನ್ನು ಯುವಶಕ್ತಿಯನ್ನಾಗಿಸಲು ಅದೊಂದೇ ಪ್ರಗತಿಪರ ಹೆಜ್ಜೆಯಾಗಿದೆ. ದೇಶದ ಭದ್ರತೆ ದೃಷ್ಟಿಯಿಂದ ಈ ಯೋಜನೆ ಮುಖ್ಯವಾಗಿದೆ. ನಮ್ಮ ದೇಶದ ಅತಿ ಎತ್ತರದ ಪ್ರದೇಶಗಳಲ್ಲಿ ನೇಮಕಗೊಂಡಿರುವ ಮಿಲಿಟರಿ ಸಿಬ್ಬಂದಿಗಳು ಅನಾರೋಗ್ಯ ಕಾರಣದಿಂದ ಎಷ್ಟು ಮಂದಿ ಸಾಯುತ್ತಾರೆ ಎಂದು ನಿಮಗೆ ಗೊತ್ತಿದೆಯೇ, ಅದರ ಬಗ್ಗೆ ತಿಳಿದುಕೊಳ್ಳಿ ಆಗ ನಿಮಗೆ ಮಿಲಿಟರಿಯಲ್ಲಿ ಯುವಕರ ಅಗತ್ಯ ಎಷ್ಟಿರುತ್ತದೆ ಎಂಬುದು ಗೊತ್ತಾಗುತ್ತದೆ ಎಂದರು.

ನೇಮಕಾತಿ ಪ್ರಕ್ರಿಯೆಗೆ ಪ್ರಮಾಣಪತ್ರ ಕಡ್ಡಾಯ: ಮಿಲಿಟರಿ ಪಡೆಗೆ ಸೇರಲಿಚ್ಛಿಸುವ ಯುವಕರು ತಾವು ಪ್ರತಿಭಟನೆ, ಸಾರ್ವಜನಿಕ ಆಸ್ತಿಪಾಸ್ತಿ ನಷ್ಟದಲ್ಲಿ ಭಾಗಿಯಾಗಿರಲಿಲ್ಲ ಎಂದು ಶೇಕಡಾ 100ರಷ್ಟು ಪೊಲೀಸ್ ಪರಿಶೀಲನೆಯೊಂದಿಗೆ ಪ್ರಮಾಣಪತ್ರವನ್ನು ನೀಡಬೇಕಾಗುತ್ತದೆ ಎಂದು ಸಹ ಹೇಳಿದರು. ಭಾರತೀಯ ಸೇನೆಯ ಅಡಿಪಾಯ ಶಿಸ್ತು. ಬೆಂಕಿ ಹಚ್ಚುವುದು, ವಿಧ್ವಂಸಕ ಕೃತ್ಯಗಳಿಗೆ ಇಲ್ಲಿ ಜಾಗವಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಪ್ರತಿಭಟನೆ ಅಥವಾ ವಿಧ್ವಂಸಕ ಕೃತ್ಯದ ಭಾಗವಾಗಿಲ್ಲ ಎಂದು ಪ್ರಮಾಣಪತ್ರವನ್ನು ತೋರಿಸಬೇಕಾಗುತ್ತದೆ. ಪೊಲೀಸ್ ಪ್ರಮಾಣಪತ್ರ ನೂರಕ್ಕೆ ನೂರು ಸರಿಯಾಗಿರುತ್ತದೆ. ಪ್ರಮಾಣಪತ್ರ ಇಲ್ಲದಿದ್ದರೆ ಸೇನೆ ಸೇರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಇಕಲಾಜಿಕಲ್ ಬಜೆಟ್

ಸಮಾವೇಶ ಮಾಡುತ್ತೇವೆ. ಅದರ ಜೊತೆಗೆ ನಮ್ಮ ಅಸ್ತಿತ್ವ, ಭವಿಷ್ಯಕ್ಕೆ ಕಾರಣವಾಗಿರುವ ಮಣ್ಣು ಉಳಿಸಿ ಸಮಾವೇಶ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ 2008ರಲ್ಲಿ ಯಡಿಯೂರಪ್ಪ ಭೂಚೇತನ ಕಾರ್ಯಕ್ರಮ ತಂದರು. ಭೂಚೇತನ ಮಣ್ಣಿನಲ್ಲಿರುವ ಸತ್ವ, ಸಾರ ಉಳಿಸುವ ಯೋಜನೆ ಇದಾಗಿದೆ. ಮಣ್ಣಿನಲ್ಲಿ ನೈಸರ್ಗಿಕ ಸತ್ವ, ಸಾರ ಕಮ್ಮಿ ಇದ್ದರೆ ಅದನ್ನು ಸರಿದೂಗಿಸುವ ಕಾರ್ಯಕ್ರಮವಾಗಿದೆ. ಮಣ್ಣು ಉಳಿಸಿ ಪರಿಕಲ್ಪನೆಯನ್ನು ದೂರದೃಷ್ಟಿಯಿಂದ ಅಂದೇ ಮಾಜಿ ಸಿಎಂ ಯಡಿಯೂರಪ್ಪ ಪರಿಚಯಿಸಿದರು ಎಂದರು. ಇದೇ ವೇಳೆ ಸದ್ಗುರು ಅವರ ಮಣ್ಣು ಉಳಿಸಿ ಅಭಿಯಾನಕ್ಕೆ ಸರ್ಕಾರ ಕೈಜೋಡಿಸುವ ಒಪ್ಪಂದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಿ ಹಾಕಿದರು. ಈ ಬಗ್ಗೆ ಮಾತನಾಡಿದ ಅವರು, ಮಣ್ಣು ಉಳಿಸಿ ಅಭಿಯಾನ ಐತಿಹಾಸಿಕ ಮಹತ್ವದ್ದಾಗಿದ್ದು, ಜಗತ್ತಿನ ಇತಿಹಾಸದ ಪುಟಗಳಲ್ಲಿ ಈ ಅಭಿಯಾನ ದಾಖಲೆ ಆಗಲಿದೆ. ಈ ಅಭಿಯಾನ ಯಶಸ್ವಿ ಆಗಿದೆ, ಮುಂದೆಯೂ ಯಶಸ್ವಿಯಾಗಲಿದೆ. ಹುಟ್ಟುವ ಮಗುವಿಗೂ ಈ ಅಭಿಯಾನ ಅವಶ್ಯಕತೆ ಇದೆ. ಸದ್ಗುರು ಅವರ ಮಣ್ಣು ಉಳಿಸಿ ಅಭಿಯಾನಕ್ಕೆ ಸರ್ಕಾರ ಸಹಕಾರ ನೀಡಲಿದೆ ಎಂದರು.

ಮೈಸೂರಿಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ

ಕೆಲವು ಕಡೆ ವಾಹನಗಳ ಪಾರ್ಕಿಂಗ್ ನಿಷೇಧ

ದ್ವಿಚಕ್ರ, 4 ಚಕ್ರದ ವಾಹನ, ಬಸ್ಸುಗಳ ಪಾರ್ಕಿಂಗ್‌ಗೆ ಬೇರೆ ಸ್ಥಳ ನಿಗದಿ

ಮೈಸೂರು, ಜೂ.19(ಎಸ್‌ಪಿಎನ್)– ಮೈಸೂರು ಅರಮನೆಯಲ್ಲಿ ನಡೆಯುವ 8ನೇ ಅಂತರರಾಷ್ಟ್ರೀಯ ಯೋಗಾ ದಿನಾಚರಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸುವ ಹಿನ್ನೆಲೆಯಲ್ಲಿ ಗಣ್ಯರ ಸುಗಮ ಸಂಚಾರ ಮತ್ತು ಸುರಕ್ಷತೆ ದೃಷ್ಟಿಯಿಂದ ಗಣ್ಯರು ಸಂಚರಿಸುವ ಮಾರ್ಗಗಳಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ.




ನಗರದ ಎಂ.ಎನ್.ಜೋಯಿಸ್ ವೃತ್ತದಿಂದ– ರಾಮಸ್ವಾಮಿ ವೃತ್ತ– ತಾತಯ್ಯ ವೃತ್ತ– ಬಸವೇಶ್ವರ ವೃತ್ತ–ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ– ನಂಜನಗೂಡು ರಸ್ತೆ– ಮಂಟಪ ಜಂಕ್ಷನ್ ಹಾಗೂ ರಾಜಹಂಸ ವೃತ್ತದವರೆಗಿನ ರಸ್ತೆಯ ಎರಡೂ ಬದಿಯಲ್ಲಿ ಜೂ.20 ಮತ್ತು ಜೂ.21 ರಂದು ಎಲ್ಲಾ ರೀತಿಯ ವಾಹನ ನಿಲುಗಡೆ ನಿಷೇಧಿಸಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶಿಸಿದ್ದಾರೆ.

ವಾಹನ ನಿಲುಗಡೆ ಸ್ಥಳ: ಮೈಸೂರು ಅರಮನೆಯ ಆವರಣದಲ್ಲಿ ಜೂ.21ರಂದು ನಡೆಯಲಿರುವ ಯೋಗ ಕಾರ್ಯಕ್ರಮಕ್ಕೆ ಆಗಮಿಸುವ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ಅವಕಾಶ ಕಲ್ಪಿಸಲಾಗಿದೆ. ಯುವರಾಜ, ಮಹಾರಾಜ, ಜೂನಿಯರ್ ಮಹಾರಾಜ ಕಾಲೇಜು, ನಂಜರಾಜ ಬಹದ್ದೂರ್ ಛತ್ರ, ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಬಸ್ಸುಗಳ ಪಾರ್ಕಿಂಗ್‌ಗೆ ಜೆ.ಕೆ.ಮೈಧಾನ, ಸ್ಕೌಟ್ಸ್ ಅಂಡ್ ಗೈಡ್ ಮೈದಾನದಲ್ಲಿ ಮಾಡಲಾಗಿದೆ.

ವಿಐಪಿ ವಾಹನಗಳಿಗೆ ಕಾಡಾ ಕಚೇರಿ, ಮೈಸೂರು ನಗರ ಪಾಲಿಕೆ ಆವರಣ, ವರಹಾ ಪ್ರವೇಶ ದ್ವಾರ ಸಮೀಪದ ಪಾರ್ಕಿಂಗ್ ಸ್ಥಳದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದ್ದು, ಸರ್ಕಾರಿ ವಾಹನಗಳಿಗೆ ಪುರಭವನದಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಪ್ರಧಾನಿ ಮೋದಿಯಿಂದ ಸುತ್ತೂರು ಮಠದಲ್ಲಿ ಸಂಸ್ಕೃತ ಪಾಠಶಾಲೆ ಉದ್ಘಾಟನೆ

ಮೈಸೂರು, ಜೂ.19(ಎಸ್‌ಪಿಎನ್)– ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ವಿವಿಧ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಭಾಗಿ ಹಿನ್ನೆಲೆಯಲ್ಲಿ ಕಾರ್ಯಕ್ರಮ ವೇಳಾಪಟ್ಟಿ ಮರು ನಿಗದಿಯಾಗಿದೆ.



ಕೆಎಸ್‌ಎಸ್ ಸಂಸ್ಕೃತ ಪಾಠಶಾಲಾ ಮತ್ತು ವಿದ್ಯಾರ್ಥಿ ನಿಲಯದ ನೂತನ ಕಟ್ಟಡ ಉದ್ಘಾಟನೆ, ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಜೂ.20ರ ಉದ್ಘಾಟಿಸಲಿರುವ ಸಮಾರಂಭವನ್ನು ಈ ಹಿಂದೆ ರಾತ್ರಿ 7.30ಕ್ಕೆ ನಿಗದಿಪಡಿಸಲಾಗಿತ್ತು.

ಇದೀಗ ಈ ಕಾರ್ಯಕ್ರಮವು ರಾತ್ರಿ 7 ಗಂಟೆಗೆ ನಿಗದಿಯಾಗಿದೆ ಹಾಗಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಒಂದು ಗಂಟೆ ಮುಂಚಿತವಾಗಿ ಅಂದರೆ ಸಂಜೆ 6 ಗಂಟೆಯೊಳಗೆ ಸಭಾಂಗಣದಲ್ಲಿ ಆಸೀನರಾಗಬೇಕಾಗಿ ಕೋರಿದೆ.

ಈ ಕಾರ್ಯಕ್ರಮದ ನೇರ ಪ್ರಸಾರವನ್ನು http://Youtube.com/c/JSSMahavidyapeethaonline ಮೂಲಕ ನೇರವಾಗಿಯೂ ವೀಕ್ಷಿಸಬಹುದಾಗಿದೆ ಎಂದು ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕನ್ನೇರಿ' ಸಿನಿಮಾ ಶತದಿನ

ಮೈಸೂರು,ಜೂ.19(ಪಿಎಂ)– ಬುಡ್ಡಿದೀಪ ಸಿನಿಮಾ ಹೌಸ್ ನಿರ್ಮಾಣದ 'ಕನ್ನೇರಿ' ಸಿನಿಮಾ ಬೆಳ್ಳಿತೆರೆಯಲ್ಲಿ ಯಶಸ್ವಿಯಾಗಿ ಶತದಿನ ಪೂರೈಸಿದೆ ಎಂದು ಸಿನಿಮಾ ನಿರ್ದೇಶಕ ಮೂಕಹಕ್ಕಿ ಸಿನಿಮಾ ಖ್ಯಾತಿಯ ನೀನಾಸಂ ಮಂಜು ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.4ರಂದು ರಾಜ್ಯಾದ್ಯಂತ ತೆರೆಕಂಡ ಕನ್ನೇರಿ ಸಿನಿಮಾಗೆ ಮೆಚ್ಚುಗೆ ವ್ಯಕ್ತವಾಗಿದೆ. ಕೊಡಗಿನಲ್ಲಿ ಸಂತ್ರಸ್ತರ ಹೋರಾಟ ಸೇರಿದಂತೆ ಇನ್ನಿತರ ನೈಜ ಘಟನೆಯಾಧಾರಿತ ಸಿನಿಮಾ ಇದಾಗಿದೆ ಎಂದರು. ನಟರಾದ ಅನಿತಾ ಭಟ್, ಕರಿಸುಬ್ಬು ಮತ್ತಿತರರು ಗೋಷ್ಠಿಯಲ್ಲಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಜೂ.19– ಮೈಸೂರಿನ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಜೂ.30ರವರೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.

ಚಾಮುಂಡಿ ಬೆಟ್ಟಕ್ಕೆ ಪ್ರವೇಶ ನಿಷೇಧ



ಮೈಸೂರು, ಜೂ.19–ವಿಶ್ವಯೋಗ ದಿನಾಚರಣೆ ಹಿನ್ನೆಲೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿದ್ದು, ಈ ಹಿನ್ನೆಯಲ್ಲಿ ಜೂ.20ರಂದು ಶ್ರೀ ಚಾಮುಂಡೇಶ್ವರಿ ದೇವಿ ದರ್ಶನಕ್ಕೆ ಆಗಮಿಸುತ್ತಿದ್ದು, ಭದ್ರತಾ ಹಿತದೃಷ್ಟಿಯಿಂದ ಜೂ.20 ರಂದು ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 9ಗಂಟೆವರೆಗೆ ಸಾರ್ವಜನಿಕರು ಮತ್ತು ಭಕ್ತಾದಿಗಳಿಗೆ ಚಾಮುಂಡಿಬೆಟ್ಟ ಹಾಗೂ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಪ್ರವೇಶ ನಿಷೇಧಿಸಲಾಗಿದೆ.

ಷರತ್ತು ಅನ್ವಯ: ನಿಷೇಧಿತ ಅವಧಿಯಲ್ಲಿ ರಸ್ತೆ ಮಾರ್ಗವಲ್ಲದೆ, ಮೆಟ್ಟಿಲು ಮಾರ್ಗದಿಂದಲೂ ಚಾಮುಂಡಿ ಬೆಟ್ಟಕ್ಕೆ ಭಕ್ತರು ಮತ್ತು ಸಾರ್ವಜನಿಕರು ಬರುವುದನ್ನು ನಿಷೇಧಿಸಲಾಗಿದೆ. ತುರ್ತು ಸೇವಾ ವಾಹನಗಳನ್ನು ಹೊರತುಪಡಿಸಿ, ಇತರೆ ಸಾರ್ವಜನಿಕ ಹಾಗೂ ಖಾಸಗಿ ಪ್ರವೇಶವನ್ನು ನಿರ್ಬಂಧಿಸಿದ್ದು, ಚಾಮುಂಡಿಬೆಟ್ಟದ ಗ್ರಾಮಸ್ಥರು ಅನಿವಾರ್ಯ ಪ್ರಸಂಗವಿದ್ದಲ್ಲಿ, ಚಾಮುಂಡಿಬೆಟ್ಟದ ವಾಸ ಸ್ಥಳದ ಗುರುತಿನಚೀಟಿ ಬಳಸಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಘೋಷಿಸಲ್ಪಟ್ಟ ಶಿಷ್ಟಾಚಾರ ವ್ಯವಸ್ಥೆ ಹೊಂದಿರುವ ಗಣ್ಯ ವ್ಯಕ್ತಿಗಳು, ಸರ್ಕಾರಿ ಕೆಲಸದ ನಿಮಿತ್ತ ತೆರಳುವ ಅಧಿಕಾರಿಗಳು ಮತ್ತು ತುರ್ತು ಸೇವಾ ವಾಹನಗಳನ್ನು ಹೊರತುಪಡಿಸಿ ಇತರೆ ಸಾರ್ವಜನಿಕ ವಾಹನಗಳ ಪ್ರವೇಶವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದಿನ ಡಿಸಿಗಳಾದ ರಣದೀಪ್, ಅಭಿರಾಂ ಶಂಕರ್‌ಗೆ ಪ್ರತಾಪಸಿಂಹ ಅಭಿನಂದನೆ

ಮೈಸೂರು, ಜೂ.19(ಎಸ್‌ಪಿಎನ್)– ಮೈಸೂರು ಅರಮನೆಯಲ್ಲಿ ಜೂ.21ರಂದು ನಡೆಯುವ 8ನೇ ವಿಶ್ವ ಯೋಗ ದಿನಾಚರಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಈ ಹಿಂದೆ ಯೋಗ ದಿನಾಚರಣೆ ಯಶಸ್ವಿಗೆ ಶ್ರಮಿಸಿದ ಹಿಂದಿನ ಜಿಲ್ಲಾಧಿಕಾರಿಗಳಾದ ರಣದೀಪ್ ಮತ್ತು ಅಭಿರಾಮ್ ಶಂಕರ್ ಅವರ ಪರಿಶ್ರಮವನ್ನು ಮೈಸೂರಿಗರ ಪರವಾಗಿ ನೆನೆಯುತ್ತೇನೆ ಎಂದು ಸಂಸದ ಪ್ರತಾಪ ಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಣದೀಪ್



ಅಭಿರಾಮ್

ಅಂತರರಾಷ್ಟ್ರೀಯ ಯೋಗ ದಿನಾಚರಣೆ 2015 ರಲ್ಲಿ ಆರಂಭವಾದ ದಿನದಿಂದ ಮೈಸೂರಿಗರಾದ ನಾವು ಸಂಭ್ರಮದಿಂದ ಯೋಗ ಪ್ರದರ್ಶನ ಮಾಡುತ್ತ ಬಂದಿದ್ದೇವೆ. ಈ ಹಿಂದಿನ 7 ವಿಶ್ವ ಯೋಗ ದಿನ ಆಚರಣೆಯಲ್ಲಿ 2017 ಮತ್ತು 2018 ಮೈಸೂರಿನ ಯೋಗ ಇತಿಹಾಸದಲ್ಲಿ ಅತ್ಯಂತ ಸ್ಮರಣೀಯ ವರ್ಷಗಳಾಗಿವೆ. ಏಕೆಂದರೆ 2017 ರಲ್ಲಿ ಅಂದಿನ ಡಿಸಿ ರಣದೀಪ್ ಅವರು ರೇಸ್ ಕೋರ್ಸ್ ನಲ್ಲಿ 50 ಸಾವಿರ ಯೋಗ ಪಟುಗಳನ್ನು ಸೇರಿಸಿ ಗಿನ್ನಿಸ್ ದಾಖಲೆ ನಿರ್ಮಾಣ ಮಾಡುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು. ಅದರಂತೆ 2019 ರಲ್ಲಿ ಅದೇ ರೇಸ್ ಕೋರ್ಸ್ ನಲ್ಲಿ 70 ಸಾವಿರಕ್ಕೂ ಅಧಿಕ ಯೋಗ ಪಟುಗಳನ್ನು ಸೇರಿಸಿ ಅಂದಿನ ಡಿಸಿ ಅಭಿರಾವ್ ಶಂಕರ್ ಎಲ್ಲರ ಗಮನ ಸೆಳೆದಿದ್ದರು. ಈ ಇಬ್ಬರ ಪ್ರಯತ್ನದಿಂದಾಗಿ ಮುಂದೊಂದು ದಿನ 1 ಲಕ್ಷಕ್ಕಿಂತ ಅಧಿಕ ಯೋಗ ಪಟುಗಳನ್ನು ಸೇರಿಸಿ ಮತ್ತೊಮ್ಮೆ ದಾಖಲೆ ಸೃಷ್ಟಿಸ ಬಲ್ಲೆವು ಎಂಬ ಆತ್ಮವಿಶ್ವಾಸ ಮೈಸೂರಿಗಾರದ ನಮಗೆ ಬಂದಿದೆ ಎಂದು ತಿಳಿಸಿರುವ ಅವರು, ಇಬ್ಬರೂ ಹಿಂದಿನ ಜಿಲ್ಲಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುತ್ತಿರುವುದಾಗಿ ಹೇಳಿದ್ದಾರೆ.

ಅಗ್ನಿಪಥ್ ಪ್ರತಿಭಟನೆ ರಾಜಕೀಯ ಪ್ರೇರಿತ

ಬೆಂಗಳೂರು: ಕಾಂಗ್ರೆಸ್ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಇಡೀ ದೇಶದಲ್ಲಿ ಮಾಡುತ್ತಿದೆ. ಅದಕ್ಕೆ ಖಾನಾಪುರ ಶಾಸಕರು ಧರಣಿ ಮಾಡುತ್ತಿರುವುದು ಸಾಕ್ಷಿಯಾಗಿದೆ. ಇಡೀ ಜಗತ್ತಿನಲ್ಲಿ ಅಗ್ನಿಪಥ್ ಎನ್ನುವುದು ವಿನೂತನ ಯೋಜನೆಯಾಗಿದ್ದು ಯುವಕರಿಗೆ ಮಿಲಿಟರಿ ತರಬೇತಿ ನೀಡುವ ವ್ಯವಸ್ಥೆಯಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಯುವಕರು 17ರಿಂದ 21 ವರ್ಷದೊಳಗಿನವರು ಶಿಸ್ತಿನ ಉತ್ತಮವಾದ ಮಿಲಿಟರಿ ತರಬೇತಿಯನ್ನು ಪಡೆದರೆ ಬೇರೆ ಬೇರೆ ಅವಕಾಶ ಸಿಗುತ್ತದೆ. ಸಶಕ್ತವಾಗಿರುವ ಯುವಕರ ಜನಸಂಖ್ಯೆಯನ್ನು ಸಿದ್ಧತೆ ಮಾಡುವ ದೃಷ್ಟಿಯಿಂದ ಸೇನಾಪಡೆಯಲ್ಲಿ ಯುವಶಕ್ತಿಯನ್ನು ತರುವಂತಹ ಮಹಾತ್ವಾಕಾಂಕ್ಷಿ ಯೋಜನೆ ಎಂದರು. ಈಗಾಗಲೇ ಪರೀಕ್ಷೆ ಬರೆದವರಿಗೆ ಆತಂಕವಿದೆ. ಅದನ್ನು ಕೇಂದ್ರ ಸರ್ಕಾರ ಗಮನಿಸಿ ಪರಿಹಾರ ಕೊಡುವ ವಿಶ್ವಾಸವಿದೆ. ಆದರೆ ಈ ನೆಪದಲ್ಲಿ ಸಾರ್ವಜನಿಕ ಸ್ವತ್ತುಗಳಿಗೆ ಬೆಂಕಿ ಹಚ್ಚಿ ನಾಶ ಮಾಡುವುದು ಖಂಡಿತಾ ಕ್ಷಮಾಪಣೆಗೆ ಯೋಗ್ಯವಾದುದಲ್ಲ, ಇದರ ಹಿಂದೆ ರಾಜಕೀಯ ಪ್ರೇರಣೆ ಇರುವುದು ಸ್ಪಷ್ಟ, ಜನರು ಈ ಬಗ್ಗೆ ಸ್ವಲ್ಪ ದಿವಸದಲ್ಲಿಯೇ ಅರ್ಥ ಮಾಡಿಕೊಳ್ಳಲಿದ್ದಾರೆ ಎಂದರು.

ನಾವು ಮಣ್ಣನ್ನು ರಕ್ಷಿಸದಿದ್ದರೆ ಮನುಕುಲ ನಾಶ





ಮೂರನೇ ಪುಟದಿಂದ

ನಮ್ಮೆಲ್ಲರ ಜವಾಬ್ದಾರಿ: ನಾವೆಲ್ಲರೂ ಉಸಿರಾಡುತ್ತಿರುವುದಕ್ಕೆ ಮಣ್ಣು ಕಾರಣ. ಮಾತೃ ಸ್ವರೂಪಿಯಾದ ಮಣ್ಣಿನ ರಕ್ಷಣೆ ನಮ್ಮೆಲ್ಲರ ಹೊಣೆ ಮತ್ತು ಜವಾಬ್ದಾರಿಯಾಗಿದೆ. ಮಾವಿನ ಹಣ್ಣಿಗಾಗಿ ಮರದ ಬುಡದಲ್ಲಿರುವ ಮಣ್ಣಿನ್ನು ತೆಗದು ಹಾಕಿ ಮರವನ್ನೇ ಮೇಲೆ ಕೆಡಗಿಕೊಂಡಂತೆ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡಿದ್ದೇವೆ. ಸಿಹಿ ನೀರಿನಲ್ಲಿ ಬದುಕುವ ಶೇ.92ರಷ್ಟು ಜೀವಿಗಳ ನಾಶವಾಗಿದ್ದು, ಉಳಿದ ಜೀವಿಗಳನ್ನಾದರೂ ಸಂರಕ್ಷಣೆ ಮಾಡಬೇಕಾಗಿದೆ. ಮಣ್ಣಿನಲ್ಲಿ ಹೊರಳಾಡುವ ಹುಳುಗಳಂತೆ ಇರುವ ನಮ್ಮ ಮೇಲೆ ಮಣ್ಣಿನ ಮೇಲಾಗುವ ಎಲ್ಲಾ ಪರಿಣಾಮಗಳು ಬೀರುತ್ತದೆ ಎಂಬುದನ್ನು ಅರಿತುಕೊಳ್ಳಬೇಕು ಎಂದರು.

ಮರಳನ್ನು ಮಣ್ಣಾಗಿಸುತ್ತಿದ್ದಾರೆ: ಅರಬ್ ದೇಶಗಳಲ್ಲಿ ಮರಳಿಗೆ ಜೈವಿಕ ಅಂಶಗಳನ್ನು ಬೆರೆಸಿ ಮಣ್ಣಾಗಿ ಪರಿವರ್ತನೆ ಮಾಡುತ್ತಿದ್ದಾರೆ. ಆದರೆ ನಾವುಗಳು ಇರುವ ಮಣ್ಣಿನ ಫಲವತ್ತತೆಯನ್ನು ತೆಗೆದು ಮಣ್ಣನ್ನು ಮರಳಾಗಿ ಮಾಡುತ್ತಿದ್ದೇವೆ. ಪರಿಸರ ಸಂರಕ್ಷಣೆ ಕುರಿತು ಬರೀ ಮಾಹಿತಿ ಪಡೆದು ಸುಮ್ಮನಾಗುವುದಲ್ಲ. ನಮ್ಮ ಸುತ್ತ–ಮುತ್ತ ಏನಾಗುತ್ತಿದೆ ಎಂಬುದರತ್ತ ಗಮನ ಹರಿಸಬೇಕು. ಕಡೆಯ ಪಕ್ಷ ನಾವು ಎರೆಹುಳುವಿನಂತೆ ವರ್ತಿಸಿದರೆ ಸಾಕು ಮಣ್ಣಿನ ರಕ್ಷಣೆಯಾಗುತ್ತದೆ ಎಂದು ಹೇಳಿದರು.

ಆನಂದಮಯ ಜೀವನ: ನಮ್ಮ ಜೀವನ ಆನಂದಮಯವಾಗಿರಬೇಕು. ನಾವು ಆನಂದವಾಗಿದ್ದರೆ ನಮ್ಮ ಕುಟುಂಟ ನಂತರ ಸಮಾಜ ಆನಂದವಾಗಿರುತ್ತದೆ. ಎಲ್ಲರ ಜೀವನವೂ ಆನಂದಮಯವಾದರೆ ಯಶಸ್ಸು ದೊರಕುತ್ತದೆ. ಬ್ರಹ್ಮಾಂಡದಲ್ಲಿ ನಮ್ಮನ್ನು ಮಾತ್ರವೇ ಮನುಷ್ಯ (HUMAN BEING) ಎನ್ನುವುದು. ಹೇಗಿರಬೇಕು. ಯಾವ ರೀತಿಯ ಕೆಲಸಗಳನ್ನು ಮಾಡಬೇಕು ಎಂಬುದು ನಾವು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ನಿಂತಿರುತ್ತದೆ. ಆನಂದ ಹುಡುಕಾಟದಲ್ಲಿ ಮಣ್ಣಿನ್ನು ಹಾಳು ಮಾಡಿದ್ದೇವೆ. ನಮ್ಮಲ್ಲಿನ ಮಾನವೀಯ ಅಂಶಗಳು ಬೇರೆ ಕಡೆ ಸಾಗುತ್ತಿವೆ ಎಂದು ವಿಷಾದಿಸಿದರು.

ಮಣ್ಣಿನಿಂದಲೇ ಬಂದವರು: ಧರ್ಮ, ಲಿಂಗ, ಮತ ಎಂದೆಲ್ಲಾ ಮಾತನಾಡುವವರೆಲ್ಲರೂ ಮಣ್ಣಿನಿಂದಲೇ ಬಂದವರು. ನಮ್ಮ ಮುಂದಿನ ತಲೆಮಾರಿನ ಒಳಿಗಾಗಿಯಾದರೂ ಮಣ್ಣು ಉಳಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕನಿಷ್ಟ 400 ಕೋಟಿ ಜನರಿಗೆ ಅರಿವು ಮೂಡಿಸಬೇಕು ಎಂದು ಗುರಿ ನಿರ್ಧರಿಸಿಕೊಂಡಿದ್ದೇವೆ. ಜೀವನದಲ್ಲಿ ಬರುವುದೆಲ್ಲವನ್ನೂ ಪಡೆದುಕೊಳ್ಳುವುದಕ್ಕಿಂತ ಉತ್ತಮವಾದುದನ್ನು ಆಯ್ಕೆ ಮಾಡಿ ಕೊಳ್ಳುವುದು ಮುಖ್ಯ. ಹಾಗಾಗಿ ನಮ್ಮ ನಡೆ ಮಣ್ಣು ಉಳಿಸುವತ್ತಾ ಸಾಗಬೇಕು ಎಂದು ಕರೆ ನೀಡಿದರು.

ಭೂಮಿಯ ವಿಸ್ತೀರ್ಣ ಹೆಚ್ಚಿಸಲು ಸಾಧ್ಯವಿಲ್ಲ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮಣ್ಣಿನಲ್ಲಿ ಮುಖ್ಯವಾಗಿ ಸದಾ ತೇವಾಂಶ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಅಂತರ್ಜಲ ಮಟ್ಟ ಹೆಚ್ಚಾಗುತ್ತದೆ. ಭೂಮಿಯ ವಿಸ್ತೀರ್ಣ ಹೆಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಭೂಮಿಗೆ ಬೇಡವಾದುದನ್ನು ಬೆರೆಸದಿದ್ದರೇ ಸಾಕು ಭೂಮಿ(ಮಣ್ಣು) ಸ್ವಚ್ಛವಾಗಿರುತ್ತದೆ. ಮುಖ್ಯವಾಗಿ ಪ್ರತಿಯೊಬ್ಬರು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಮಣ್ಣು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಒಂದು ಕಾಲದಲ್ಲಿ ರೈತರು ಮಣ್ಣಿಗೆ(ಭೂಮಿಗೆ)ಪೂಜೆ ಸಲ್ಲಿಸಿ ಉಳುಮೆ ಮಾಡುತ್ತಿದ್ದರು. ಭೂಮಿಯನ್ನು ತಾಯಿಯೆಂದೇ ಪ್ರೀತಿಸಿ, ಗೌರವಿಸಿದ ದೇಶ ಭಾರತ. ಭೂಮಿಯ ಸವಕಳಿಯನ್ನು ತಪ್ಪಿಸುವುದು, ರಸಾಯನಿಕ ಮುಕ್ತಗೊಳಿಸಿ ಮಣ್ಣನ್ನು ಸಂರಕ್ಷಣೆ ಮಾಡಬೇಕು ಎಂದು ಹೇಳಿದರು.

ಮುಗಿಲು ಮುಟ್ಟಿದ 'ಮಣ್ಣು ಉಳಿಸಿ' ಘೋಷಣೆ

ಮೈಸೂರು, ಜೂ.19(ಎಂಕೆ)– ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದ ಆರಣದಲ್ಲಿ 'ಮಣ್ಣು ಉಳಿಸಿ'... 'ಸೇವ್ ಸಾಯಿಲ್'... ಘೋಷಣೆ ಮುಗಿಲು ಮುಟ್ಟಿತ್ತು. ಇಶಾ ಪ್ರತಿಷ್ಠಾನದ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ್ ಹಮ್ಮಿಕೊಂಡಿರುವ 'ಮಣ್ಣು ಉಳಿಸಿ' ಅಭಿಯಾನಕ್ಕೆ ಮೈಸೂರಿನಲ್ಲಿ ಭವ್ಯ ಸ್ವಾಗತ ದೊರೆಯಿತು. ಬಯಲು ರಂಗಮಂದಿರದಲ್ಲಿ ನೆರೆದಿದ್ದ ಸಾವಿರಾರು ಮಂದಿ ಯುವ ಸಮೂಹ 'ಮಣ್ಣು ಉಳಿಸಿ' ಕರಪತ್ರಗಳನ್ನು ಹಿಡಿದು ಘೋಷಣೆ ಮೊಳಗಿಸಿದರಲ್ಲದೆ ಮಣ್ಣಿನ ಸಂರಕ್ಷಣೆ ಸಂಕಲ್ಪ ಮಾಡಿದರು.

ಅದ್ದೂರಿ ಸ್ವಾಗತ: ಇಶಾ ಪ್ರತಿಷ್ಠಾನದ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ್, ಬೈಕ್‌ನಲ್ಲಿ ಆಗಮಿಸುತ್ತಿದ್ದಂ ತೆಯೇ ಸಾಂಸ್ಕೃತಿಕ ಕಲಾತಂಡಗಳ ಹಾಗೂ ಅಪಾರ ಅಭಿಮಾನಿಗಳು ಸ್ವಾಗತ ಕೋರಿದರು. ಬಳಿಕ ವೇದಿಕೆ ಆಗಮಿಸಿದ ಸದ್ಗುರು, ಸುತ್ತೂರು ಶ್ರೀ ಹಾಗೂ ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ವೇದಿಕೆ ಹಂಚಿಕೊಂಡರು.

ಗಮನ ಸೆಳೆದ ಭರತನಾಟ್ಯ, ರಾರಾಜಿಸಿದ ಕರಪತ್ರಗಳು: ಬಯಲು ರಂಗಮಂದಿರದೆಲ್ಲೆಡೆ 'ಮಣ್ಣು ಉಳಿಸಿ' ಕರಪತ್ರಗಳು ರಾರಾಜಿಸಿದವು. ಅಭಿಯಾನ ಟೀ ಶರ್ಟ್ ತೊಟ್ಟ ಯುವ ಸಮೂಹ ಕರಪತ್ರಗಳನ್ನು ಹಿಡಿದು ಕುಣಿದು ಕುಪ್ಪಳಿದರು. ಅಲ್ಲದೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ನೀಡಿದ ಭರತ ನಾಟ್ಯ ಪ್ರದರ್ಶನ ಹಾಗೂ ಗಾಯನ ಎಲ್ಲರ ಗಮನ ಸೆಳೆಯಿತು. 'ಮಣ್ಣು ಉಳಿಸಿ' ಅಭಿಯಾನ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿನ 600 ವಿಶೇಷಚೇತನ ವಿದ್ಯಾರ್ಥಿಗಳು ಭಾಗವಹಿಸಿದರು. ಅಲ್ಲದೆ ತಮ್ಮದೇ ಭಾಷೆಯಲ್ಲಿ ಪ್ರಶ್ನೆಗಳನ್ನು ಕೇಳಿ ಎಲ್ಲರನ್ನು ನಿಬ್ಬೆರಗಾಗುವಂತೆ ಮಾಡಿದರು.

ಮಣ್ಣನ್ನು ಭೂತಾಯಿ ಎಂದು ಪೂಜಿಸುವುದು ನಮ್ಮ ಸಂಸ್ಕೃತಿ

ಕಲ್ಲನ್ನು ಕೆತ್ತಿ ದೇವರ ಮೂರ್ತಿಗಳನ್ನಾಗಿ ಪೂಜಿಸುತ್ತಿದ್ದೇವೆ. ಇಂತಹ ನಮ್ಮ ಶ್ರೇಷ್ಠ ಸಂಸ್ಕೃತಿಯ ಬಗ್ಗೆ ಮೂಗು ಮುರಿಯುತ್ತಿದ್ದರು. ಭಾರತದ ನೆಲದಲ್ಲಿ ಪ್ರತಿಪಾದಿಸಿರುವ ಸಂಸ್ಕೃತಿಯನ್ನು ಇಂದು ಇಡೀ ಜಗತ್ತು ಬೇರೆ ಬೇರೆ ರೀತಿಯಲ್ಲಿ ಒಪ್ಪಿಕೊಂಡಿದೆ. ಅದಕ್ಕೆ ಮಣ್ಣು ಉಳಿಸಿ ಅಭಿಯಾನವನ್ನು ವಿವಿಧ ದೇಶಗಳು ಗೌರವಿಸಿರುವುದು ಒಂದು ನಿದರ್ಶನವಾಗಿದೆ ಎಂದರು.

ನಮ್ಮ ದೇಶದಲ್ಲಿ ಜನರಿಗೆ ಯಾವ ಮಣ್ಣಿಗೆ ಯಾವ ಗೊಬ್ಬರ ಹಾಕಬೇಕು ಮತ್ತು ಅದರ ಗುಣ ಲಕ್ಷಣವೇನು? ಎಂಬುದರ ಬಗ್ಗೆ ತಿಳಿದಿಲ್ಲ. ಅದಕ್ಕಾಗಿ ಹಲವು ದಿನಗಳ ಹಿಂದೆ ಪ್ರಧಾನಿ ಮೋದಿ ಅವರು ಸಾಯಿಲ್ ಹೆಲ್ತ್ ಕಾರ್ಡ್ ನೀಡುತ್ತೇವೆ ಎಂದು ಹೇಳಿದ್ದರು. ಆದರೆ ಜನರು ಮನುಷ್ಯರಿಗೆ ಹೆಲ್ತ್ ಕಾರ್ಡ್ ಸರಿ. ಮಣ್ಣಿಗೆ ಯಾಕೆ ಕಾರ್ಡ್ ಎಂದು ಯೋಚಿಸಿದಲ್ಲದೆ ಅದರ ಬಗ್ಗೆ ಅನುಮಾನ ವ್ಯಕ್ತಪಡಿಸಿದರು.

ಮಳೆ ಬಂದ ನಂತರ ಯೂರಿಯ ಹಾಕಿ. ಕಾಯಿ ದಪ್ಪ ಆಗಬೇಕು ಎಂದರೆ ಪೊಟಾಷಿಯಂ ಹಾಕು. ಇಲ್ಲ ಎಂದರೆ ಎಂಓಪಿ, ಜಿಓಪಿ ಇವು ಬಿಟ್ಟರೇ ಬೇರೆ ಏನು ತಿಳಿದಿಲ್ಲ. ಭೂಮಿಯ ಫಲವತ್ತತೆಯನ್ನು ಹಾಳು ಮಾಡುವ ಗೊಬ್ಬರ ಎಂದರೆ ಅದು ಯೂರಿಯ. ಈ ಕಾರಣದಿಂದ ಮೋದಿ ಅವರು ಮಣ್ಣಿನ ಹೆಲ್ತ್ ಕಾರ್ಡ್ ತಂದಿದ್ದು, ಇದರ ಮೂಲಕ ಯೂಟ್ರಿಯೇಟ್ ಸಬ್ಸಿಡಿಯನ್ನು ಕೊಡಲು ತೀರ್ಮಾನಿಸಿದ ಪ್ರಮುಖ ಉದ್ದೇಶವೆಂದರೆ ಕ್ರಿಮಿನಾಶಗಳ ಬಳಕೆ ಕಡಿಮೆ ಮಾಡುವುದು ಅಷ್ಟೇ. ಇತ್ತೀಚಿಗೆ ಆರ್ಗನಿಕ್ ಫಾರ್ಮಿಂಗ್ ಬಗ್ಗೆ ಹೇಳಲು ಮುಂದಾಗಿತ್ತು. ಅದರ ಬಗ್ಗೆಯೂ ಜನರು ಅನುಮಾನ ವ್ಯಕ್ತಪಡಿಸಿದ್ದರು. ಇವುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಬೇಕಿತ್ತು. ಆದರೆ ಸದ್ಗುರು ಅವರು ಮುಂದಾಳತ್ವವನ್ನು ವಹಿಸಿಕೊಂಡು ಪ್ರಜ್ಞಾವಂತ ನಾಗರಿಕರಿಗೆ ಮಣ್ಣು ಉಳಿಸಿ ಅಭಿಯಾನವನ್ನು ಮಾಡುತ್ತಿದ್ದಾರೆ. ಅವರು ಹೇಳುವ ಮಾತುಗಳನ್ನು ಕೇಳಿ ಜೀವನದಲ್ಲಿ ಅಳವಡಿಸಿಕೊಳ್ಳವ ಕೆಲಸವನ್ನು ಮಾಡಬೇಕು ಎಂದರು.

ಮಣ್ಣು ಉಳಿಸುವ ಕಾರ್ಯದ ಜೊತೆಗೆ ಭೂಮಿಗೆ ತ್ಯಾಜ್ಯ ಸೇರುತ್ತಿರುವ ಬಗ್ಗೆಯೂ ಅರಿವೂ ಮೂಡಿಸುವ ಕೆಲಸ ಮಾಡಬೇಕು ಎಂದು ಸದ್ಗುರುಗಳಲ್ಲಿ ವಿಶೇಷ ಮನವಿಯನ್ನು ಮಾಡುತ್ತಿದ್ದೇನೆ. ಏಕೆಂದರೆ, ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಒಂದು ಘಟಕವಿದೆ ನಗರದ ಯಾವುದೇ ತ್ಯಾಜ್ಯವಿದ್ದರು, ಅಲ್ಲಿ ತೆಗೆದುಕೊಂಡು ಹಾಕುತ್ತೇವೇ ಅಲ್ಲಿ 7 ಲಕ್ಷ ಟನ್ ತ್ಯಾಜ್ಯವಿದೆ. ನೋಡುತ್ತಿದ್ದರೆ ಮತ್ತೊಂದು ಚಾಮುಂಡಿ ಬೆಟ್ಟದಂತೆ ಬೆಳೆಯುತ್ತಿತ್ತು. ನಾನು ಪ್ರಧಾನಿ ಮೋದಿ ಅವರ ಬಳಿ ತೆರಳಿ ಇದನ್ನು ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿ ಸ್ವಚ್ಛಗೊಳ್ಳಿಸಬೇಕು ಎಂದು ಮನವಿ ಮಾಡಿದ್ದೆ.

ಈ ರೀತಿ ತ್ಯಾಜ್ಯ ತುಂಬಿದರೆ ಅಂತರ್ಜಲ ಹಾಳಾಗುತ್ತದೆ ಎಂಬ ಉದ್ದೇಶದಿಂದ ಹೊಸ ಯೋಜನೆಯನ್ನು ತಂದಿದ್ದೇವೆ. ಇನ್ನೂ 3 ತಿಂಗಳಿನಲ್ಲಿ ಅದನ್ನು ಸಂಪೂರ್ಣ ಸ್ವಚ್ಛ ಗೊಳಿಸುತ್ತೇವೆ. ಭೂಮಿ ಒಳಗೆ ತ್ಯಾಜ್ಯ ತುಂಬುವುದನ್ನು ಇಡೀ ದೇಶದಾದ್ಯಂತ ಮುಂದುವರೆಸುತ್ತಿದ್ದೇವೆ. ಕಸದ ಮೇಲೆ ಮಣ್ಣು ಎಳೆದು ಬಿಡುವುದರಿಂದ ಭೂಮಿಗೆ ಅದು ಸೇರಿ ವಿಷಮಯವಾಗುತ್ತದೆ ಅದನ್ನೇ ನಾವು ಕುಡಿಯುತ್ತಿದ್ದೇವೆ. ಆದರಿಂದ ಮಣ್ಣು ಉಳಿಸುವ ಅಭಿಯಾನದ ಈ ವಿಷಯವನ್ನು ಸೇರಿಕೊಳ್ಳವುದರ ಜೊತೆಗೆ ಜನ ಪ್ರತಿನಿಧಿಗಳು ಮತ್ತು ಸಮಾಜಕ್ಕೆ ಅರಿವು ಮೂಡಿಸಿ ಎಂದು ಸದ್ಗುರು ಅವರ ಬಳಿ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದರು.

ಜಿಲ್ಲೆಗೆ ಹೆಚ್ಚುವರಿ ಸಿವಿಲ್ ನ್ಯಾಯಾಲಯ

ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ. ಅರುಣ್ ಭರವಸೆ

ಚಾಮರಾಜನಗರ ಜೂ.19(ಎಸ್‌ಎಸ್)– ಜಿಲ್ಲೆಗೆ ಶೀಘ್ರದಲ್ಲೇ ಮತ್ತೊಂದು ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮಂಜೂರು ಮಾಡಿಸಲು ಕ್ರಮವಹಿಸುವುದಾಗಿ ಹೈಕೋರ್ಟ್ ನ್ಯಾಯಮೂರ್ತಿಗಳೂ ಆದ ಚಾಮರಾಜನಗರ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಎಂ.ಐ. ಅರುಣ್ ಭರವಸೆ ನೀಡಿದರು.



ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೆ ಭಾನುವಾರ ಆಗಮಿಸಿ ಜಿಲ್ಲಾ ವಕೀಲರ ಸಂಘದಿಂದ ಸನ್ಮಾನ ಸ್ವೀಕರಿಸಿದರಲ್ಲದೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಮನವಿ ಆಲಿಸಿ ಮಾತನಾಡಿದರು. ಜಿಲ್ಲಾ ನ್ಯಾಯಾಲಯದ ಸಂಕೀರ್ಣ ಹಾಗೂ ಜಿಲ್ಲಾ ವಕೀಲರ ಸಂಘಕ್ಕೆ ಅವಶ್ಯವಿರುವ ಮೂಲ ಸೌಕರ್ಯ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ನ್ಯಾಯಾಧೀಶರು, ವಕೀಲರು ಉತ್ತಮ ಬಾಂಧವ್ಯ ಹೊಂದಿರಬೇಕು. ಆಗಾದರೆ ಕಕ್ಷಿದಾರರಿಗೆ ನ್ಯಾಯ ಒದಗಿಸ ಬಹುದು. ಸಂಘದ ವಕೀಲರು ಹೆಚ್ಚಿ ಓದಿನ ಕಡೆ ಗಮನ ಹರಿಸಬೇಕು. ವಕೀಲರಿಗೆ ಕಾನೂನಿನ ಉಪನ್ಯಾಸ ಕಾರ್ಯಕ್ರಮಗಳನ್ನು ಸಂಘ ಆಯೋಜಿಸಬೇಕು. ಇ–ಲೈಬ್ರರಿಯನ್ನು ವಕೀಲರು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರಲ್ಲದೆ, ಚಾಮರಾಜನಗರ ಜಿಲ್ಲಾ ವಕೀಲರ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಶಂಸಿಸಿದರು.

ಇದಕ್ಕೂ ಮುನ್ನ ನ್ಯಾಯಮೂರ್ತಿಗಳನ್ನು ಸನ್ಮಾನಿಸಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ನಗರದಲ್ಲಿ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇದ್ದು, ಕಕ್ಷಿದಾರರಿಗೆ ತ್ವರಿತ ನ್ಯಾಯದಾನ ಮಾಡಲು ಕಷ್ಟಸಾಧ್ಯವಾಗಿದೆ. ಆದ್ದರಿಂದ ಮತ್ತೊಂದು ಹೆಚ್ಚುವರಿ ಸಿವಿಲ್ ನ್ಯಾಯಾಲಯ ಅವಶ್ಯಕತೆ ಇದೆ. ಜೊತೆಗೆ ನ್ಯಾಯಾಲಯದ ಸಂಕೀರ್ಣದಲ್ಲಿ ಮೂಲಸೌಕರ್ಯ ಒದಗಿಸಬೇಕಾಗಿದೆ. ಜಿಲ್ಲಾ ವಕೀಲರ ಸಂಘದಲ್ಲಿ ಸೆಮಿನಾರ್ ಹಾಲ್ ನಿರ್ಮಿಸಲು ಹೀಗಾಗಲೇ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಸೆಮಿನಾರ್ ಹಾಲ್ ಬಹುಬೇಗ ನಿರ್ಮಿಸಿ ಕೊಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಎಂ.ಆರ್.ಲೋಕಪ್ಪ, ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಎಸ್. ಹೊನ್ನಸ್ವಾಮಿ, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಕೆ.ವಿರೂಪಾಕ್ಷಸ್ವಾಮಿ, ಜಂಟಿ ಕಾರ್ಯದರ್ಶಿ ಮಲ್ಲು ಹಾಗೂ ಜಿಲ್ಲೆಯ ಎಲ್ಲಾ ನ್ಯಾಯಾಧೀಶರಿದ್ದರು.

ಇಂದು ಮೈಸೂರಲ್ಲಿ 'ಕರ್ಮಯೋಗಿ ರೈತನ ಕಾಯಕ ದಿನ' ಹೋರಾಟ

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್

ಚಾಮರಾಜನಗರ, ಜೂ.19–ಕೃಷಿ ಉತ್ಪನ್ನ ಖಾತರಿ ಎಂಎಸ್‌ಪಿಗಾಗಿ ಪ್ರಧಾನ ಮಂತ್ರಿಗಳ ಗಮನ ಸೆಳೆಯಲು ಜೂ.20ರಂದು ಮೈಸೂರಿನಲ್ಲಿ 'ಕರ್ಮಯೋಗಿ ರೈತ ಕಾಯಕ ದಿನ' ಎಂಬ ವಿಭಿನ್ನ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಉತ್ಪನ್ನಗಳ ಖಾತರಿ ಕನಿಷ್ಠ ಬೆಂಬಲ ಬೆಲೆ ಕಾನೂನು ಜಾರಿಗೊಳಿಸುವ ನಿಟ್ಟಿನಲ್ಲಿ ಜೂ. 20 ರಂದು ಮೈಸೂರಿಗೆ ಆಗಮಿಸುವ ಪ್ರಧಾನಿ ನರೇಂದ್ರಮೋದಿ ಅವರ ಗಮನ ಸೆಳೆಯಲು ರೈತರ ಉತ್ಪನ್ನಗಳನ್ನು ಮೈಸೂರಿನ ಗಾಂಧಿ ಪ್ರತಿಮೆಯ ಮುಂಭಾಗದ ರಸ್ತೆಯಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಮಾರುವ ಮೂಲಕ 'ರೈತರನ್ನು ರಕ್ಷಿಸಿ ಖಾತರಿ ಬೆಲೆ ನೀಡಿ' ಎಂದು ರೈತ ಸಂಘಟನೆಗಳಿಂದ ಕರ್ಮಯೋಗಿ ರೈತ ಕಾಯಕ ದಿನ ಆಚರಿಸಲಾಗುತ್ತಿದೆ ಎಂದರು.

ಪ್ರಧಾನಿ ಮೋದಿ ಅವರು ಅಧಿಕಾರಕ್ಕೆ ಬರುವ ಮೊದಲು ಡಾ.ಸ್ವಾಮಿನಾಥನ್ ವರದಿ ಜಾರಿಗೆ ತರುವ ಹಾಗೂ 2022ಕ್ಕೆ ರೈತರ ಆದಾಯ ದ್ವಿಗುಣ ಮಾಡುವ ಭರವಸೆ ನೀಡಿ ಹುಸಿಗೊಳಿಸಿದ್ದಾರೆ. ರೈತರ ಉತ್ಪಾದನಾ ವೆಚ್ಚ ಏರಿಕೆ ಮಾಡಿದ್ದಾರೆ. ಇನ್ನಾದರೂ ರೈತರಿಗೆ ಖಾತರಿ ಬೆಲೆ ಸಿಗುವಂತಹ ಕಾನೂನು ರಚಿಸಲಿ ಎಂದು ಒತ್ತಾಯಿಸಲಾಗುವುದು ಎಂದರು.

ಕೃಷಿ ಸಾಲ ನೀಡಲು ಬ್ಯಾಂಕ್‌ಗಳು ರೈತರ ಸಿಬಿಲ್ ಸ್ಕೋರ್ ಕೇಳುತ್ತಿದ್ದಾರೆ. ಅತಿವೃಷ್ಟಿ–ಅನಾವೃಷ್ಟಿಯಿಂದ ಬೆಳೆ ಹಾನಿಯಾದ ರೈತರು ಸಕಾಲಕ್ಕೆ ಸಾಲ ತುಂಬಲು ಹೇಗೆ ಸಾಧ್ಯ ಎನ್ನುವುದನ್ನು ಅರಿಯದೇ ರೈತರಿಗೆ ಮಾರಕ ವಾಗುವ ನೀತಿಗಳನ್ನು ರೂಪಿಸಿದ್ದಾರೆ. ದೇಶ ಬಿಟ್ಟು ಓಡಿ ಹೋಗುವ ಬಂಡವಾಳ ಶಾಹಿಗಳಿಗೆ ಲಕ್ಷಾಂತರ ಕೋಟಿ ಸಾಲ ನೀಡುವ ಬ್ಯಾಂಕುಗಳು ರೈತರನ್ನು ಗುಲಾಮರಂತೆ ನೋಡುತ್ತಿವೆ. ಈ ನಿಲುವನ್ನು ಸಡಿಲಿಸದಿದ್ದರೆ ಇದೇ 28ರಂದು ಬೆಂಗಳೂರು ಆರ್‌ಬಿಐ ಮುಂದೆ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ಬೆಳೆ ವಿಮಾ ಕಂಪನಿಗಳು ರೈತರಿಗೆ ಟೋಪಿ ಹಾಕುತ್ತಿವೆ ಕಳೆದ ವರ್ಷದ ವಿಮಾ ಪರಿಹಾರ 200 ಕೋಟಿ ಬಾಕಿ ಉಳಿಸಿಕೊಂಡು ಬೆಳೆ ವಿಮೆ ಹಣ ತುಂಬುವಂತೆ ರೈತರಿಗೆ ಕರೆ ಕೊಡುತ್ತಾರೆ. ಬೆಳೆ ವಿಮಾ ನೀತಿಯೇ ಸರಿ ಇಲ್ಲ. ಕೂಡಲೇ ಸರಿಪಡಿಸಲು ಕ್ರಮ ಕೈ ಗೊಳ್ಳಲಿ ಎಂದು ಆಗ್ರಹಿಸಿದರು.

ಪ್ರಸಕ್ತ ಸಾಲಿಗೆ ಉತ್ತರಪ್ರದೇಶದಲ್ಲಿ ನೀಡುವಂತೆ ಕಬ್ಬಿಗೆ ಕನಿಷ್ಠ 3,500 ರೂ. ಬೆಲೆ ನಿಗದಿ ಮಾಡಬೇಕು ಎಂದು ಜೂ. 9 ರಂದು ನಡೆದ ಸರ್ಕಾರದ ಸಕ್ಕರೆ ಮಂತ್ರಿಗಳ ಅಧ್ಯಕ್ಷತೆಯ ಕಬ್ಬು ಖರೀದಿ ಮಂಡಳಿ ಸಭೆಯಲ್ಲಿ ಒತ್ತಾಯಿಸಲಾಗಿದೆ ಎಂದು ಇದೇ ವೇಳೆ ಮಾಹಿತಿ ನೀಡಿದರು.

ಚಾಮರಾಜನಗರ ತಾಲೂಕಿನ ಉಡಿಗಾಲ ಆನೆ ಮಡುವಿನ ಕೆರೆಗೆ ನೀರು ತುಂಬಿಸುವ ಯೋಜನೆ ರಾಜಕಾರಣವಾಗಬಾರದು. ಹೋರಾಟ ನಡೆಸುತ್ತಿರುವ ರೈತರಿಗೆ ನಮ್ಮ ಸಂಪೂರ್ಣ ಬೆಂಬಲವಿದೆ ಕಾಲುವೆ ಮುಖಾಂತರವೇ ನೀರು ಹರಿಸುವ ಬೇಡಿಕೆ ಈಡೇರಿಸಬೇಕು. ನಿರ್ಲಕ್ಷ ಮಾಡಿದರೆ ಮುಖ್ಯ ಇಂಜಿನಿಯರ್ ಕಚೇರಿಗೆ ಮುತ್ತಿಗೆ ಹಾಕಿ ನಿರಂತರ ಹೋರಾಟ ನಡೆಸಬೇಕಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಅವರು ಕೂಡಲೇ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಪಟೇಲ್ ಶಿವಮೂರ್ತಿ, ಬರಡನಪುರ ನಾಗರಾಜ್, ಮೂಕಳ್ಳಿ ಮಾದೇವಸ್ವಾಮಿ ಉಡಿಗಾಲ ಮಾದೇವಸ್ವಾಮಿ, ಬಾಬು, ಹಾಲು ನಾಗರಾಜು ಶಿವಸ್ವಾಮಿ ಮಂಜು ಇದ್ದರು.

ಗುಂಡ್ಲುಪೇಟೆ ಜೆಎಸ್‌ಎಸ್ ಪಿಯು ಕಾಲೇಜಿಗೆ ಶೇ.94 ಫಲಿತಾಂಶ

ಗುಂಡ್ಲುಪೇಟೆ, ಜೂ.19(ಸೋಮ್.ಜಿ)–ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪಟ್ಟಣದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿಗೆ ಶೇ.94ರಷ್ಟು ಫಲಿತಾಂಶ ಲಭಿಸಿದೆ ಎಂದು ಪ್ರಾಂಶುಪಾಲ ಹೆಚ್.ಪಿ.ಬಸವರಾಜಪ್ಪ ತಿಳಿಸಿದ್ದಾರೆ.


ಸ್ಫೂರ್ತಿ


ರಕ್ಷಿತಾ

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ಕಾಲೇಜಿನಿಂದ ಒಟ್ಟು ಕಲಾ ಮತ್ತು ವಾಣಿಜ್ಯ ವಿಭಾಗದಿಂದ 128 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 120 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿ, ಕಾಲೇಜಿಗೆ ಶೇ.94ರಷ್ಟು ಫಲಿತಾಂಶ ಬಂದಿದೆ.

ಕಲಾ ವಿಭಾಗ: ಒಟ್ಟು 51 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ ಒಟ್ಟು 46 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದು, ಶೇ.90.19 ಫಲಿತಾಂಶ ಬಂದಿದೆ. ಇದರಲ್ಲಿ ಅತ್ಯುನ್ನತ ದರ್ಜೆ–13, ಪ್ರಥಮ ದರ್ಜೆ–24, ದ್ವಿತೀಯ ದರ್ಜೆ–5 ಹಾಗೂ 4 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗ: ಒಟ್ಟು 77 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ ಒಟ್ಟು 74 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದು, ಶೇ.96.10 ಫಲಿತಾಂಶ ಬಂದಿದೆ. ಇದರಲ್ಲಿ ಅತ್ಯುನ್ನತ ದರ್ಜೆ–42, ಪ್ರಥಮ ದರ್ಜೆ–26, ದ್ವಿತೀಯ ದರ್ಜೆ–5 ಹಾಗೂ ಓರ್ವ ವಿದ್ಯಾರ್ಥಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ರಕ್ಷಿತಾ ವಾಣಿಜ್ಯ ವಿಭಾಗದಲ್ಲಿ 574 ಮತ್ತು ಕಲಾ ವಿಭಾಗದಲ್ಲಿ ಸ್ಫೂರ್ತಿ 566 ಅಂಕಗಳನ್ನು ಗಳಿಸುವುದರೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಉತ್ತಮ ಫಲಿತಾಂಶ ನೀಡಿದ ವಿದ್ಯಾರ್ಥಿನಿಯರನ್ನು ಕಾಲೇಜಿನ ಪ್ರಾಂಶುಪಾಲ ಹೆಚ್.ಪಿ.ಬಸವರಾಜಪ್ಪ ಮತ್ತು ಬೋಧಕರು ಅಭಿನಂದಿಸಿದ್ದಾರೆ.

ಅರಣ್ಯಾಧಿಕಾರಿಗಳ ಕಾರ್ಯಾಚರಣೆ: ಐವರು ಬೇಟೆಗಾರರ ಬಂಧನ

ಚಾಮರಾಜನಗರ, ಜೂ.19–ತಾಲೂಕಿನ ಪುಣಜನೂರು ವನ್ಯಜೀವಿ ವಲಯ ಹಾಗೂ ಕೊಳ್ಳೇಗಾಲ ತಾಲೂಕಿನ ಕೊತ್ತನೂರು ಅರಣ್ಯ ವಲಯದಲ್ಲಿ ಅರಣ್ಯಾಧಿಕಾರಿಗಳು ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ



ಪ್ರದೇಶದ ಪುಣಜನೂರು ವನ್ಯಜೀವಿ ವಲಯದ ಮೂಕನಪಾಳ್ಯ ವ್ಯಾಪ್ತಿಯಲ್ಲಿ ಜಿಂಕೆ ಮಾಂಸ ಹಾಗೂ ಶ್ರೀಗಂಧದ ತುಂಡುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ತಾಲೂಕಿನ ಎತ್ತೇಗೌಡನದೊಡ್ಡಿಯ ಬೊಮ್ಮೇಗೌಡ ಅಲಿಯಾಸ್ ಬೊಮ್ಮ(52) ಹಾಗೂ ಮೂಕನಪಾಳ್ಯ ಗ್ರಾಮದ ರಾಘವೇಂದ್ರ ನಾಯಕ(45) ಬಂಧಿತರು. ಇವರಿಂದ 35 ಕೆ.ಜಿ. ಜಿಂಕೆ ಮಾಂಸ, 6.400 ಗ್ರಾಂ. ಹಸಿ ಶ್ರೀಗಂಧದ ತುಂಡುಗಳು ಸೇರಿದಂತೆ ದ್ವಿಚಕ್ರ (ಟಿವಿಎಸ್ ಸೂಪರ್ ಎಕ್ಸ್‌ಎಲ್) ವಾಹನ ವಶಕ್ಕೆ ಪಡೆಯಲಾಗಿದೆ.

ರಾಘವೇಂದ್ರ ನಾಯಕ್ ಅವರು ದ್ವಿಚಕ್ರವಾಹನದಲ್ಲಿ ಜಿಂಕೆ ಮಾಂಸ ಹಾಗೂ ಗಂಧದ ತುಂಡುಗಳನ್ನು ಸಾಗಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಪುಣಜನೂರು ವಲಯದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ವಿಚಾರಣೆಗೆ ಒಳಪಡಿಸಿದಾಗ ಮತ್ತೋರ್ವ ಆರೋಪಿ ತಪ್ಪೊಪ್ಪಿಕೊಂಡಿದ್ದು, ಮತ್ತೋರ್ವ ಆರೋಪಿ ಬೊಮ್ಮನ ಹೆಸರು ಬಾಯಿಬಿಟ್ಟಿದ್ದಾನೆ. ಬಳಿಕ ಬೊಮ್ಮೇಗೌಡ ಅವರನ್ನು ಬಂಧಿಸಲು ಮುಂದಾದ ಸಂದರ್ಭದಲ್ಲಿ ಸಿಬ್ಬಂದಿಯೊಬ್ಬರ ಮೇಲೆ ಬೊಮ್ಮೇಗೌಡ ಹಲ್ಲೆ ನಡೆಸಿ, ಪ್ರತಿರೋಧ ತೋರಿದ್ದು, ನಂತರ ಆತನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ಪುಣಜನೂರು ವಲಯ ಅರಣ್ಯ ಅಧಿಕಾರಿ ನಿಸಾರ್ ಪಿ.ಕೆ.ಅಹಮ್ಮದ್ ತಿಳಿಸಿದ್ದಾರೆ. ಆರೋಪಿಗಳಿಂದ ಜಿಂಕೆ ಮಾಂಸ ಹಾಗೂ ಶ್ರೀಗಂಧದ ತುಂಡುಗಳನ್ನು ವಶಕ್ಕೆ ಪಡೆದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕೊಳ್ಳೇಗಾಲ ವರದಿ: ತಾಲೂಕಿನ ಕೊತ್ತನೂರು ಅರಣ್ಯ ಪ್ರದೇಶದಲ್ಲಿ ಜಿಂಕೆ ಕೊಂದು ಅವರ ತಲೆ–ಕಾಲು, ಚರ್ಮವನ್ನು ಬೇರೆಡೆ ಸಾಗಿಸುತ್ತಿದ್ದ ಮೂವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲೂಕಿನ ರಾಚಪ್ಪಾಜಿ ನಗರದ ಮಾದಪ್ಪ(53), ಹೊಳಸಾಲ(53) ಹಾಗೂ ಸುಂಡ್ರಹಳ್ಳಿ ಕೃಷ್ಣ(32) ಬಂಧಿತ ಆರೋಪಿಗಳು. ಇವರು ಕೊತ್ತನೂರು ಅರಣ್ಯ ಪ್ರದೇಶದಲ್ಲಿ ಪ್ರಾಣಿಗಳನ್ನು ಬೇಟೆಯಾಡುವ ಸಲುವಾಗಿ ಉರುಳನ್ನು ಹಾಕಿದ್ದರು. ಅಲ್ಲದೆ ಜಿಂಕೆಯನ್ನು ಬೇಟೆಯಾಡಿ ಅದರ ತಲೆ–ಕಾಲು, ಚರ್ಮವನ್ನು ಬೇರೆಡೆಗೆ ಸಾಗಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿ ಮೂವರನ್ನು ಬಂಧಿಸಿದ್ದಾರೆ. ಈ ಸಂಬಂಧ ಅರಣ್ಯ ಇಲಾಖೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಬಂಧಿತರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಕಾರ್ಯಾಚರಣೆಯಲ್ಲಿ ಕೊತ್ತನೂರು ಅರಣ್ಯ ವಲಯಾಧಿಕಾರಿ ಶಶಿಕುಮಾರ್, ಸುನೀಲ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.



ಇಂದು ಉನ್ನತೀಕರಿಸಿವ ಐಟಿಐ ಲೋಕಾರ್ಪಣೆ

ಚಾಮರಾಜನಗರ, ಜೂ.19– ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಕರ್ನಾಟಕ ಸರ್ಕಾರದ ವಿನೂತನ ಉದ್ಯೋಗ ಯೋಜನೆಯಡಿ ಜಾಗತಿಕ ಕೈಗಾರಿಕೆ ಹಾಗೂ ಅಸೆಂಬ್ಲಿ ಲೈನುಗಳಲ್ಲಿ ಉದ್ಯೋಗಾವಕಾಶಗಳಿಗಾಗಿ ಯುವಜನತೆಗೆ ಅತ್ಯಾಧುನಿಕ ತಂತ್ರಜ್ಞಾನಗಳ ತರಬೇತಿ ತಾಂತ್ರಿಕ ಕೇಂದ್ರವನ್ನಾಗಿ ಉನ್ನತೀಕರಿಸಲಾಗಿರುವ ಕಾಳನಹುಂಡಿ ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಜೂ.20ರಂದು ಮಧ್ಯಾಹ್ನ 3 ಗಂಟೆಗೆ ಐಟಿಐನ ಆವರಣದಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮವನ್ನು ಬೆಂಗಳೂರಿನ ಬೇಸ್‌ಕ್ಯಾಂಪ್‌ನಲ್ಲಿ ವರ್ಚುವೆಲ್ ಮೂಲಕ ಉದ್ಘಾಟಿಸುವರು. ಈ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಉಪಸ್ಥಿತರಿರುವರು.

ಶಾಸಕ ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಶಿಕ್ಷಣ ಐಟಿಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಶ್ವಥ ನಾರಾಯಣ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು

ಕೊಡಗು ಜಿಲ್ಲೆ ಅಭಿವೃದ್ಧಿಗೆ ಕೈಜೋಡಿಸಿ

ಹೊದ್ದೂರು ಗ್ರಾಪಂ ಕಚೇರಿಯ 'ಸ್ವರಾಜ್ ಸೌಧ' ಉದ್ಘಾಟನೆಯಲ್ಲಿ ಶಾಸಕ ಅಪ್ಪಚ್ಚು ರಂಜನ್ ಕರೆ

ಮಡಿಕೇರಿ, ಜೂ.19– ಕೊಡಗು ಜಿಲ್ಲೆಯ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಇದರಿಂದ ಆರ್ಥಿಕ ಚಟುವಟಿಕೆಗೆ ಸಹಕಾರಿಯಾಗಲಿದೆ ಎಂದು ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಕರೆ ನೀಡಿದ್ದಾರೆ.

ತಾಲೂಕಿನ ಹೊದ್ದೂರು ಗ್ರಾಪಂ ಕಚೇರಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ 'ಸ್ವರಾಜ್ ಸೌಧ' ಸಭಾಂಗಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಜೊತೆಗೆ ಪ್ರವಾಸೋದ್ಯಮಕ್ಕೆ ಒತ್ತು ನೀಡಿದಾಗ ಆರ್ಥಿಕ ಚಟುವಟಿಕೆಗೆ ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಇಲ್ಲಿ ನಿರ್ಮಾಣವಾಗಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೂ ಎಲ್ಲರೂ ಕೈಜೋಡಿಸಬೇಕು ಎಂದು ಕೋರಿದರು.



ಹಿಂದೆ ಕ್ಲಬ್ ಮಹೀಂದ್ರ ರೆಸಾರ್ಟ್ ನಿರ್ಮಾಣ ಸಂದರ್ಭದಲ್ಲಿ ನಾವು ಸಹ ವಿರೋಧ ವ್ಯಕ್ತಪಡಿಸಿದ್ದೆವು. ತದ ನಂತರ ತಾಜ್ ವಿವಾಂತ, ತಾಮರ, ಆರೇಂಜ್ ಕೌಂಟಿ, ಇಬ್ಬನಿ ಹೀಗೆ ಹಲವು ರೆಸಾರ್ಟ್‌ಗಳು ಆರಂಭವಾದವು. ಕ್ಲಬ್ ಮಹೇಂದ್ರದಲ್ಲಿಯೇ 150 ಮಂದಿ ಸ್ಥಳೀಯರಿಗೆ ಉದ್ಯೋಗ ದೊರೆತಿದೆ. ಹೀಗೆ ಕೃಷಿ ಜೊತೆಗೆ ಪ್ರವಾಸೋದ್ಯಮಕ್ಕೆ ಒತ್ತು ನೀಡಿದಾಗ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರತೀ ವಾರ 25 ಸಾವಿರಕ್ಕೂ ಹೆಚ್ಚು ಜನರು ಕೊಡಗು ಜಿಲ್ಲೆಗೆ ಭೇಟಿ ನೀಡುತ್ತಾರೆ. ಇದರಿಂದ ವ್ಯಾಪಾರ ವಹಿವಾಟು, ಟ್ಯಾಕ್ಸಿ, ಹೋಟೆಲ್, ಹೀಗೆ ಆರ್ಥಿಕ ಚಟುವಟಿಕೆಗೆ ಅನುಕೂಲವಾಗಲಿದೆ. ಕೊಡಗು ಜಿಲ್ಲೆಯಲ್ಲಿ ಭೂಮಿಯ ಬೆಲೆಯು ಹೆಚ್ಚಳವಾಗಿದೆ ಎಂದು ಅಪ್ಪಚ್ಚುರಂಜನ್ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಶಾಂತೆಯಂಡ ರವಿ ಕುಶಾಲಪ್ಪ ಮಾತನಾಡಿ, ಹೊದ್ದೂರು ಗ್ರಾಪಂ ಅಭಿವೃದ್ಧಿಗೆ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಅವರು ಶ್ರಮಿಸುತ್ತಿದ್ದಾರೆ ಎಂದರು.

ಇಲ್ಲಿ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬೇಕು. ಯಾವುದೇ ಸಮಸ್ಯೆಗಳು ಇದ್ದಲ್ಲಿ ಮಾತುಕತೆ ಮೂಲಕ ಬಗೆಹರಿಸಿ ಕೊಳ್ಳಬೇಕು ಎಂದು ಅವರು ಸಲಹೆ ಮಾಡಿದರು.

ಕೊಡಗು ಜಿಲ್ಲೆ ಶೇ.47 ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದೆ. ಕಾಫಿ ತೋಟವೂ ಸೇರಿದರೆ ಶೇ.70ಕ್ಕೂ ಹೆಚ್ಚು ಅರಣ್ಯ ಕಾಣಬಹುದು. ಆ ನಿಟ್ಟಿನಲ್ಲಿ ಹಸಿರೇ ಉಸಿರು ಎಂಬುದನ್ನು ಅರ್ಥ ಮಾಡಿಕೊಂಡು ನದಿ ಮೂಲ ಸಂರಕ್ಷಿಸಬೇಕಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾತನಾಡಿ, ಗ್ರಾಪಂ ಕಚೇರಿ ಕಟ್ಟಡದಲ್ಲಿ ಗ್ರಾಮ ಲೆಕ್ಕಿಗರಿಗೆ ಕೊಠಡಿ ಅವಕಾಶ ಮಾಡಿರುವುದು ಶ್ಲಾಘನೀಯ. ಹೊದ್ದೂರು ಪಾಲೆಮಾರುನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಆಗಲಿದ್ದು, ಇದಕ್ಕಾಗಿ ಎಲ್ಲರೂ ಸಹಕರಿಸಬೇಕು ಎಂದು ಕೋರಿದರು.

ತಾಪಂ ಮಾಜಿ ಅಧ್ಯಕ್ಷರಾದ ತೆಕ್ಕಡೆ ಶೋಭ ಮೋಹನ್ ಅವರು ಗ್ರಾಪಂ ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಹೊದವಾಡ ಪ್ರೌಢಶಾಲೆಯಲ್ಲಿ ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಿದ್ದು, ಈ ಹಿನ್ನೆಲೆ ಹೊದವಾಡ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರಿಗೆ ಶಾಲೂ, ಹಾರ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಹೊದ್ದೂರು ಗ್ರಾಪಂ ಅಧ್ಯಕ್ಷರಾದ ಪಿ.ಎ. ಕುಸುಮಾವತಿ, ಉಪಾಧ್ಯಕ್ಷರಾದ ಸರಸು, ಸ್ಥಾಯಿ ಸಮಿತಿ ಅಧ್ಯಕ್ಷರಾದ ಕೆ.ಮೊಣ್ಣಪ್ಪ, ತಹಸೀಲ್ದಾರ್ ಪಿ.ಎಸ್.ಮಹೇಶ್, ಗ್ರಾಪಂ ಸದಸ್ಯರು, ಇತರರು ಇದ್ದರು. ವಾಟೆಕಾಡು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಸೌಮ್ಯ ನಿರೂಪಿಸಿದರು. ಗ್ರಾ.ಪಂ.ಪಿಡಿಒ ಅಬ್ದುಲ್ಲಾ ಸ್ವಾಗತಿಸಿ, ವಂದಿಸಿದರು.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ವಿಕಲ ಚೇತನರು

ಕುಶಾಲನಗರ, ಜೂ.19– ಹುಟ್ಟಿನಿಂದಲೇ ಶ್ರವಣದೋಷ ಮತ್ತು ಮಾತು ಬಾರದ ವಿಕಲ ಚೇತನ ನವ ವಧು–ವರರ ವಿವಾಹ ಮಹೋತ್ಸವ ಭಾನುವಾರ ಅದ್ದೂರಿಯಾಗಿ ನಡೆಯಿತು.



ಕೊಪ್ಪ ಗ್ರಾಪಂ ವ್ಯಾಪ್ತಿಯ ಗುಡ್ಡೇನ ಹಳ್ಳಿಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ಆಯೋಜಿಸಿದ್ದ ವಿವಾಹ ಕಾರ್ಯಕ್ರಮದಲ್ಲಿ ವಿಶೇಷ ವಿಕಲ ಚೇತನರಿಬ್ಬರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ವಧು–ವರರ ಕಡೆಯ ನೂರಾರು ಸಂಬಂಧಿಕರು ವಿವಾಹ ಕಾರ್ಯಕ್ರಮಕ್ಕೆ ಆಗಮಿಸುವ ಮೂಲಕ ಸಾಕ್ಷಿಕರಿಸಿದರು.

ಸೀಗೆಹೊಸೂರು ಗ್ರಾಮದ ಶ್ರೀನಿವಾಸ್ ಹಾಗೂ ಭಾಗ್ಯಮ್ಮ ದಂಪತಿಗಳ ಪುತ್ರ ಕೃಷಿಕ ಟಿ.ಸಿ.ಧನಂಜಯ ಮತ್ತು ಬೈಲುಕುಪ್ಪೆ ಬಳಿಯ ಲಕ್ಷ್ಮೀಪುರ ಗ್ರಾಮದ ಕೆ.ರಮೇಶ್ ಮತ್ತು ಪುಷ್ಪಾ ದಂಪತಿಗಳ ಪುತ್ರಿ ಬಿ.ಎಂ.ಅಂಜಲಿ ಹಿರಿಯರ ಸಮ್ಮುಖದಲ್ಲಿ ವಿವಾಹವಾದರು.

ಇವರಿಬ್ಬರ ವಿವಾಹ ಕಾರ್ಯಕ್ರಮಕ್ಕೆ ರಾಜ್ಯ ಅಂಗವಿಲಕರ ಪರಿಷತ್ತು ಅಧ್ಯಕ್ಷ ಡಿ.ಕೆ.ಸುರೇಶ್ ಕುಮಾರ್ ಹತ್ತು ಸಾವಿರ ಧನ ಸಹಾಯ ಮಾಡಿ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನವದಂಪತಿಗಳಿಗೆ ಶುಭ ಹಾರೈಸಿದರು.

ವಿಕಲಚೇತನರ ಕ್ಷೇಮಾಭಿವೃದ್ಧಿ ಕ್ಲಬ್ ವತಿಯಿಂದ ಧನಂಜಯ ಹಾಗೂ ಅಂಜಲಿ ತಾಯಿ ಅವರಿಗೆ ತಲಾ ಐದು ಸಾವಿರ ನೀಡಿ ಶುಭ ಹಾರೈಸಿದರು. ವಿಶೇಷ ಚೇತನ ದಂಪತಿಗಳ ಮುಂದಿನ ಜೀವನ ಸುಖ, ಸಮೃದ್ಧಿಯಿಂದ ಕೂಡಲಿ ಎಂದು ಶುಭ ಕೋರಿದರು. ಜವಳಿ ವರ್ತಕ ರಮೇಶ್ ವಧು–ವರರಿಗೆ ನೂತನ ವಸ್ತ್ರಕ್ಕಾಗಿ ಧನ ಸಹಾಯ ಮಾಡಿದರು.

ಈ ಸಂದರ್ಭದಲ್ಲಿ ವಿಕಲಚೇತನರ ಕ್ಷೇಮಾಭಿವೃದ್ಧಿ ಕ್ಲಬ್ ಕಾರ್ಯದರ್ಶಿ ಲತೇಶ್ ಕುಮಾರ್, ಪತ್ರಕರ್ತ ಎಸಳೂರು ಉದಯಕುಮಾರ್, ನಿರ್ದೇಶಕ ಎಂ.ಸಿ.ಸಚಿನ್ ಹಾಗೂ ಪದಾಧಿಕಾರಿಗಳು ಇದ್ದರು.

ಮೈಸೂರಿಗೆ ಪ್ರಧಾನಿ: ಭದ್ರತೆಗೆ ಕೊಡಗಿನ ಪೊಲೀಸರು

ಮಡಿಕೇರಿ,ಜೂ.19– ಪ್ರಧಾನಿ ನರೇಂದ್ರ ಮೋದಿ ವಿಶ್ವ ಯೋಗ ದಿನಾಚರಣೆಯಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸುತ್ತಿದ್ದು ಉನ್ನತ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಮೈಸೂರು ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ನೇತೃತ್ವದಲ್ಲಿ ಭದ್ರತೆ ಕೈಗೊಳ್ಳಲಾಗಿದ್ದು, ಕೊಡಗು ಜಿಲ್ಲೆಯಿಂ ದಲೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಪ್ರಧಾನಿ ಕಾರ್ಯಕ್ರಮದ ಬಂದೋಬಸ್ತ್ ಹಿನ್ನೆಲೆಯಲ್ಲಿ ಕೊಡಗಿನಿಂದ ಓರ್ವ ಡಿವೈಎಸ್‌ಪಿ, 5 ಇನ್ಸ್‌ಪೆಕ್ಟರ್‌ಗಳು, 9 ಸಬ್ ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಎಎಸ್‌ಐ, ಹೆಡ್ ಕಾನ್ಸ್‌ಟೇಬಲ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್‌ಗಳು ಸೇರಿ 190 ಸಿಬ್ಬಂದಿಗಳನ್ನು ಕಳುಹಿಸಲಾಗಿದೆ. ಪ್ರಧಾನಿ ಕಾರ್ಯಕ್ರಮ ಮುಕ್ತಾಯವಾದ ಬಳಿಕ ಜಿಲ್ಲೆಗೆ ಮರಳಲಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಯೆಷಾ ಸುನೆಹಾಗೆ ಶೇ.98.5 ಅಂಕ



ಸುಂಟಿಕೊಪ್ಪ, ಜೂ.19– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಶನಿವಾರ ಪ್ರಕಟಗೊಂಡಿದ್ದು, ಸುಂಟಿಕೊಪ್ಪ ಕಾಲೇಜುಗಳಲ್ಲಿ ಉತ್ತಮ ಫಲಿತಾಂಶ ಬಂದಿದೆ. ಸಂತ ಮೇರಿ ಆಂಗ್ಲ ಮಾಧ್ಯಮ ಕಾಲೇಜಿನ ವಾಣಿಜ್ಯ ಶಾಸ್ತ್ರದ ವಿದ್ಯಾರ್ಥಿನಿ ಆಯೆಷಾ ಸುನೆಹಾ ಶೇ.98.5 ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿ.ಪೇಟೆಯಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಸಹಕಾರ

ಕಾರ್ಯನಿರತ ಪತ್ರಕರ್ತರ ಪದಗ್ರಹಣ ಸಮಾರಂಭದಲ್ಲಿ ಶಾಸಕ ಕೆ.ಜಿ.ಬೋಪಯ್ಯ ಭರವಸೆ

ವಿರಾಜಪೇಟೆ,19– ವಿರಾಜಪೇಟೆಯಲ್ಲಿ ಪತ್ರಿಕಾಭವನದ ಅಗತ್ಯವಿದ್ದು, ಪತ್ರಿಕಾಭವನ ನಿರ್ಮಿಸಲು ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕ ಕೆ.ಜಿ. ಬೋಪಯ್ಯ ಇಂದಿಲ್ಲಿ ಭರವಸೆ ನೀಡಿದರು.



ಭಾನುವಾರ ಮಗ್ಗುಲದ ಅಗ್ಲೋನಿಮ ರೆಸಾರ್ಟ್ ಸಭಾಂಗಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಗ್ರಹಣ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಸಂಘಟಿತರಾಗಬೇಕು. ಸಮಾಜದ ಬಗ್ಗೆ ಸದಾ ಗಮನ ಹರಿಸುವ ಪತ್ರಕರ್ತರು ಸಂಘಟನೆಯ ಮೂಲಕ ತಮ್ಮ ಬದುಕು ರೂಪಿಸಿಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ರಾಜ್ಯ ಹೈಕೋರ್ಟ್ ವಕೀಲ ಎ.ಎಸ್.ಪೊನ್ನಣ್ಣ ಮಾತನಾಡಿ, ಪತ್ರಕರ್ತರು ಪೂರ್ವಗ್ರಹ ಪೀಡಿತರಾಗಿ ವರದಿ ಮಾಡದೆ ವಸ್ತುನಿಷ್ಠ ವರದಿಯನ್ನು ಮಾಡಬೇಕು ಎಂದರು.

ಸಂವಿಧಾನದ ನಾಲ್ಕನೇ ಅಂಗ ಎಂದು ಗುರುತಿಸಲ್ಪಟ್ಟಿರುವ ಪತ್ರಿಕಾ ರಂಗ ಆಡಳಿತ ವರ್ಗವನ್ನು ಎಚ್ಚರಿಸುವ ಕೆಲಸ ಮಾಡಬೇಕು. ಪತ್ರಕರ್ತರು ರಾಜಕೀಯ ಆಮಿಷಕ್ಕೆ ಬಲಿಯಾಗದೇ, ವಸ್ತುನಿಷ್ಠ ವರದಿ ಮಾಡಬೇಕು ಎಂದು ತಿಳಿಸಿದರು.

ವಿರಾಜಪೇಟೆ ತಹಸೀಲ್ದಾರ್ ಡಾ.ಯೋಗಾನಂದ್ ಮಾತನಾಡಿ, ಸಾರ್ವಜನಿಕ ಕೆಲಸ ಮಾಡುವ ಸಂದರ್ಭ ಕೆಲವೊಮ್ಮ ಬೆದರಿಕೆಗಳು ಬರುತ್ತವೆ. ಸುದ್ದಿ ಮಾಡುವ ಸಂದರ್ಭ ಯಾವುದೇ ಬೆದರಿಕೆಗಳಿಗೆ ಹೆದರದೇ ವಸ್ತು ನಿಷ್ಠ ವರದಿ ಮಾಡಬೇಕು. ವಿರಾಜಪೇಟೆಯಲ್ಲಿ ಸೂಕ್ತ ಪತ್ರಿಕಾ ಭವನ ನಿರ್ಮಿಸಲು ಜಾಗ ಒದಗಿಸಲು ಶ್ರಮಿಸುವುದಾಗಿ ತಿಳಿಸಿದರು.

ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ಪತ್ರಕರ್ತರಿಗೆ ನಿವೇಶನ ನೀಡಬೇಕೆಂದು ಹಲವು ವರ್ಷದಿಂದ ಮನವಿ ಮಾಡಿದ್ದೇವೆ. ಆದರೇ ಒತ್ತುವರಿ ಜಾಗವನ್ನು ಸರಕಾರ ಮತ್ತೆ ಗುತ್ತಿಗೆ ಆಧಾರದಲ್ಲಿ ನೀಡಿರುವುದು ವಿಪರ್ಯಾಸ ಎಂದರು. ವಿರಾಜಪೇಟೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಜಿತ್ ಕುಮಾರ್ ಗುಹ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾ ಸಂಘದ ಅಧ್ಯಕ್ಷೆ ಸವಿತಾ ರೈ, ರಾಷ್ಟ್ರೀಯ ಸಮಿತಿ ಸದಸ್ಯ ಸುನಿಲ್ ಪೊನ್ನೇಟಿ, ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರಮೋಹನ್, ಪೊನ್ನಂಪೇಟೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ ಮಾತನಾಡಿದರು. ತಾಲೂಕು ಸಂಘದ ನಿರ್ದೇಶಕ ಡಿ.ಮಂಜುನಾಥ್ ಪ್ರಾರ್ಥಿಸಿದರು. ರವಿಕುಮಾರ್ ನಿರೂಪಿಸಿದರು. ಮುಸ್ತಫ ವಂದಿಸಿದರು.

ಪ್ರಶಸ್ತಿ ಸ್ಥಾಪನೆ: ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ನೂತನವಾಗಿ ವಾರ್ಷಿಕ ಪ್ರಶಸ್ತಿ ಸ್ಥಾಪಿಸಲಾಗಿದೆ. ಅಜ್ಜಿಕುಟ್ಟಿರ ಪೊನ್ನಣ್ಣ ಅವರು ತಮ್ಮ ತಂದೆ ಎ.ಕೆ.ಸುಬ್ಬಯ್ಯ ಹಾಗೂ ಪೊನ್ನಮ್ಮ ಅವರ ಹೆಸರಿನಲ್ಲಿ ಶಿಕ್ಷಣದ ಕುರಿತಾದ ಪ್ರಶಸ್ತಿ, ಕೋಲತಂಡ ರಘು ಮಾಚಯ್ಯ ಅವರ ತಂದೆ ಕೋಲತಂಡ ಉತ್ತಪ್ಪ ಹಾಗೂ ಕಾಮವ್ವ ಹೆಸರಿನಲ್ಲಿ ವನ್ಯ ಜೀವಿ ಮತ್ತು ಮಾನವ ಸಂಘರ್ಷ ಹಾಗೂ ಪರಿಹಾರೋಪಾಯ ವರದಿ ಪ್ರಶಸ್ತಿ, ಅಂತರರಾಷ್ಟ್ರೀಯ ರಗ್ಬಿ ಆಟಗಾರ, ಪ್ರಕೃತಿ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಮಾದಂಡ ತಿಮ್ಮಯ್ಯ ಅವರು ತಮ್ಮ ತಾಯಿ ತುಂಗ ಪೂವಯ್ಯ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಶೈಕ್ಷಣಿಕ ವರದಿ ಪ್ರಶಸ್ತಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಿ.ಆರ್.ಸವಿತಾ ರೈ ತಮ್ಮ ತಂದೆ ಡಿ.ಎಸ್. ರಂಗನಾಥ ರೈ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಕೃಷಿ ವರದಿ, ಸಿದ್ದಾಪುರದ ಕೆ.ಯು. ಮಜೀದ್ ಅವರು ತಮ್ಮ ತಂದೆ ಸಮಾಜ ಸೇವಕ ಉಸ್ಮಾನ್ ಹಾಜಿ ಅವರ ಹೆಸರಿನಲ್ಲಿ ಅತ್ಯುತ್ತಮ ಮಾನವೀಯ ವರದಿ ಪ್ರಶಸ್ತಿಯನ್ನು ನೀಡಲು ವಾರ್ಷಿಕ ಪ್ರಶಸ್ತಿ ಸ್ಥಾಪಿಸಲಾಗಿದೆ.

ಮಣ್ಣು ಸಂರಕ್ಷಣೆ ನಮ್ಮೆಲ್ಲರ ಹೊಣೆ

ಮಡಿಕೇರಿ, ಜೂ.19– ಚೆಶೈರ್ ಹೋಮ್ಸ್ ವಿಶೇಷ ಶಾಲೆಯಲ್ಲಿ ಮಣ್ಣು ಉಳಿಸಿ ಅಭಿಯಾನ ನಡೆಯಿತು. ಈ ಸಂದರ್ಭ ಮಾತನಾಡಿದ ಅರಣ್ಯ ಮತ್ತು ವಿಜ್ಞಾನ ಪೊನ್ನಂಪೇಟೆ ಸಂಸ್ಥೆ ಮುಖ್ಯಸ್ಥ ಡಾ. ಸಿ.ಬಿ.ಕುಶಾಲಪ್ಪ ಶಾಲೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.



ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಮಣ್ಣು ಎಷ್ಟು ಮುಖ್ಯವೊ ಅದರ ಜೊತೆಗೆ ಗೋವುಗಳು ಮುಖ್ಯ ಆದ್ದರಿಂದ ಪ್ರತಿಯೊಬ್ಬರು ತಮ್ಮ ಮನೆಗಳಲ್ಲಿ ಒಂದೊಂದು ಗೋವುಗಳನ್ನು ಸಾಕುವಂತೆ ಸಲಹೆ ನೀಡಿದರು.

ಶಾಲೆಯ ಆಡಳಿತ ಮಂಡಳಿಯ ಖಜಾಂಜಿ ಡಾ.ಎ.ಸಿ.ಗಣಪತಿ ಮಾತನಾಡಿ, ಮಣ್ಣಿನ ಫಲವತ್ತತೆಯನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದರು. ವಿಶೇಷ ಮಕ್ಕಳು "ಮಣ್ಣು ಉಳಿಸಿ" ಕುರಿತ ಕಿರು ನಾಟಕವನ್ನು ಪ್ರದರ್ಶಿಸಿದರು ಹಾಗೂ ನೃತ್ಯ ಮಾಡಿ ಎಲ್ಲರ ಗಮನವನ್ನು ಸೆಳೆದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಪುನೀತ ರಾಮಸ್ವಾಮಿ, ಆಡಳಿತ ಮಂಡಳಿಯ ಸದಸ್ಯ ದೀಪಕ್, ಸ್ವಯಂಸೇವಕರು, ಗ್ರಾಪಂ ಅಧ್ಯಕ್ಷರು ಹಾಗೂ ಸದಸ್ಯರು, ಮಣ್ಣು ಉಳಿಸಿ ಅಭಿಯಾನದ ಸ್ವಯಂ ಸೇವಕ ಅಖಿಲ್, ಕರುಂಬಯ್ಯ, ಚೆಶೈರ್ ಹೋಮ್ ವಿಶೇಷ ಶಾಲೆಯ ಮುಖ್ಯಶಿಕ್ಷಕ ಶಿವರಾಜ್ ಹಾಗೂ ಶಾಲಾ ಸಿಬ್ಬಂದಿ, ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳು. ಆಸ್ಪತ್ರೆಯ ಸಿಬ್ಬಂದಿ ಹಾಜರಿದ್ದರು.

ಬಿಜೆಪಿಯಿಂದ ವಿಕಾಸ ತೀರ್ಥ ಬೈಕ್ ಜಾಥಾ



ಮಡಿಕೇರಿ,ಜೂ.19– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ 8 ವರ್ಷಗಳನ್ನು ಪೂರೈಸಿದ ಹಿನ್ನೆಲೆ ವಿರಾಜಪೇಟೆ ತಾಲೂಕು ಬಿಜೆಪಿ ಯುವ ಮೋರ್ಚಾದ ವತಿಯಿಂದ ಪೊನ್ನಂಪೇಟೆಯಲ್ಲಿ ವಿಕಾಸ ತೀರ್ಥ ಬೈಕ್ ಜಾಥಾ ನಡೆಯಿತು.

ಜಾಥಾಕ್ಕೆ ಶಾಸಕ ಕೆ.ಜಿ.ಬೋಪಯ್ಯ ಚಾಲನೆ ನೀಡಿ ಕೇಂದ್ರ ಸರ್ಕಾರದ ಅನೇಕ ಕಲ್ಯಾಣ ಯೋಜನೆಗಳನ್ನು ಶ್ರೀ ಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭ ಯುವ ಮೋರ್ಚಾದ ಪ್ರಮುಖರು ಹಾಗೂ ಕಾರ್ಯಕರ್ತರು ಹಾಜರಿದ್ದರು.

ಮೈಸೂರು ಮಿತ್ರ

ಮಣ್ಣು ಉಳಿಸಿ ಅಭಿಯಾನಕ್ಕೆ ಎಲ್ಲೆಡೆ ಉತ್ತಮ ಸಹಕಾರ

ಮಣ್ಣಿನ ಸಂರಕ್ಷಣೆಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು

ಮೈಸೂರು, ಜೂ.19(ಎಂಕೆ)– 'ಮಣ್ಣು ಉಳಿಸಿ' ಅಭಿಯಾನದ ಅಂಗವಾಗಿ ಪ್ರವಾಸ ಕೈಗೊಂಡ ಎಲ್ಲಾ ದೇಶಗಳು ಹಾಗೂ ರಾಜ್ಯಗಳಲ್ಲಿಯೂ ಉತ್ತಮ ಸಹಕಾರ ದೊರೆತಿದ್ದು, ಮಣ್ಣು ಉಳಿಸುವ ನಿಟ್ಟಿನಲ್ಲಿ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಇಶಾ ಪ್ರತಿಷ್ಠಾನದ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ್ ತಿಳಿಸಿದರು.



ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ಅಭಿಯಾನ ಮಾಡಿ, ಸಮಾವೇಶ ಮಾಡಿದರೇ ಮಣ್ಣಿನ ಸಂರಕ್ಷಣೆ ಆಗುವುದಿಲ್ಲ. ಇದಕ್ಕಾಗಿ ಸರ್ಕಾರಗಳು ಕಾರ್ಯಕ್ರಮಗಳನ್ನು ರೂಪಿಸಬೇಕು. ಮಣ್ಣು ಸಂರಕ್ಷಣೆ ಮಾಡುವುದನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ಪ್ರೋತ್ಸಾಹಧನ ನೀಡಬೇಕು ಎಂದರು. ಮೈನಿಂಗ್ ಕುರಿತು ಮಾತನಾಡಿದ ಅವರು, ಹೆಚ್ಚಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ವಾಹನಗಳ ಸಂಖ್ಯೆಯೂ ಹೆಚ್ಚಾಗುತ್ತಿವೆ. ಉತ್ತಮ ರಸ್ತೆಗಳು, ಮನೆಗಳು, ಕಟ್ಟಡಗಳ ಆಗಬೇಕಾದರೆ ಕಲ್ಲು, ಜಲ್ಲಿ ಎಲ್ಲವೂ ಬೇಕಾಗು ತ್ತದೆ. ಆದ್ದರಿಂದ ಅದನ್ನು ನಿಲ್ಲಿಸಲು ಆಗುವುದಿಲ್ಲ. ಆದರೆ, ನಿಯಂತ್ರಣದಲ್ಲಿದ್ದರೆ ಒಳಿತು ಎಂದರು.

ಉನ್ನತ ಶ್ರೇಣಿಯಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆ ಹೊಂದಿದ

ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು,ಜೂ.19(ಪಿಎಂ)– ಉನ್ನತ ಶ್ರೇಣಿಯಲ್ಲಿ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಜಿಲ್ಲೆಯ ಪೌರಕಾರ್ಮಿಕರ ಮಕ್ಕಳಿಗೆ ಮೈಸೂರಿನ ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಪಾದ ಯಾತ್ರೆ ಸಮಿತಿ ವತಿಯಿಂದ ಭಾನುವಾರ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 11 ಮಂದಿಗೆ ತಲಾ 500 ರೂ. ನಗದು ನೀಡಿ ಸನ್ಮಾನಿಸುವ ಮೂಲಕ ಪ್ರತಿಭಾ ಪುರಸ್ಕರ ನೀಡಲಾಯಿತು.

ಮೈಸೂರಿನ ಧರ್ಮಸಿಂಗ್ ಕಾಲೋನಿಯ ರಂಗಸ್ವಾಮಿಯವರ ಪುತ್ರಿ ಚೇತನಾ, ಮುರುಗೇಶ್ ಅವರ ಪುತ್ರಿ ಎಂ.ವರ್ಷಿತಾ, ಭರತ್‌ನಗರದ ನಾಗರಾಜುದಾಸ್ ಅವರ ಪುತ್ರಿ ಸಿಂಚನಾ, ಹಂಚ್ಯಾ ಗ್ರಾಮದ ಮಹದೇವು ಅವರ ಪುತ್ರ ನಿಖಿಲ್‌ಕುಮಾರ್, ಹೆಬ್ಬಾಳ್ ಕಾಲೋನಿಯ ಬನ್ನಾರಿ ಅವರ ಪುತ್ರಿ ಹರ್ಷಿತಾ, ರಾಮು ಅವರ ಪುತ್ರ ಯಶ್ವಂತ್, ಬನ್ನಾರಿ ಅವರ ಪುತ್ರಿ ಬಿ.ವಂದನಾ, ಗಾಂಧಿನಗರದ ಬಿ.ಮಾದಪ್ಪ ರವರ ಪುತ್ರಿ ಶ್ರೀದೇವಿ, ಕೆ.ಆರ್.ನಗರದ ರಾಮು ಅವರ ಪುತ್ರಿ ಪೂರ್ಣಿಮಾ, ಕೃಷ್ಣ ಅವರ ಪುತ್ರಿ ಕೆಗಾನವಿ ಮತ್ತು ಹುಣಸೂರಿನ ಮುರಳಿ ಅವರ ಪುತ್ರಿ ಹೆಚ್.ಎಂ.ಹರ್ಷಿತಾ ಅವರು ಪ್ರತಿಭಾ ಪುರಸ್ಕಾರಕ್ಕೆ ಭಾಜನರಾದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಸ್ಥಾಯಿ ಕರ್ಮಚಾರಿ ವಿಚಕ್ಷಣಾ ಜಾಗೃತಿ ಸಮಿತಿ ಸದಸ್ಯ ಕೆ.ನಂಜನಪ್ಪ ಬಸವಗುಡಿ, ಪೌರಕಾರ್ಮಿಕರ ಮಕ್ಕಳು ತಮ್ಮ ಪೋಷಕ ರಂತೆ ಪೊರಕೆ ಹಿಡಿಯದೇ ಪೆನ್ನು ಹಿಡಿದು ಶೈಕ್ಷಣಿಕ ಸಾಧನೆ ಮಾಡಬೇಕು. ಆ ಮೂಲಕ ಪೋಷಕರಂತೆ ಸ್ವಚ್ಛತಾ ವೃತ್ತಿಗೆ ಹೋಗದೇ ಉನ್ನತ ಸ್ಥಾನಗಳನ್ನು ಅಲಂಕರಿಸಿ, ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು. ಸಮಿತಿ ಗೌರವಾಧ್ಯಕ್ಷ ಕಾಂಕ್ರೆಟ್ ರಾಜಣ್ಣ, ಅಧ್ಯಕ್ಷ ಎಂ.ಕೆ.ಮಹದೇವ, ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಮತ್ತಿತರರು ಹಾಜರಿದ್ದರು.

ಸಸಿ ನೆಟ್ಟು ಪರಿಸರ ದಿನಾಚರಣೆ




ಮೈಸೂರು, ಜೂ.19– ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ಬಸವ ಮಾರ್ಗ ಫೌಂಡೇಷನ್ ವತಿಯಿಂದ ಸಸಿ ನೆಡುವ ಕಾರ್ಯಕ್ರಮ ನಡೆಸಲಾಯಿತು.

ನಗರದ ರಿಂಗ್ ರಸ್ತೆಯಲ್ಲಿ ಭಾನುವಾರ 100 ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಯಿತು. ಫೌಂಡೇಷನ್ ನಡೆಸುತ್ತಿರುವ ಮದ್ಯ ವರ್ಜನ ಶಿಬಿರದ ಶಿಬಿರಾರ್ಥಿಗಳೂ ಈ ಕಾರ್ಯದಲ್ಲಿ ಭಾಗಿಯಾಗಿದ್ದರು. ಹೆಬ್ಬಾಳು ರಿಂಗ್ ರಸ್ತೆ ಜಂಕ್ಷನ್‌ನಿಂದ ದಟ್ಟಗಳ್ಳಿವರೆಗೆ ರಸ್ತೆ ವಿಭಜಕದ ಖಾಲಿ ಸ್ಥಳಗಳಲ್ಲಿ ಶಿಬಿರಾರ್ಥಿಗಳೇ ಗುಂಡಿ ತೆಗೆದು, ಸಸಿ ನೆಡುವ ಮೂಲಕ, ರಿಂಗ್ ರಸ್ತೆ ಹಸಿರೀಕರಣಕ್ಕೆ ಕೈ ಜೋಡಿಸಿದರು.

ಫೌಂಡೇಷನ್ ಅಧ್ಯಕ್ಷ ಎಸ್.ಬಸವರಾಜು ಮಾತನಾಡಿ, ಪ್ರತಿ ವರ್ಷ ಪರಿಸರ ದಿನಾಚರಣೆ ಪ್ರಯುಕ್ತ ಫೌಂಡೇಷನ್ ವತಿಯಿಂದ ಸಾವಿರಾರು ಗಿಡಗಳನ್ನು ನೆಟ್ಟು ಅವುಗಳ ಪೋಷಣೆ ಮಾಡಲಾಗುತ್ತಿದೆ. ಈ ಬಾರಿಯೂ 500 ಗಿಡಗಳನ್ನು ನೆಡುವ ಗುರಿ ಹೊಂದಲಾಗಿದೆ. ಒಂದೇ ದಿನ 100 ಗಿಡ ನೆಟ್ಟಿದ್ದು, ಇನ್ನು ಎರಡು ವಾರಗಳಲ್ಲಿ 400 ಗಿಡ ನೆಟ್ಟು, ಟ್ರೀ ಗಾರ್ಡ್ ಅಳವಡಿಸಲಾಗುವುದು ಎಂದು ತಿಳಿಸಿದರು.

ಕುರ್ಟಾನಾ ಗೇಮ್ಸ್: ಮತ್ತೆ ಚಿನ್ನ ಗೆದ್ದ ವೀರ ನೀರಜ್ ಚೋಪ್ರಾ

ಕುರ್ಟಾನಾ, ಜೂ.19– ಫಿನ್‌ಲ್ಯಾಂಡ್‌ನ ಕುರ್ಟಾನಾದಲ್ಲಿ ನಡೆಯುತ್ತಿರುವ ಕ್ರೀಡಾಕೂಟದಲ್ಲಿ ಭಾರತದ ನೀರಜ್ ಚೋಪ್ರಾ ಮತ್ತೊಂದು ಸಾಧನೆ ಮಾಡಿದ್ದು, ಮತ್ತೆ ಚಿನ್ನ ಗೆದ್ದ ಇತಿಹಾಸ ಬರೆದಿದ್ದಾರೆ.



ಭಾರತದ ಜಾವೆಲಿನ್ ಪಟು ನೀರಜ್ ಚೋಪ್ರಾ ಶನಿವಾರ ಫಿನ್‌ಲ್ಯಾಂಡ್‌ನಲ್ಲಿ ನಡೆದ ಕುರ್ಟಾನೆ ಗೇಮ್ಸ್‌ನಲ್ಲಿ ತಮ್ಮ ಮೊದಲ ಪ್ರಯತ್ನದಲ್ಲಿ 86.69 ಮೀಟರ್ ಎಸೆದು ಚಿನ್ನದ ಪದಕ ಗೆದ್ದರು. ನೀರಜ್ ಚೋಪ್ರಾ ಟ್ರಿನಿಡಾಡ್ ಮತ್ತು ಟೊಬಾಗೋದ ಕೆಶೋರ್ನ್ ವಾಲ್ಕಾಟ್ ಮತ್ತು ಗ್ರೆನಡಾದ ವಿಶ್ವ ಚಾಂಪಿಯನ್ ಆಂಡರ್ಸನ್ ಪೀಟರ್ಸ್‌ಗಿಂತ ಮೊದಲು ಗುರಿ ತಲುಪಿದರು. ಇತ್ತೀಚೆಗೆ ಹೊಸ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದ ನೀರಜ್ ಚೋಪ್ರಾ ಅವರು ತಮ್ಮ 86.69 ಮೀ. ಎಸೆತದೊಂದಿಗೆ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದರು.

ಟೋಕಿಯೊ ಒಲಿಂಪಿಕ್ಸ್‌ನ ನಂತರ ಇದು ನೀರಜ್ ಚೋಪ್ರಾರ ಎರಡನೇ ಸ್ಪರ್ಧೆಯಾಗಿದ್ದು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚೋಪ್ರಾ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕವನ್ನು ಗೆದ್ದ ಮೊದಲ ಭಾರತೀಯರಾದರು. ಇನ್ನು ಕೆಶೋರ್ನ್ ವಾಲ್ಕಾಟ್ 86.64 ಮೀ. ಎಸೆದು ಎರಡನೇ ಸ್ಥಾನ ಪಡೆದರೆ, ಆಂಡರ್ಸನ್ ಪೀಟರ್ಸ್ 84.75ರ ಅತ್ಯುತ್ತಮ ಪ್ರಯತ್ನದೊಂದಿಗೆ ಮೂರನೇ ಸ್ಥಾನ ಪಡೆದರು.

ಶಿವಣ್ಣಗೌಡ ನಿಧನ



ಕೆ.ಆರ್.ನಗರ, ಜೂ.19– ತಾಲೂಕಿನ ಹೆಬ್ಬಾಳ್ ಕೊಪ್ಪಲು ಗ್ರಾಮದ ನಿವಾಸಿ ಶಿವಣ್ಣಗೌಡ(74) ಅವರು ಅನಾರೋಗ್ಯದಿಂದ ಭಾನುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಜಯಮ್ಮ, ಮಕ್ಕಳಾದ ಪತ್ರಿಕಾ ಛಾಯಾಗ್ರಾಹಕ ನಾಣಿ ಹೆಬ್ಬಾಳ್, ರವಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿಜೆಪಿ ಸರ್ಕಾರ ಬರಲು ಕಾಂಗ್ರೆಸ್ ದ್ವೇಷದ ರಾಜಕಾರಣ ಕಾರಣ

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿ



ಮೈಸೂರಿನ ಬನ್ನಿಮಂಟಪ ಕೈಗಾರಿಕಾ ಪ್ರದೇಶದ ಮೈದಾನದಲ್ಲಿ ಭಾನುವಾರ ನಡೆದ 'ಜನತಾ ವೇದಿಕೆ' ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಸಮ್ಮುಖದಲ್ಲಿ ಎನ್.ಆರ್.ಕ್ಷೇತ್ರದ ಮುಖಂಡ ಅಬ್ದುಲ್ ಖಾದರ್(ಶಾಹಿದ್) ನೂರಾರು ಸ್ನೇಹಿತರೊಂದಿಗೆ ಜೆಡಿಎಸ್‌ಗೆ ಸೇರ್ಪಡೆಯಾದರು.

ಮೈಸೂರು, ಜೂ.19(ಎಸ್‌ಬಿಡಿ)– ಸಮಾಜದಲ್ಲಿ ಸಾಮರಸ್ಯ ಹಾಳು ಮಾಡಿರುವ ಈಗಿನ ಬಿಜೆಪಿ ಸರ್ಕಾರ ಆಡಳಿತಕ್ಕೆ ಬರಲು ಕಾಂಗ್ರೆಸ್ ದ್ವೇಷದ ರಾಜಕಾರಣವೇ ಪ್ರಮುಖ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ 'ಜನತಾ ವೇದಿಕೆ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ದಕ್ಷಿಣದಿಂದ ಉತ್ತರದುದ್ದಕ್ಕೂ ಪಕ್ಷ ಸೇರ್ಪಡೆ ಸಮಾರಂಭಕ್ಕೆ ಮೈಸೂರಿನ ಬನ್ನಿಮಂಟಪ ಕೈಗಾರಿಕಾ ಪ್ರದೇಶದ ಮೈದಾನದಲ್ಲಿ ಭಾನುವಾರ ಚಾಲನೆ ನೀಡಿ, ನರಸಿಂಹರಾಜ ಕ್ಷೇತ್ರದ ಮುಖಂಡ ಅಬ್ದುಲ್ ಖಾದರ್(ಶಾಹಿದ್) ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಯಾದ ನೂರಾರು ಪ್ರಮುಖರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಸರ್ವಜನಾಂಗದ ಶಾಂತಿಯ ತೋಟವಾಗಿದ್ದ ಕರ್ನಾಟಕದಲ್ಲೀಗ ಅಶಾಂತಿಯ ವಾತಾವರಣ ಸೃಷ್ಟಿಯಾಗಿದೆ. ಕರಾವಳಿಯಲ್ಲಿ ವಸ್ತ್ರದ ವಿಚಾರಕ್ಕೆ ಆರಂಭವಾದ ಗದ್ದಲ ರಾಜ್ಯದೆಲ್ಲೆಡೆ ವ್ಯಾಪಿಸಿದೆ. ಈಗಿನ ಬಿಜೆಪಿ ಸರ್ಕಾರ ಕೆಲವು ಸಂಘಟನೆಗಳ ಹೆಸರಿನಲ್ಲಿ ಹಿಂದೂ–ಮುಸ್ಲಿಂ ಸಾಮರಸ್ಯ, ಭಾವೈಕ್ಯತೆ ಹಾಳು ಮಾಡುವ ಕೃತ್ಯ ಆರಂಭಿಸಿದೆ. ಮೂರ್‍ನಾಲ್ಕು ತಿಂಗಳಿಂದ ರಾಜ್ಯ ಹೊತ್ತಿ ಉರಿಯುವ ವಾತಾವರಣ ಸೃಷ್ಟಿಯಾಗಿದೆ. ಕಾಂಗ್ರೆಸ್ ದ್ವೇಷ ರಾಜಕಾರಣದ ಪರಿಣಾಮವಾಗಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದು ಈ ರೀತಿಯ ಅವಾಂತರ ಸೃಷ್ಟಿಯಾಗುತ್ತಿದೆ ಎಂದು ಕಿಡಿ ಕಾರಿದರು.

ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಪಕ್ಷದ ಬಗ್ಗೆ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಸಂಶಯ ಹುಟ್ಟುಹಾಕಿದರು. 'ಎ' ಟೀಂ, 'ಬಿ' ಟೀಂ ಎಂದೆಲ್ಲಾ ಹೇಳಿ ಜೆಡಿಎಸ್‌ಗೆ ಮತ ಹಾಕಿದರೆ ಅದು ಬಿಜೆಪಿಗೆ ಮತ ನೀಡಿದಂತೆ ಎಂದು ಅಪಪ್ರಚಾರ ಮಾಡಿದರು. ಅದರಿಂದ ಅವರು ಸಾಧಿಸಿದ್ದಾದರೂ ಏನು?. ಐದು ವರ್ಷಗಳ ಸಮರ್ಥ ಆಡಳಿತದಲ್ಲಿ ಅನೇಕ ಭಾಗ್ಯಗಳ ಮೂಲಕ ಅಪಾರ ಕೊಡುಗೆ ನೀಡಿದ್ದೇನೆ ಎಂದು ಬಣ್ಣಿಸಿಕೊಂಡು ಚುನಾವಣೆಯಲ್ಲಿ 122ರಿಂದ 78 ಸ್ಥಾನಗಳಿಗೆ ಕುಸಿದರು. 104 ಸ್ಥಾನಗಳಲ್ಲಿ ಗೆದ್ದ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರಬಾರದು ಎಂಬ ಕಾರಣಕ್ಕೆ ನಾವು ಕಾಂಗ್ರೆಸ್ ಕೈ ಜೋಡಿಸಿದೆವು. ಆದರೆ ನಾನು ಮುಖ್ಯಮಂತ್ರಿಯಾಗಿದ್ದನ್ನು, ಸಿದ್ದರಾಮಯ್ಯನವರು ಒಂದು ದಿನವೂ ಸಹಿಸಲಿಲ್ಲ. ಅದಕ್ಕೆ ಪೂರಕವಾಗಿ ಸಂಸತ್ ಚುನಾವಣೆ ನಂತರ ಸಮ್ಮಿಶ್ರ ಸರ್ಕಾರ ಬೀಳಿಸುತ್ತೇನೆ ಎಂದು ಹೇಳಿದ್ದ ವಿಡಿಯೋ ವೈರಲ್ ಆಯಿತು. ಹೀಗೆ ಬಿಜೆಪಿ ಸರ್ಕಾರ ಬರಲು ಕಾರಣವಾಗಿ ಈಗ ಆ ಪಕ್ಷದ ವಿರುದ್ಧ ಯಾವ ನೈತಿಕತೆ ಇಟ್ಟುಕೊಂಡು ಮಾತನಾಡುತ್ತಾರೆ? ಎಂದು ಪ್ರಶ್ನಿಸಿದರು.

'ಅಗ್ನಿ ಪಥ್' ವಿರುದ್ಧ ಆಕ್ರೋಶ: ರಕ್ಷಣಾ ಇಲಾಖೆ 'ಅಗ್ನಿ ಪಥ್' ಯೋಜನೆ ಮೂಲಕ ದೇಶದ ನಿರುದ್ಯೋಗ, ಬಡ ಯುವಕರ ಜೀವನದಲ್ಲಿ ಚೆಲ್ಲಾಟವಾಡಲು ಮುಂದಾಗಿದೆ. ಇದರ ಹಿಂದಿನ ಉದ್ದೇಶವೇನು? ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. 10 ಲಕ್ಷ ಯುವಕರನ್ನು ನೇಮಿಸಿಕೊಂಡು 4 ವರ್ಷದ ನಂತರ ಶೇ.75ರಷ್ಟು ಜನರನ್ನು ವಾಪಸ್ಸು ಕಳುಹಿಸಿ, ಶೇ.25ರಷ್ಟು ಯುವಕರನ್ನು ಸೇವೆಯಲ್ಲಿ ಮುಂದುವರೆಸುತ್ತಾರಂತೆ. ಇದು ಆರ್‌ಎಸ್‌ಎಸ್‌ನ ಅಗ್ನಿ ಪಥ. ಸಾರ್ವಜನಿಕರ ಹಣದಲ್ಲಿ ತರಬೇತಿ ನೀಡಿ, ಅವರನ್ನೆಲ್ಲಾ ದೇಶದೆಲ್ಲೆಡೆ ನಿಯೋಜಿಸಿ ಹಿಂದೂರಾಷ್ಟ್ರನಿರ್ಮಾಣ ಮಾಡಿ, ಆರ್‌ಎಸ್‌ಎಸ್ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರವಿದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರಿಯಾದ ತೀರ್ಪು ನೀಡಿ: ದೇಶ ಹಾಗೂ ರಾಜ್ಯದ ಉಳಿವಿನ ದೃಷ್ಟಿಯಿಂದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜನ ಸರಿಯಾದ ತೀರ್ಪು ನೀಡಬೇಕು. ಜೆಡಿಎಸ್ ಬೆಂಬಲಿಸಿ ಸ್ವತಂತ್ರ ಸರ್ಕಾರ ರಚನೆಗೆ ಅವಕಾಶ ನೀಡಿ, ನಮ್ಮನ್ನು ಪರೀಕ್ಷಿಸಿ. ಕಾಂಗ್ರೆಸ್ ಹಾಗೂ ಬಿಜೆಪಿ ಮಾತಿಗೆ ಮರುಳಾಗಬೇಡಿ. ಸಮಾಜದಲ್ಲಿ ಸಾಮರಸ್ಯ, ನೆಮ್ಮದಿ ಪ್ರತಿಷ್ಠಾಪನೆ, ಪ್ರತಿ ಮಕ್ಕಳಿಗೆ 12ನೇ ತರಗತಿವರೆಗೆ ಉಚಿತ ಶಿಕ್ಷಣ, ಎಲ್ಲರಿಗೂ ಉಚಿತ ಆರೋಗ್ಯ ಸೇವೆ, ಕುಡಿಯುವ ನೀರು ಹಾಗೂ ವಿದ್ಯುತ್ ರಿಯಾಯಿತಿ ಸೇರಿದಂತೆ ಹತ್ತಾರು ಚಿಂತನೆಗಳಿವೆ ಎಂದು ತಿಳಿಸಿದರು.

ಜೆಡಿಎಸ್ ಭದ್ರಕೋಟೆ: ಮೈಸೂರು ಜಿಲ್ಲೆ ಜೆಡಿಎಸ್ ಭದ್ರಕೋಟೆ. ನಮ್ಮಲ್ಲಿರುವ ಲೋಪಗಳನ್ನು ಸರಿಪಡಿಸಿಕೊಂಡು ಸಂಘಟನೆ ಮಾಡುತ್ತೇವೆ. ಜು.1ರಿಂದ ರಾಜ್ಯಾದ್ಯಂತ ಪ್ರವಾಸ ನಡೆಸಿ, ಗ್ರಾಮ ವಾಸ್ತವ್ಯದ ಮೂಲಕ ಜನರಿಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾ ಖಾನ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್ ಕುಮಾರ್, ಕೆ.ಅಂದಾನಿ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್(ಅಬ್ದುಲ್ಲಾ), ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮುಖಂಡ ರೇವಣ್ಣ, ಬಿಬಿಎಂಪಿ ಕಾರ್ಪೊರೇಟರ್ ಇಬ್ರಾಹಿಂ ಪಾಷ, ಮೈಸೂರು ನಗರ ಪಾಲಿಕೆ ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಆರ್. ಲಿಂಗಪ್ಪ, ಮಾಜಿ ಉಪಮೇಯರ್ ಷಫಿ, ಸದಸ್ಯರಾದ ಪ್ರೇಮಾ ಶಂಕರೇಗೌಡ, ಕೆ.ವಿ.ಶ್ರೀಧರ್, ಭಾಗ್ಯ ಮಾದೇಶ್, ಶೋಭಾ, ಅಶ್ವಿನಿ ಅನಂತು, ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮತ್ತಿತರರು ಉಪಸ್ಥಿತರಿದ್ದರು.

ಯೋಗ ಮಾಡುವುದರಿಂದ ಸಮಸ್ಯೆ ಪರಿಹಾರವಾಗದು

ಮೈಸೂರು: ಪ್ರಧಾನಿ ಮೋದಿ ಅವರು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದದಲ್ಲಿ ಭಾಗಿಯಾಗುತ್ತಿರುವ ಬಗ್ಗೆ ಮಾಜಿ ಸಿಎಂ ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಪ್ರಧಾನಿಯವರು ಯೋಗ ಕಾರ್ಯಕ್ರಮಕ್ಕಾಗಿ ಮೈಸೂರಿಗೆ ಬರುತ್ತಿದ್ದಾರೆ. ಇದಕ್ಕಾಗಿ ಎಷ್ಟು ಕೋಟಿ ವೆಚ್ಚವಾಗುತ್ತಿದೆಯೋ ಗೊತ್ತಿಲ್ಲ. ಪ್ರತಿಯೊಬ್ಬರಿಗೂ ಆರೋಗ್ಯ ತುಂಬಾ ಮುಖ್ಯ. ಆದರೆ ಯೋಗ ಮಾಡಿಸಲು ದೆಹಲಿಯಿಂದ ಬರುತ್ತಿರುವ ಅವರು ಮಳೆ ಹಾನಿಯಿಂದ ಜನ ಸಂಕಷ್ಟದಲ್ಲಿದ್ದಾಗ ಏಕೆ ಬರಲಿಲ್ಲ? ಯೋಗ ಮಾಡಿದ ತಕ್ಷಣ ಸಮಸ್ಯೆಗಳ ಪರಿಹಾರ ಆಗುತ್ತದೆಯೇ?. ಮಹಾರಾಜ ಕಾಲೇಜು ಮೈದಾನದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಪಿಂಚಣಿ ಇನ್ನಿತರ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳೊಂದಿಗೆ ಸಂವಾದ ನಡೆಸುತ್ತಾರಂತೆ. ದೇಶದ ಪರಿಸ್ಥಿತಿಯನ್ನು ಎಲ್ಲಿಗೆ ತಂದಿದ್ದಾರೆ ನೋಡಿ ಎಂದು ಕುಹಕವಾಡಿದರು.

ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಗೆ ಕಾಂಗ್ರೆಸ್ ಬೆಂಬಲ

ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಆರೋಪ

ಮೈಸೂರು, ಜೂ.19(ಎಸ್‌ಬಿಡಿ)– ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ 'ಜನತಾ ವೇದಿಕೆ' ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ವಿರುದ್ಧ ಹರಿಹಾಯ್ದರು.

ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಿಜೆಪಿಯ ಮೂರನೇ ಅಭ್ಯರ್ಥಿ ಗೆಲುವಿಗೆ ಸಹಕಾರ ನೀಡಿದರು. ತಮ್ಮ ಇಬ್ಬರು ಶಾಸಕರ ಎರಡನೇ ಪ್ರಾಶಸ್ತ್ಯದ ಮತ ಹಾಕಿಸಿದ್ದು, ತನಿಖೆ ನಡೆಸಿದರೆ ಸತ್ಯ ಗೊತ್ತಾಗಲಿದೆ. ಈ ಬಗ್ಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದು ಇಲ್ಲಿ ನಿಮ್ಮ ಪಕ್ಷದ ನಾಯಕರು ಬಿಜೆಪಿಗೆ ಕೈ ಜೋಡಿಸಿದ್ದಾರೆ, ಮೋದಿ ವಿರುದ್ಧ ನೀವೇಕೆ ಮಾತನಾಡುತ್ತೀರಾ? ಎಂದು ಪ್ರಶ್ನಿಸಿದ್ದೇನೆ ಎಂದರು.

ಮಾಜಿ ಸಿಎಂಗಳಾದ ಸಿದ್ದರಾಮಯ್ಯ ಹಾಗೂ ಬಿ.ಎಸ್.ಯಡಿಯೂರಪ್ಪ ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿ, ಏನು ಚರ್ಚೆ ಮಾಡಿದರು. ಲೇಹರ್ ಸಿಂಗ್ ಕಾಂಗ್ರೆಸ್ ನಾಯಕರಿಗೆ ಏನು ಕೊಟ್ಟರು. ಫಲಿತಾಂಶದ ಬಳಿಕ ಬಿಜೆಪಿ ನಾಯಕರಾದ ಈಶ್ವರಪ್ಪ ಹಾಗೂ ಸಿ.ಟಿ.ರವಿ, ಸಿದ್ದರಾಮಯ್ಯನವರಿಗೆ ಧನ್ಯವಾದ ತಿಳಿಸಿದ್ದೇಕೆ? ಕಾಂಗ್ರೆಸ್ ನಾಯಕರಿಗೆ ಮೋದಿ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ. ಮೈಸೂರು ನಗರ ಪಾಲಿಕೆಯಲ್ಲಿ ಬಿಜೆಪಿ ಮೇಯರ್ ಸ್ಥಾನ, ಕಾಂಗ್ರೆಸ್ ಉಪ ಮೇಯರ್ ಸ್ಥಾನದೊಂದಿಗೆ ಅಧಿಕಾರ ನಡೆಸುತ್ತಿವೆ ಎಂದು ಕಿಡಿಕಾರಿದರು.

ಅಬ್ದುಲ್ ಖಾದರ್ ಶಾಹಿದ್ ನನಗೆ ಹಾರ ಹಾಕಿ, ಸಿದ್ದರಾಮಯ್ಯರ ವಿರುದ್ಧ ಘೋಷಣೆ ಕೂಗಿದರು ಎನ್ನುವ ಕಾರಣಕ್ಕೆ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟಿಸಿದರು. ಅಬ್ದುಲ್ಲಾ ಹಾಗೂ ಶಾಹಿದ್ ನನ್ನ ಎರಡು ಕೈಗಳಿದ್ದಂತೆ. ಪಕ್ಷ ಸೇರ್ಪಡೆ ಕಾರ್ಯಕ್ರಮ ಎಲ್ಲಾ ಜಿಲ್ಲೆಗಳಲ್ಲೂ ನಡೆಯಲಿದೆ. ಇದಕ್ಕೆ ಮಹಿಷಾಸುರನ ವಧೆಯಾದ ಜಾಗ, ಸುತ್ತೂರು ಶ್ರೀಗಳು ನೆಲೆಸಿರುವ ಜಾಗ, ಮಹಾರಾಜರು, ಟಿಪ್ಪು ಬಾಳಿ ಬದುಕಿದ ಜಾಗ ವಿಶ್ವಪ್ರಸಿದ್ಧ ಮೈಸೂರಿನಿಂದಲೇ ಚಾಲನೆ ನೀಡಲಾಗಿದೆ ಎಂದು ಹೇಳಿದ ಅವರು, ಇತ್ತೀಚಿನ ಘಟನಾವಳಿಗಳ ಪ್ರಸ್ತಾಪಿಸಿ ಬಿಜೆಪಿ ವಿರುದ್ಧವೂ ಕಿಡಿಕಾರಿದರು.

ಮುಖಂಡ ಅಬ್ದುಲ್ ಅಜೀಜ್(ಅಬ್ದುಲ್ಲಾ) ಮಾತನಾಡಿ, ನಾನು 25 ವರ್ಷ ಕಾಂಗ್ರೆಸ್‌ನಲ್ಲಿ ದುಡಿದರೂ ಒಂದು ಅವಕಾಶವನ್ನೂ ನೀಡಲಿಲ್ಲ. ಜೆಡಿಎಸ್‌ನಲ್ಲಿ ನನಗೆ ಟಿಕೆಟ್ ನೀಡಿದರು. ಯಾರನ್ನೋ ಸೋಲಿಸಬೇಕೆಂಬ ಉದ್ದೇಶದಿಂದಲ್ಲ, ನನ್ನನ್ನು ಪರಿಚಯಿಸುವ ಕಾರಣದಿಂದ ಅವಕಾಶ ನೀಡಿದರು. ನರಸಿಂಹರಾಜ ಕ್ಷೇತ್ರದ 23 ವಾರ್ಡ್‌ಗಳಲ್ಲೂ ನಾನು ಸೂಚಿಸಿದವರಿಗೆ 'ಬಿ' ಫಾರಂ ನೀಡಿದರು. 7 ವಾರ್ಡ್‌ಗಳಲ್ಲಿ ಗೆಲುವು ಸಿಕ್ಕಿತು. ಮುಂದಿನ ಚುನಾವಣೆಯಲ್ಲಿ ಕನಿಷ್ಠ 15 ವಾರ್ಡ್‌ಗಳಲ್ಲಿ ಜೆಡಿಎಸ್ ಗೆಲ್ಲಲಿದೆ. ಶಾಹಿದ್ ಸೇರಿದಂತೆ ಇಂದು ಪಕ್ಷ ಸೇರ್ಪಡೆಯಾದವರೆಲ್ಲಾ ಸಂಘಟನೆಯಲ್ಲಿ ಸಮರ್ಥರಿದ್ದಾರೆ ಎಂದರು.

ಈಗಿರುವುದು ನಕಲಿ ಕಾಂಗ್ರೆಸ್...

ನೆಹರು, ಗಾಂಧಿ ಕಾಲದ ಕಾಂಗ್ರೆಸ್ ಈಗಿಲ್ಲ. ಈಗಿರುವುದು ನಕಲಿ ಕಾಂಗ್ರೆಸ್. ಗೆದ್ದಾಗ ಬಿಜೆಪಿಯನ್ನು ಬೆಂಬಲಿಸಿ, ಸೋತಾಗ ದೇವೇಗೌಡರ ಕಾಲಿಡಿದು ಕೋಮುವಾದ ಪಕ್ಷವನ್ನು ದೂರವಿಡಬೇಕೆಂದು ನಾಟಕವಾಡುತ್ತಾರೆ. ಬಿಜೆಪಿ ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿದೆ. ಜೆಡಿಎಸ್ ಮಾತ್ರ ಅಲ್ಪ ಸಂಖ್ಯಾತರ ಬಗ್ಗೆ ಕಾಳಜಿ ಹೊಂದಿರುವ ಪಕ್ಷ.

-ಹೆಚ್.ಡಿ.ರೇವಣ್ಣ, ಶಾಸಕರು

ಒಳಚರಂಡಿ, ಮಳೆ ನೀರು ಚರಂಡಿಗೆ ಸೇರದಂತೆ ಕ್ರಮ ಕೈಗೊಳ್ಳಿ

ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಸೂಚನೆ



ಮೈಸೂರು, ಜೂ.19(ಆರ್‌ಕೆಬಿ)– ವಿಜಯನಗರ 1, 2 ಮತ್ತು 3ನೇ ಹಂತದಲ್ಲಿ ಒಳಚರಂಡಿ, ಮಳೆ ನೀರು ಚರಂಡಿಗೆ ಹರಿದು ಬರುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿ ವಿವಿದ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸುವ ಸಂಬಂಧ ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ವಿಜಯನಗರ 3ನೇ ಹಂತದಲ್ಲಿ ಹಾದು ಹೋಗಿರುವ ಮಳೆ ನೀರು ಚರಂಡಿಯ ಎರಡು ಬದಿಯಲ್ಲಿ ಗೋಡೆ ಕುಸಿತಗೊಂಡಿದ್ದು, ಎರಡು ಬದಿಯಲ್ಲಿ ತಡೆಗೋಡೆ ನಿರ್ಮಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಿಜಯನಗರ 3ನೇ ಹಂತದ ಪ್ರಮುಖ ರಸ್ತೆಗಳಾದ ಐಶ್ವರ್ಯ ಪೆಟ್ರೋಲ್ ಬಂಕ್ ರಸ್ತೆ ಜೋಡಿ ಬೇವಿನ ಮರದ ರಸ್ತೆ, ಬಡಾವಣೆಯ ಚರಂಡಿ ನಿರ್ಮಾಣ, ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ವೈಲ್ಡ್ ಗ್ರಾಸ್ ಬಡಾವಣೆಗೆ ಭೇಟಿ ನೀಡಿದ ಶಾಸಕರು ಈ ಬಡಾವಣೆ ಕೆರೆಯ ಕೆಳಭಾಗದಲ್ಲಿದ್ದು ಪ್ರತಿ ಬಾರಿ ಮಳೆ ಬಂದಾಗ ಬಡಾವಣೆಯಲ್ಲಿ ನೀರು ತುಂಬಿ ನೀರು ಹೊರಗೆ ಹೋಗದೆ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಹಾಗಾಗಿ ಮಳೆ ನೀರು ಬಡಾವಣೆಯಿಂದ ಹೊರಗೆ ಹೋಗಿ ಚರಂಡಿಗೆ ಸೇರುವಂತೆ ಚರಂಡಿ ನಿರ್ಮಿಸಲು ಸೂಚಿಸಿದರು.

ಕಾವೇರಿ ಬಡಾವಣೆ, ವೈಲ್ಡ್ ಗ್ರಾಸ್ ಬಡಾವಣೆ, ಭಾರ್ಗವಿ ಬಡಾವಣೆಗಳಿಗೆ ಕಾವೇರಿ ಕುಡಿಯುವ ನೀರನ್ನು ಒದಗಿಸುವಂತೆ ಪಾಲಿಕೆ ಆಯುಕ್ತರಿಗೆ ತಿಳಿಸಿದರು.

ಹೂಟಗಳ್ಳಿ ನಗರಸಭೆಯಲ್ಲಿ ನೀರಿನ ಬಿಲ್ ಪಾವತಿಗೆ ಅವಕಾಶ: ಹೂಟಗಳ್ಳಿ ಕೆ.ಹೆಚ್.ಬಿ.ಕಾಲೋನಿಗೆ ಪಾಲಿಕೆ ವತಿಯಿಂದ ನೀರು ಸರಬರಾಜು ಮಾಡುತ್ತಿದ್ದು ನಿವಾಸಿಗಳಿಗೆ ನೀರಿನ ಬಿಲ್ ಪಾವತಿಸಲು ತೊಂದರೆಯಾಗುತ್ತಿದ್ದನ್ನು ಗಮನಿಸಿದ ಶಾಸಕ ಜಿ.ಟಿ.ದೇವೇಗೌಡರು, ಹೂಟಗಳ್ಳಿ ನಗರಸಭೆ ಕಚೇರಿಯಲ್ಲಿ ನೀರಿನ ಬಿಲ್ ಪಾವತಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ತಿಳಿಸಿದರು.

ಪಾಲಿಕೆ ಆಯುಕ್ತು ವಾಣಿ ವಿಲಾಸ ಕುಡಿಯುವ ನೀರಿನ ವಿಭಾಗದ ಇಇ ಸುವರ್ಣ ಅವರಿಗೆ ಕೂಡಲೇ ಹೂಟಗಳ್ಳಿ ನಗರಸಭೆಯ ಕಛೇರಿಯಲ್ಲಿ ನೀರಿನ ಬಿಲ್ ಪಾವತಿಸಲು ಸಾರ್ವಜನಿಕರಿಗೆ ಅನುಕೂಲವಾಗುಂತೆ ಹೂಟಗಳ್ಳಿ ನಗರಸಭೆ ಕಛೇರಿಯಲ್ಲಿ ಸಾಫ್ಟ್‌ವೇರ್ ಅಳವಡಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಮುಡಾ ಆಯುಕ್ತ ದಿನೇಶ್ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಮಟ್ಟದ ಅಂತರ ಕಾಲೇಜು ದೇಹದಾರ್ಢ್ಯ ಸ್ಪರ್ಧೆಯಲ್ಲಿ ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಎಂ.ಪ್ರವೀಣ್ ಪ್ರಥಮ ಬಹುಮಾನ ಪಡೆದರು. ಈ ವೇಳೆ ಪ್ರೋತ್ಸಾಹಕರಾದ ರಾಕ್ ಜಿಮ್‌ನ ಶ್ರೀಧರ್ ಮಾಯಪ್ಪ ಅಭಿ ತೇಜಸ್, ಪ್ರಶಾಂತ್, ಮಂಜು, ಕಾರ್ತಿಕ್ ಇನ್ನಿತರರಿದ್ದರು.

ವಿಶೇಷ ವಿದ್ಯಾರ್ಥಿನಿ ಸಾಧನೆ



ಮೈಸೂರು, ಜೂ.19– ಮೈಸೂರಿನ ಹರಿ ವಿದ್ಯಾಲಯ ಪದವಿ ಪೂರ್ವ ಕಾಲೇಜಿನ ವಿಶೇಷ ವಿದ್ಯಾರ್ಥಿನಿ ಎನ್.ಡಿ. ಕುಶಾಲ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈಕೆ ಕನ್ನಡದಲ್ಲಿ 90, ಇಂಗ್ಲಿಷ್ 86, ಫಿಸಿಕ್ಸ್ 64, ಕೆಮಿಸ್ಟ್ರಿ 57, ಗಣಿತದಲ್ಲಿ 95, ಬಯಾಲಜಿ 58 ಅಂಕ ಸೇರಿದಂತೆ 600ಕ್ಕೆ 540 ಅಂಕ ಗಳಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ರಂಗ ಶಿಕ್ಷಣ ತರಬೇತಿಗೆ ಅವಧಿ ವಿಸ್ತರಣೆ

ಮೈಸೂರು, ಜೂ.19– ಮೈಸೂರಿನ ರಂಗಾಯಣದ ಭಾರತೀಯ ರಂಗಶಿಕ್ಷಣ ಸಂಸ್ಥೆಯ ಒಂದು ವರ್ಷದ ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂ. 25 ರವರೆಗೆ ವಿಸ್ತರಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ರಂಗಾಯಣದ ವೆಬ್‌ಸೈಟ್ www.rangayana.org ನಲ್ಲಿ ಲಾಗ್‌ಇನ್ ಮಾಡಿ ಪಡೆಯಬಹುದು.

ಮುಂದಿನ ತಿಂಗಳಿಂದ ಪೌರ, ಸ್ವಚ್ಛತಾ ಕಾರ್ಮಿಕರ ಸಮೀಕ್ಷೆ

ಮೊದಲ ಹಂತದಲ್ಲಿ ಮೈಸೂರು, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಅನುಷ್ಠಾನ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾಹಿತಿ

ಮೈಸೂರು,ಜೂ.19(ಪಿಎಂ)– ರಾಜ್ಯದ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರು ಹಾಗೂ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಸಂಖ್ಯೆಯನ್ನು ನಿಖರವಾಗಿ ತಿಳಿಯಲು ಮುಂದಿನ ತಿಂಗಳಿಂದ ಸಮೀಕ್ಷೆ ಕಾರ್ಯ ಆರಂಭಗೊಳ್ಳಲಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಮೈಸೂರಿನ ಮುಕ್ತ ವಿವಿಯ ಕುಲಪತಿ ಕಚೇರಿಯ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ಸಂಖ್ಯೆ ಬಗ್ಗೆ ಮಾಹಿತಿ ಇದೆ. ಆದರೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸ್ವಚ್ಛತಾ ಕಾರ್ಮಿಕರ ನಿಖರ ಮಾಹಿತಿ ಇಲ್ಲವಾಗಿದೆ. ಈ ಎಲ್ಲವನ್ನೂ ಒಳಗೊಂಡಂತೆ ಪೌರಕಾರ್ಮಿಕ ಸಂಖ್ಯೆ ಕಲೆ ಹಾಕುವ ಮೂಲಕ ಅವರಿಗೆ ಸರ್ಕಾರಿ ಸವಲತ್ತು ತಲುಪಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಮೊದಲ ಹಂತದಲ್ಲಿ ಮೈಸೂರು, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಸಮೀಕ್ಷೆ ಕಾರ್ಯ ಆರಂಭವಾಗಲಿದೆ. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಸಮೀಕ್ಷೆ ಕಾರ್ಯ ನಡೆಸಲಿದೆ ಎಂದರು.

ಮುಕ್ತ ವಿವಿ ಸ್ವಚ್ಛತಾ ಕಾರ್ಮಿಕರ ಸವಲತ್ತು ಕುರಿತು 66 ಮಂದಿ ಶೌಚಾಲಯ ಸ್ವಚ್ಛತಾಗಾರರು ಇದ್ದಾರೆ. ಮೈಸೂರಿನ ವಿವಿಯ ಕ್ಯಾಂಪಸ್‌ನಲ್ಲಿ 14 ಮಂದಿ ಕೆಲಸ ಮಾಡುತ್ತಿದ್ದು, ಉಳಿದವರು ವಿವಿ ವ್ಯಾಪ್ತಿಯ ಇನ್ನಿತರ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕಾರ್ಮಿಕ ಕಾಯ್ದೆಯಂತೆ 17,181 ರೂ. ವೇತನ ನೀಡಬೇಕು. ಆದರೆ ಅದರಲ್ಲಿ 2,213 ರೂ. ಕಡಿಮೆ ಪಾವತಿ ಮಾಡುತ್ತಿರುವುದು ಕಂಡು ಬಂದಿತು. ಹಾಗಾಗಿ ಅವರಿಗೆ ನಿಗದಿತ ವೇತನ, ಪಿಎಫ್, ಇಎಸ್‌ಐ ವ್ಯವಸ್ಥೆ ಕಲ್ಪಿಸಿಕೊಡಬೇಕು. ಲೋಪ ಆಗಿರುವುದನ್ನು ಸರಿಪಡಿಸಬೇಕು ಎಂದು ನಿರ್ದೇಶನ ನೀಡಲಾಯಿತು ಎಂದು ಮಾಹಿತಿ ನೀಡಿದರು.

ಆಯೋಗದ ಎಲ್ಲಾ ಸೂಚನೆಗಳನ್ನು ಪಾಲಿಸಲು ಸೂಕ್ತ ಕ್ರಮ ವಹಿಸುವುದಾಗಿ ಕುಲಪತಿಗಳು ಸಮ್ಮತಿಸಿದ್ದಾರೆ. ಆರೋಗ್ಯ ವಿಮೆ ಮಾಡಿಸಬೇಕು. ವೇತನ ಚೀಟಿ ನೀಡಬೇಕು. ಮಾಸ್ಟರ್ ಹೆಲ್ತ್ ಚೆಕ್‌ಅಪ್ ಮಾಡಿಸಬೇಕು ಎಂದು ಸೂಚನೆ ನೀಡಲಾಗಿದೆ. ಜೊತೆಗೆ 14 ಸ್ವಚ್ಛತಾ ಕಾರ್ಮಿಕರ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ ಎಂದರು. ಆಯೋಗದ ಸಂಶೋಧನಾಧಿಕಾರಿ ಸುವರ್ಣ ಭಾಗ್ಯ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಮಾಲತಿ ಮತ್ತಿತರರು ಹಾಜರಿದ್ದರು.



ಸಭೆ: ಮುಕ್ತ ವಿವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರ ಸವಲತ್ತು ಸಂಬಂಧ ಇಂದು ಸಭೆ ನಡೆಸಲಾಯಿತು. ಸಭೆಯಲ್ಲಿ ಕುಲಪತಿ ಡಾ. ವಿದ್ಯಾಶಂಕರ್, ಕುಲಸಚಿವ ಪ್ರೊ.ರಾಜಣ್ಣ ಮತ್ತು ಇಎಸ್‌ಐ ಮತ್ತು ಪಿಎಫ್ ಅಧಿಕಾರಿಗಳು ಸಹ ಹಾಜರಿದ್ದರು. ಈ ವೇಳೆ ಸಮರ್ಪಕವಾಗಿ ಸವಲತ್ತು ಒದಗಿಸಲು ನಿರ್ದೇಶನ ನೀಡಿದ್ದೇನೆ ಎಂದು ಶಿವಣ್ಣ ತಿಳಿಸಿದರು.

ಮುಕ್ತ ವಿವಿ ವ್ಯಾಪ್ತಿಯಲ್ಲಿ ಶೌಚಾಲಯ ಹಾಗೂ ಇನ್ನಿತರ ಸ್ವಚ್ಛತೆಗೆ ಒಟ್ಟು 184 ಮಂದಿ ಸ್ವಚ್ಛತಾ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇದರಲ್ಲಿ 66 ಮಂದಿ ಶೌಚಾಲಯ ಸ್ವಚ್ಛತಾಗಾರರು ಇದ್ದಾರೆ.

ಖಾಯಂಗೆ ಸಿಎಂ ಸ್ಪಂದನೆ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು ಮತ್ತು ಕಸ ಸಾಗಾಣಿಕೆ ವಾಹನ ಚಾಲಕರನ್ನು ಖಾಯಂಗೊಳಿಸಬೇಕೆಂಬ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಆಯೋಗವು ಸರ್ಕಾರದ ಗಮನ ಸೆಳೆದಿದೆ. ಈ ಬಗ್ಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

-ಕೋಟೆ ಎಂ.ಶಿವಣ್ಣ

ಅನುಭವಗಳು ಸೇರಿದಾಗ ಮಾತ್ರ ಕಾವ್ಯಗಳು ಪರಿಪೂರ್ಣ

ಸಿ.ಕೆ.ನಾಗಭೂಷಣ್‌ರ 'ಭಾವ ನಿನಾದ' ಕವನ ಸಂಕಲನ ಬಿಡುಗಡೆ



ಮೈಸೂರು, ಜೂ.19(ಎಸ್‌ಪಿಎನ್)–ಬೇರೆ ಬೇರೆ ಕ್ಷೇತ್ರದ ಅನುಭವಗಳು ಕಾವ್ಯ ಕ್ಷೇತ್ರಕ್ಕೆ ಸೇರಿಕೊಂಡಾಗ ಮಾತ್ರ ಕಾವ್ಯ ಪರಿಪೂರ್ಣವಾಗುತ್ತದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜಿಲ್ಲಾ ಕಸಾಪ, ಚಿನ್ಮಯಿ ಪ್ರಕಾಶನ ಸಹಯೋಗದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಲೇಖಕ ಸಿ.ಕೆ.ನಾಗಭೂಷಣ್ ರಚಿತ 'ಭಾವ ನಿನಾದ' ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ತಾವೇ ಅನುಭವಿಸಿದ ಕಷ್ಟಗಳು ಮತ್ತು ಸಮಸ್ಯೆಗಳು ಕವಿತೆಯಾಗಿ ಪರಿವರ್ತನೆಗೊಂಡಾಗ ಅಂತಹ ಕಾವ್ಯಗಳು ಗಟ್ಟಿಯಾಗಿರುತ್ತವೆ. ಒಮ್ಮೆ ದಾವಣಗೆರೆಯಲ್ಲಿ ಕವಿಗೋಷ್ಠಿ ಉದ್ಘಾಟನೆಗೆ ತೆರಳಿದ್ದೆ. ಈ ವೇಳೆ ಯುವ ಕವಿಯೊಬ್ಬ ತನ್ನ ಸರದಿಯಲ್ಲಿ ಕವಿತೆ ವಾಚನ ಮಾಡಿದ ಕವಿತೆಯ ಸಾಲು ಹೀಗಿತ್ತು. 'ನಾನೇ ಹೊಲೆದ ಚಪ್ಪಲಿಗಳು... ನಮ್ಮ ಕೇರಿಯ ಗುಡಿಸಲಿಗೆ ಬಂದು ಯಾವಾಗ ಎದೆಯ ಮೇಲೆ ಕಾಲಿಡುತಾವೋ.. ಈ ಕವಿತೆ ಅದ್ಭುತವಾಗಿ ಮೂಡಿಬಂದಿತ್ತು. ಇದನ್ನು ನಾನೇ ಬರೆದಿದ್ದರೂ ಇಷ್ಟು ನೇರವಾಗಿ ಪದಗುಚ್ಛ ಎಣೆಯಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಕವಿ ಸ್ವತಃ ತಾನೇ ಅನುಭವಿಸಿ ಬರೆದ ಕವಿತೆಗಳಿಗೆ ಹೆಚ್ಚಿನ ತೂಕವಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಲೇಖಕ ಸಿ.ಕೆ.ನಾಗಭೂಷಣ್ ರಚಿತ 'ಭಾವ ನಿನಾದ' ಕವನ ಸಂಕಲನದಲ್ಲಿ ಖಾಸಗಿ ಚಾನಲ್‌ಗಳ ಹಾವಳಿ, ಸಾಮಾಜಿಕ ಜಾಲತಾಣಗಳ ಉಪಯೋಗ, ಹೀಗೆ 40 ಕವಿತೆಗಳನ್ನು ರಚಿಸಿದ್ದು, ಈ ಕವನ ಸಂಕಲನಕ್ಕೆ ನಾನೇ ಮುನ್ನುಡಿ ಬರೆದಿದ್ದೇನೆ ಹಾಗೂ ಲೇಖಕರು ಮೊದಲ ಬಾರಿಗೆ ಕವಿತೆಗಳನ್ನು ರಚಿಸಿದರೂ ಉತ್ತಮ ಕವಿತೆಗಳನ್ನು ಬರೆದಿದ್ದಾರೆ. ಈ ಕವಲನ ಸಂಕಲನವನ್ನು ಪ್ರೇಕ್ಷಕರು ಓದಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ನಿವೃತ್ತ ಡಿಡಿಪಿಯು ಪುಟ್ಟು, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಯುವ ಬರಹಗಾರ ಸತೀಶ್ ಜವರೇಗೌಡ, ಸರ್ಕಾರಿ ಪಿಯು ಕಾಲೇಜು ಪ್ರಾಂಶುಪಾಲ ಸಂತೋಷ್ ಚೊಕ್ಕಾಡಿ, ಗೋವಿಂದ ಕುಲಕರ್ಣಿ, ಮಜ್ಜಿಗೆಪುರ ಶಿವರಾಂ, ಎಂ.ಎಸ್.ರಾಘವೇಂದ್ರ ಇದ್ದರು.

ಇಂದು ಅಂತರ ಕಾಲೇಜು ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಜೂ.19(ಎಂಟಿವೈ)– ಮೈಸೂರಿನ ಜೆ.ಪಿ.ನಗರದ ಹಿಂದೂಸ್ಥಾನ್ ಕಾಲೇಜಿನಲ್ಲಿ ಜೂ.20 ರಂದು ಡಾ.ಕೆ.ಸಿ.ಜಿ.ವರ್ಗೀಸ್ ಸ್ಮರಣಾರ್ಥ ರಾಜ್ಯಮಟ್ಟದ ಅಂತರ ಕಾಲೇಜು ಟೆನ್ನಿಸ್ ಬಾಲ್ ಬಾಕ್ಸ್ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾರಾದ ಪ್ರಿಯಾ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ರಾಜ್ಯದ ಪದವಿ ಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. 30ಕ್ಕೂ ಹೆಚ್ಚು ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಪ್ರತಿ ತಂಡದಲ್ಲಿ 7+1 ಆಟಗಾರರು ಇರುತ್ತಾರೆ. ಇದು ನಾಕೌಟ್ ಮಾದರಿಯ ಪಂದ್ಯವಾಗಿದ್ದು, ಒಂದು ಪಂದ್ಯಕ್ಕೆ 5 ಓವರ್ ನಿಗದಿಪಡಿಸಲಾಗಿದೆ. ಪ್ರಥಮ ಬಹುಮಾನ ಪಡೆದ ತಂಡಕ್ಕೆ 5 ಸಾವಿರ ರೂ. ನಗದು, ದ್ವಿತೀಯ ಸ್ಥಾನ ಪಡೆದ ತಂಡಕ್ಕೆ 2,500 ರೂ. ನಗದು ಹಾಗೂ ಟ್ರೋಫಿ ನೀಡಲಾಗುವುದು. ತಂಡದ ಹೆಸರು ನೋಂದಾಯಿಸಿಕೊಳ್ಳಲು ಜೂ.18 ಕೊನೆ ದಿನವಾಗಿದ್ದು, ಮಾಹಿತಿಗೆ ಮೊ: 94481 66052 ಸಂಪರ್ಕಿಸುವಂತೆ ಕೋರಿದರು.

ವಿವಿಧ ಸ್ಪರ್ಧೆ: ಪ್ರತಿ ವರ್ಷದಂತೆ ಈ ಬಾರಿಯೂ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆ ಆಯೋಜಿಸಲಾಗಿದೆ. ಜೂ.23 ರಂದು ಹ್ಯಾಕಥಾನ್ ಗಣಕಯಂತ್ರ ವಿಭಾಗದ ಎಲ್ಲ ಸ್ನಾತಕ, ಸ್ನಾತಕೋತ್ತರ ಮತ್ತು ಅಭಿಯಂತ್ರಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಭಿನ್ನ ಸ್ಪರ್ಧೆ ಹಾಗೂ ಫ್ಯಾಷನ್ ಶೋ ಹಮ್ಮಿಕೊಂಡಿದೆ. ಜೂ.24 ರಂದು ಸ್ನಾತಕ, ಸ್ನಾತಕೋತ್ತರ ಹಾಗೂ ಅಭಿಯಂತ್ರಕ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಅತೀ ಹೆಚ್ಚು ಬಹುಮಾನ ಪಡೆಯುವ ಕಾಲೇಜು ತಂಡಕ್ಕೆ 20 ಸಾವಿರ ರೂ. ನಗದು ಮತ್ತು ಟ್ರೋಫಿ, ಅತೀ ಹೆಚ್ಚು ಬಹುಮಾನದೊಂದಿಗೆ 2ನೇ ಸ್ಥಾನ ಪಡೆಯುವ ಕಾಲೇಜು ತಂಡಕ್ಕೆ 10 ಸಾವಿರ ರೂ. ನಗದು ಹಾಗೂ ಟ್ರೋಫಿ ನೀಡಲಾಗುವುದು ಎಂದರು. ನಮ್ಮ ಕಾಲೇಜು 2020–21ನೇ ಶೈಕ್ಷಣಿಕ ಸಾಲಿನಲ್ಲಿ ನ್ಯಾಷನಲ್ ಎಜುಕೇಷನ್ ಎಕ್ಸಲೆನ್ಸ್ ಅವಾರ್ಡ್ ಆ್ಯಂಡ್ ಕಾನ್ಫರೆನ್ಸ್‌ನಲ್ಲಿ ಕಾಲೇಜು 'ಟಾಪ್ ಆ್ಯಂಡ್ ಮೋಸ್ಟ್ ಟ್ರಸ್ಟೆಡ್ ಡಿಗ್ರಿ ಕಾಲೇಜ್' ಪ್ರಶಸ್ತಿ ಪಡೆದುಕೊಂಡಿದೆ. ಅದೇ ರೀತಿ ಗ್ಲೋಬಲ್ ಎಜುಕೇಷನ್ ಆ್ಯಂಡ್ ಸ್ಕಿಲ್ ಸಮ್ಮಿಟ್ ಲೀಡರ್‌ಶಿಪ್ ಅವಾರ್ಡ್‌ನಲ್ಲಿ 'ಸ್ಕಿಲ್ ಡೆವಲಪ್‌ಮೆಂಟ್ ವಿದ್ಯಾಸಂಸ್ಥೆ' ಪ್ರಶಸ್ತಿಯನ್ನು ಪಡೆದುಕೊಂಡಿದೆ ಎಂದು ವಿವರಿಸಿದರು.

ಪರೀಕ್ಷಾ ಶುಲ್ಕ ಪಾವತಿಸಲು ಅಂತಿಮ ಅವಕಾಶ

ಮೈಸೂರು, ಜೂ.19–ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಆಗಸ್ಟ್ ತಿಂಗಳಲ್ಲಿ ಜರುಗಲಿರುವ ವಾರ್ಷಿಕ ಪದ್ಧತಿಯ ಸ್ನಾತಕ ಪದವಿ ಪರೀಕ್ಷೆಗಳ ಶುಲ್ಕ ಪಾವತಿಸಲು ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಕಾಲೇಜಿಗೆ ಸಲ್ಲಿಸಲು ಜೂ.30 ಅಂತಿಮ ದಿನಾಂಕವಾಗಿದೆ. ಆನ್ಲೈನ್ ಮೂಲಕ ಪರೀಕ್ಷೆ ಅರ್ಜಿಗಳನ್ನು ಕಾಲೇಜಿನವರು ಭರ್ತಿ ಮಾಡಲು ಆನ್‌ಲೈನ್‌ನಲ್ಲಿ ನಮೂದಿಸಲು ಸಾಧ್ಯವಾಗಿಲ್ಲವೆಂದರೆ ಅರ್ಜಿಗಳನ್ನು ಖುದ್ದು ಮೈಸೂರು ವಿವಿ ಪರೀಕ್ಷಾಂಗ ಭವನದಲ್ಲಿರುವ Meta-I Technologies Pvt. Ltd. ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು. ಪರೀಕ್ಷಾಂಗ ಶುಲ್ಕವನ್ನು ಜುಲೈ 5ರೊಳಗೆ ಡಿಡಿ ಮೂಲಕ University Campus ನಲ್ಲಿರುವ SBI ಬ್ಯಾಂಕ್‌ನ ಪರೀಕ್ಷೆ ಖಾತೆ ಸಂಖ್ಯೆ: 54007591200 (Examination Account)ಗೆ ಡಿಡಿ ಮೂಲಕ finance officer, university of mysore ಇವರ ಹೆಸರಿಗೆ ಸಂದಾಯ ಮಾಡಿ ಮೂಲ ಪ್ರತಿಯನ್ನು ಕಚೇರಿಗೆ ಸಲ್ಲಿಸಬೇಕು. ಪ್ರವೇಶ ಪತ್ರಗಳ ಮುದ್ರಣದ ನಂತರ ವಿವಿ ಅನುಮೋದನೆ ಪಡೆಯಲು ಆನ್‌ಲೈನ್ ಮೂಲಕ ಅಭ್ಯರ್ಥಿಗಳ ಪಟ್ಟಿಯನ್ನು ಮುದ್ರಿಸಿ ಪ್ರಾಂಶುಪಾಲರ ಸಹಿ ಪಡೆದು ಒಂದು ಪ್ರತಿಯನ್ನು ಪ್ರವೇಶಪತ್ರ ಜೊತೆಯಲ್ಲಿ ಕುಲಸಚಿವರಿಗೆ ಜುಲೈ 15ರೊಳಗೆ ಸಲ್ಲಿಸಬೇಕು ಎಂದು ಕುಲಸಚಿವರು (ಪರೀಕ್ಷಾಂಗ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.22, ಕರ್ನಾಟಕದ ಧ್ರುವತಾರೆ ಕೃತಿ ಬಿಡುಗಡೆ

ಮೈಸೂರು, ಜೂ.19–ಡಾ. ಜಗನ್ನಾಥ ಶೆಟ್ಟಿ ಅವರು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರ ಸಿದ್ಧಿ ಸಾಧನೆಗಳು, ಏಳು–ಬೀಳುಗಳನ್ನು ಕುರಿತು ರಚಿಸಿರುವ 'ಕರ್ನಾಟಕದ ಧ್ರುವತಾರೆ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಜೂ. 22ರಂದು ಬೆಳಗ್ಗೆ 10.30ಕ್ಕೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಉದ್ಘಾಟಿಸುವರು. ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ ಕೃತಿ ಲೋಕಾರ್ಪಣೆ ಮಾಡುವರು. ತವರು ಅರಸು ಮಹಿಳಾ ಸಮಾಜದ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಅಧ್ಯಕ್ಷತೆ ವಹಿಸುವರು. ಲೇಖಕ ಡಾ. ಜಗನ್ನಾಥ್ ಶೆಟ್ಟಿ ಅವರನ್ನು ಶತಮಾನೋತ್ಸವ ಸಂಭ್ರಮದಲ್ಲಿ ಅರಸು ಮಂಡಲಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಅಭಿನಂದಿಸುವರು. ಮುಖ್ಯ ಅತಿಥಿಗಳಾಗಿ ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಅಮರನಾಥ ರಾಜೇ ಅರಸ್ ಪಾಲ್ಗೊಳ್ಳುವರು.



ಮೈಸೂರಿನ ಹೂಟಗಳ್ಳಿ ಸರ್ಕಾರಿ ಶಾಲೆಯಲ್ಲಿ ಹೂಟಗಳ್ಳಿ ಗ್ರಾಮಾಭಿವೃದ್ಧಿ ಶ್ರೀರಾಮ ಸೇವಾ ಸಂಘ ಹಾಗೂ ಲೇ.ನಿಂಗೇಗೌಡ ಅವರ ಸ್ಮರಣಾರ್ಥ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಲೇ.ನಿಂಗೇಗೌಡ ಅವರ ಕುಟುಂಬಸ್ಥರು ಹಾಗೂ ಸಂಘದ ಅಧ್ಯಕ್ಷ ಟಿ.ಪ್ರಕಾಶ್, ಕಾರ್ಯದರ್ಶಿ ರಾಮಚಂದ್ರ ಹಾಗೂ ಸದಸ್ಯರು, ಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

ಯಡಹಳ್ಳಿಯಲ್ಲಿ ನೂತನ ಡೈರಿ ಕಟ್ಟಡ ಉದ್ಘಾಟನೆ

ಡೈರಿಗಳಿಗೆ ಮೂಲ ಸೌಕರ್ಯ ಒದಗಿಸಲು ಮೈಮುಲ್ ಬದ್ಧ

ತಾಪಂ ಮಾಜಿ ಅಧ್ಯಕ್ಷರೂ ಆದ ಮೈಮುಲ್ ನಿರ್ದೇಶಕ ಆರ್.ಚಲುವರಾಜು



ತಿ.ನರಸೀಪುರ, ಜೂ.19(ಎಸ್‌ಕೆ)– ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಮೂಲ ಸೌಕರ್ಯ ಒದಗಿಸಲು ಜಿಲ್ಲಾ ಹಾಲು ಒಕ್ಕೂಟ ಬದ್ಧವಾಗಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲಾಗುವುದು ಎಂದು ತಾಪಂ ಮಾಜಿ ಅಧ್ಯಕ್ಷರೂ ಆದ ಮೈಮುಲ್ ನಿರ್ದೇಶಕ ಆರ್.ಚಲುವರಾಜು ತಿಳಿಸಿದರು.

ತಾಲೂಕಿನ ಯಡಹಳ್ಳಿ ಗ್ರಾಮದಲ್ಲಿ ಭಾನುವಾರ ಮೈಮುಲ್ ಅನುದಾನದ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ಸದೃಢವಾಗಿ ಅಭಿವೃದ್ಧಿ ಹೊಂದಲು ಸ್ವಂತ ಕಟ್ಟಡ ಬೇಕು. ತಾಲೂಕಿನಲ್ಲಿ ಕಟ್ಟಡದ ಕೊರತೆ ಇರುವ ಸಂಘಗಳಿಗೆ ಸ್ವಂತ ಸೂರು ಕಟ್ಟಿಕೊಳ್ಳಲು ಅಗತ್ಯ ನೆರವು ನೀಡಲಾಗುವುದು ಎಂದರು.

ಸಂಘಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಉತ್ಪಾದಕ ರೈತರು ಮೈಮುಲ್ ಉತ್ಪನ್ನಗಳನ್ನು ಬಳಸಬೇಕು. ಆ ಮೂಲಕ ಬೇಕರಿ ತಿನಿಸುಗಳ ಬಳಕೆಗೆ ಕಡಿವಾಣ ಹಾಕಿ, ಒಕ್ಕೂಟದ ಪ್ರಗತಿಗೆ ಪರೋಕ್ಷವಾಗಿ ಸಹಕರಿಸಬೇಕು. ಸಂಘದ ಷೇರುದಾರರು ಆಗಿರುವ ಹಾಲು ಉತ್ಪಾದಕರು ಆರ್ಥಿಕ ಲಾಭ ಪಡೆಯಬೇಕು ಎಂದು ಕರೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಎಂ.ಎಲ್.ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮೀಜಿ ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ಶಾಸಕ ಎಂ.ಅಶ್ವಿನ್ ಕುಮಾರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಲೀಲಾ, ನೀಲಾಂಬಿಕೆ, ಡೈರಿ ಅಧ್ಯಕ್ಷ ವೈ.ಬಿ.ಪ್ರಕಾಶ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ್, ಮೂಗೂರು ಪಿಎಸಿಎಸ್ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್, ಮೈಮುಲ್ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಉಪವ್ಯವಸ್ಥಾಪಕ ಡಾ.ಸಿ.ದಿವಾಕರ್, ವಿಸ್ತರಣಾಧಿಕಾರಿಗಳಾದ ಆರ್.ಪ್ರಮೋದ್, ಎಂ.ದಿವ್ಯಶ್ರೀ, ಡಿ.ಉಮಾವತಿ, ಸಂಘದ ಉಪಾಧ್ಯಕ್ಷ ರಂಗಸ್ವಾಮಿ, ನಿರ್ದೇಶಕರಾದ ಎ.ಪರಶಿವಮೂರ್ತಿ, ಡಿ.ನಾಗೇಶ್, ಡಿ.ದೇವೇಗೌಡ, ವೈ.ಎಸ್.ಪ್ರಕಾಶ್, ಸುರೇಶ್, ಜಯರಾಮಶೆಟ್ಟಿ, ಎಸ್.ಸಿದ್ದು, ನಾಗಮ್ಮ, ಪುಷ್ಪ, ರತ್ನಮ್ಮ, ಕಾರ್ಯ ನಿರ್ವಹಣಾಧಿಕಾರಿ ಗುರುಪಾದ ಸ್ವಾಮಿ, ಮುಖಂಡರಾದ ದಯಾನಂದ ಪಟೇಲ್, ಕೆಂಪಯ್ಯನಹುಂಡಿ ಅಂದಾನಿಗೌಡ ಇನ್ನಿತರರಿದ್ದರು.

ಪಿರಿಯಾಪಟ್ಟಣ ಅಭಿವೃದ್ಧಿ ಕಾಮಗಾರಿ ಮುಂದುವರಿಸಲು ಕ್ರಮ



ಪಿರಿಯಾಪಟ್ಟಣ, ಜೂ.19(ವೀರೇಶ್)– ದಕ್ಷಿಣ ಪದವೀಧರರ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನಾದ್ಯಂತ ಯಾವುದೇ ಅಭಿವೃದ್ಧಿ ಕೆಲಸಗಳಾಗದೆ ಹಿನ್ನಡೆಯಾಗಿದ್ದು, ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ ಅಭಿವೃದ್ಧಿ ಕಾಮಗಾರಿ ಮುಂದುವರೆಸಲಾಗುವುದು ಎಂದು ಶಾಸಕ ಕೆ. ಮಹದೇವ್ ಭರವಸೆ ನೀಡಿದರು.

ತಾಲೂಕಿನ ಮರಡಿಯೂರು ಗ್ರಾಮದ ಪರಿಶಿಷ್ಟ ಜಾತಿ ಕಾಲೊನಿಯಲ್ಲಿ 20 ಲಕ್ಷ ರೂ. ವೆಚ್ಚದ ಸಿ.ಸಿ. ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಉತ್ತಮ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕೆಂದು ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಗ್ರಾಮಸ್ಥರು ಕಾಮಗಾರಿಯ ಬಗ್ಗೆ ಕಾಳಜಿ ವಹಿಸಿ, ಉತ್ತಮ ಕಾಮಗಾರಿಗೆ ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು. ಗ್ರಾಮದ ಬಸವೇಶ್ವರ ದೇವಸ್ಥಾನದ ಅಭಿವೃದ್ಧಿಗಾಗಿ ಈಗಾಗಲೇ ಗ್ರಾಮದ ಮುಖಂಡರು ಬೇಡಿಕೆ ನೀಡಿದ್ದು, ಇದಕ್ಕಾಗಿ 5 ಲಕ್ಷ ರೂ.ಗಳನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್, ಮುಖಂಡರಾದ ಮಂಜು, ಮೋಹನ್, ಸೋಮಶೇಖರ್, ಗಿರೀಶ್, ಉದಯ್‌ಕುಮಾರ್ ಹಾಜರಿದ್ದರು.

ನಾಳೆ 'ಭೋಗೇಶ್ವರ ನೀ ಅಮರ' ಕಾರ್ಯಕ್ರಮ



ಹೆಚ್.ಡಿ.ಕೋಟೆ ಜೂ.19(ಮಂಜು)– ವನಸಿರಿ ನಾಡು ಎಂದು ಹೆಸರಾಂತ ನಾಗರಹೊಳೆ ಕಬಿನಿ ಹಿನ್ನೀರಿನಲ್ಲಿ ಏಷ್ಯಾದಲ್ಲೇ ಅತಿ ಉದ್ದನೆ ದಂತ ಹೊಂದಿದ್ದ ಮಿಸ್ಟರ್ ಕಬಿನಿ ಭೋಗೇಶ್ವರ ಸಾವನ್ನಪ್ಪಿದ ಹಿನ್ನೆಲೆಯಲ್ಲಿ 'ಭೋಗೇಶ್ವರ ನೀ ಅಮರ' ಶೀರ್ಷಿಕೆಯಡಿ ಚಿರಸ್ಮರಣೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಜೂ.21ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ. ಪಟ್ಟಣದ ಹಳೆ ಆಸ್ಪತ್ರೆ ಆವರಣದಲ್ಲಿ ಹೆಚ್.ಡಿ. ಕೋಟೆ ರೋಟರಿ ಕ್ಲಬ್‌ನಿಂದ ನಡೆಯುವ ಕಾರ್ಯಕ್ರಮಕ್ಕೆ ವನ್ಯಜೀವಿ ಪ್ರಿಯರು, ಛಾಯಾಗ್ರಾಹಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಾಲೂಕು ರೋಟರಿ ಕ್ಲಬ್ ಅಧ್ಯಕ್ಷ ಕೆ.ಎಂ.ಮಹೇಶ್ ತಿಳಿಸಿದ್ದಾರೆ.

ಬಿ.ಅರ್ಚನಾ ಅತ್ಯುನ್ನತ ಶ್ರೇಣಿ



ಸರಗೂರು, ಜೂ.19(ನಾಗೇಶ್)– ತಾಲೂಕಿನ ಇಟ್ನಾ ಗ್ರಾಮದ ಬಿ. ಬಸವರಾಜು ಮತ್ತು ಕುಮಾರಿ ದಂಪತಿಯ ಪುತ್ರಿ ಬಿ. ಅರ್ಚನಾ ದ್ವಿತೀಯ ಪಿಯು ಪರೀಕ್ಷೆಯಲ್ಲಿ 584 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ತಾಲೂಕಿಗೆ ಪ್ರಥಮರಾಗಿದ್ದಾರೆ.

ಕನ್ನಡ 98, ಇಂಗ್ಲೀಷ್ 91, ಅರ್ಥಶಾಸ್ತ್ರ 100, ವ್ಯವಹಾರ ಅಧ್ಯಯನ 99, ಲೆಕ್ಕಶಾಸ್ತ್ರ 96 ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ 100 ಅಂಕ ಪಡೆದಿದ್ದಾರೆ. ಈಕೆ ಹೆಚ್.ಡಿ.ಕೋಟೆ ಸೆಂಟ್ ಮೇರಿಸ್ ಕಾಲೇಜಿನ ವಿದ್ಯಾರ್ಥಿನಿ.

ದಿ.ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಕ್ಷ ಬಲವರ್ಧನೆಗೆ ಚಾಲನೆ

ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್



ತಿ.ನರಸೀಪುರ, ಜೂ.19(ಎಸ್‌ಕೆ)– ರಾಜ್ಯದ ಮೌಲ್ಯಾಧಾರಿತ ರಾಜಕಾರಣಿಯಾಗಿ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡಿದ್ದ ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಕ್ಷ ಬಲಪಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್ ತಿಳಿಸಿದರು.

ತಾಲೂಕಿನ ವಾಟಾಳು ಗ್ರಾಮದ ಸೂರ್ಯ ಸಿಂಹಾಸನ ಮಠದಲ್ಲಿ ಡಾ.ಶ್ರೀಸಿದ್ದ ಲಿಂಗ ಶಿವಾಚಾರ್ಯ ಸ್ವಾಮೀಜಿ ಅವರನ್ನು ಪಕ್ಷದ ರಾಜ್ಯ ಪದಾಧಿಕಾರಿಗಳೊಟ್ಟಿಗೆ ಭೇಟಿ ಮಾಡಿ ಆಶೀರ್ವಚನ ಪಡೆದು ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ನೀಡಿ ಮಾತನಾಡಿದರು.

ರಾಮಕೃಷ್ಣ ಹೆಗಡೆಯವರ ನಿಧನದ ನಂತರ ಪಕ್ಷದಲ್ಲಿದ್ದ ಅನೇಕ ಮುಖಂಡರು ಬೇರೆ ಬೇರೆ ಪಕ್ಷದಲ್ಲಿ ಗುರುತಿಸಿಕೊಂಡಿದ್ದರಿಂದ ಪಕ್ಷದ ಬೆಳವಣಿಗೆ ಕುಂಠಿತವಾಯಿತು. ಈಗ ಪಕ್ಷವನ್ನು ಮತ್ತೆ ಮುನ್ನೆಲೆಗೆ ತರಲು ಕಳೆದ 8 ತಿಂಗಳಿಂದ ಶ್ರಮಿಸುತ್ತಿದ್ದೇವೆ. ಪ್ರಸಕ್ತ ರಾಜಕಾರಣದಲ್ಲಿ ಜಾತಿವಾದ, ಕೋಮುವಾದ ತಾಂಡವವಾಡುತ್ತಿದ್ದು, ನಾವು ಸಮಾಜವಾದ ಮತ್ತು ಜಾತ್ಯತೀತ ಸಿದ್ಧಾಂತದಡಿ ಪಕ್ಷ ಮುನ್ನಡೆಸಲು ತೀರ್ಮಾನಿಸಿದ್ದೇವೆ. ಬೇರೆ ಬೇರೆ ಪಕ್ಷದಲ್ಲಿರುವ ಕೆಲವು ನಾಯಕರು ನಮ್ಮ ಸಂಪರ್ಕದಲ್ಲಿದ್ದು, ಮೈಸೂರು ಭಾಗದಲ್ಲಿ ಐತಿಹಾಸಿಕ ಸಮಾವೇಶ ಮಾಡುವ ಮೂಲಕ ಪಕ್ಷದಿಂದ ಹೊರಗಿರುವ ನಾಯಕರನ್ನು ಮಾತೃ ಪಕ್ಷಕ್ಕೆ ಸೆಳೆಯುವ ಕೆಲಸ ಮಾಡಲಿದ್ದೇವೆ ಎಂದರು.

ಪಕ್ಷದ ಕಾರ್ಯಾಧ್ಯಕ್ಷ ಶಿವಕುಮಾರ್ ಮಾತನಾಡಿ, ಕೈಗಾರಿಕೋದ್ಯಮಿಯಾಗಿದ್ದ ನಾನು ರಾಜಕೀಯ ಪ್ರವೇಶಿಸಲು ರಾಮಕೃಷ್ಣ ಹೆಗಡೆಯವರ ಆದರ್ಶಗಳೇ ಸ್ಫೂರ್ತಿ. ಅವರು ಸ್ಥಾಪಿಸಿದ ಪಕ್ಷದಿಂದಲೇ ರಾಜಕೀಯ ಪ್ರವೇಶ ಮಾಡುತ್ತಿದ್ದೇನೆ. ಪಕ್ಷವನ್ನು ಮತ್ತೆ ರಾಜ್ಯದಲ್ಲಿ ಮುನ್ನಡೆಸಲು ಸಕ್ರಿಯ ಕಾರ್ಯಕರ್ತರ ಪಡೆ ಕಟ್ಟಲಾಗುತ್ತದೆ ಎಂದರು.

ರಾಜ್ಯ ಕಾರ್ಯದರ್ಶಿ ಸತೀಶ್ ಗೋವಿಂದಪ್ಪ ಮಾತನಾಡಿ, ಲೋಕಶಕ್ತಿ ಪಕ್ಷ ರಾಜ್ಯಕ್ಕೆ ಶಕ್ತಿ ತುಂಬುವ ಕೆಲಸ ಮಾಡಲಿದೆ. ರಾಜ್ಯದ ಎಲ್ಲಾ ಪಕ್ಷಗಳು ಭ್ರಷ್ಟಾಚಾರದಲ್ಲಿ ಮುಳುಗಿರುವುದನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಲೋಕಶಕ್ತಿ ಪಕ್ಷವನ್ನು ರಾಜ್ಯಾದ್ಯಂತ ಸಂಘಟಿಸುವ ಕಾರ್ಯವನ್ನು ಪದಾಧಿಕಾರಿಗಳು ಮಾಡಲಿದ್ದಾರೆ ಎಂದರು.

ಈ ವೇಳೆ ಪಕ್ಷದ ರಾಜ್ಯ ಉಪಾಧ್ಯಕ್ಷ ನಂದೀಶ್ ರಾಮಯ್ಯ, ರಾಜ್ಯ ವಕ್ತಾರ ಎಸ್. ಪ್ರಕಾಶ್ ಮೂರ್ತಿ, ಬೆಂಗಳೂರು ನಗರಾಧ್ಯಕ್ಷ ವಿ.ಸುನೀಲ್, ಜಿಲ್ಲಾ ಎಸ್‌ಟಿ ಘಟಕದ ಅಧ್ಯಕ್ಷೆ ಮೀನಾಕ್ಷಮ್ಮ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಿ.ಮಾದೇಶ್, ಹಿಂದುಳಿದ ವರ್ಗಗಳ ಕಾರ್ಯದರ್ಶಿ ಎ.ಸಿ.ಪೂರ್ಣಚಂದ್ರ ಮಹಿಳಾ ಘಟಕದ ಮೀನಾ ಮತ್ತಿತರರಿದ್ದರು.

ಕುನ್ನಪಟ್ಟಣಕ್ಕೆ ಮೂಲ ಸೌಕರ್ಯ ಕಲ್ಪಿಸಲು ಕ್ರಮ

ತಹಸೀಲ್ದಾರ್ ಚಲುವರಾಜು ಭರವಸೆ



ಸರಗೂರು, ಜೂ.19(ನಾಗೇಶ್)– ತಾಲೂಕಿನ ಕುನ್ನಪಟ್ಟಣಕ್ಕೆ ಮೂಲ ಸೌಕರ್ಯ ಕಲ್ಪಿಸಲು ಕ್ರಮ ವಹಿಸಿ, ಈ ಕುರಿತು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ತಹಸೀಲ್ದಾರ್ ಚಲುವರಾಜು ಭರವಸೆ ನೀಡಿದರು.

ತಾಲೂಕಿನ ಕೊತ್ತೇಗಾಲ ಗ್ರಾಪಂ ವ್ಯಾಪ್ತಿಯ ಕುನ್ನಪಟ್ಟಣ ಗ್ರಾಮದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕಾಡಂಚಿನ ಗ್ರಾಮಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇದ್ದು, ಗ್ರಾಪಂನಿಂದ ಚರಂಡಿ, ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲ ಸೌಕರ್ಯ ಒದಗಿಸಲು ಸೂಚನೆ ನೀಡಲಾಗುವುದು. ಕಾರ್ಯಕ್ರಮದಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಇತ್ಯರ್ಥಕ್ಕೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ಇದಕ್ಕೂ ಮುನ್ನಾ ತಹಶೀಲ್ದಾರ್ ಗ್ರಾಮದ ಪ್ರಮುಖ ಬೀದಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ನೆರೆಯಿಂದ ಗ್ರಾಮದಲ್ಲಿ ಆಗುವ ಅನಾಹುತಗಳ ಬಗ್ಗೆ ಗ್ರಾಮಸ್ಥರು ಮನವರಿಕೆ ಮಾಡಿಕೊಟ್ಟರು. ಅಲ್ಲದೆ ಕಳೆದ 15 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಗ್ರಾಮ ಸ್ಥಳಾಂತರ ಅರ್ಜಿಯನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು. ಇಲ್ಲವಾದಲ್ಲಿ ಕುನ್ನಪಟ್ಟಣ ಗ್ರಾಮಸ್ಥರ ಜೀವನ ಅಧೋಗತಿಗೆ ಇಳಿಯಲಿದೆ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಚಲುವರಾಜು, ಬೆಟ್ಟದಂಚಿನಲ್ಲಿ ಮನೆ ನಿರ್ಮಿಸಿಕೊಂಡು ಬದುಕುತ್ತಿರುವುದರಿಂದ ಆಗುವ ಅನಾಹುತಗಳ ಬಗ್ಗೆ ಅರಿವಿದೆ. ಗ್ರಾಮ ಸ್ಥಳಾಂತರ ವಿಷಯ ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿದೆ. ಮೇಲಾಧಿಕಾರಿಗಳು ನಿರ್ದೇಶನ ನೀಡದ ಕೂಡಲೇ ಸಮಸ್ಯೆ ಬಗೆಹರಿಸಲಾಗುವುದು ಎಂದರು.

ಗ್ರಾಮದ ಮುಖಂಡ ಬೆಟ್ಟನಾಯಕ, ಗ್ರಾಪಂ ಮಾಜಿ ಸದಸ್ಯ ರವಿಚಂದ್ರ, ಗ್ರಾಮದ ಹತ್ತಾರು ಸಮಸ್ಯೆ ಹೇಳಿಕೊಂಡರು. ಇದಕ್ಕೆ ಸ್ಥಳದಲ್ಲಿದ್ದ ಅಧಿಕಾರಿಗಳು ಕೆಲವು ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು. ಮತ್ತೇ ಕೆಲವು ಪ್ರಶ್ನೆಗಳಿಗೆ ಗಡುವು ಪಡೆದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿದೇವಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಕೆ.ಆರ್.ಶೋಭಾ, ಸದಸ್ಯರಾದ ಮಹೇಶ್, ಕೆಂಪಾಲಮ್ಮ, ಪ್ರಭಾರ ಪಿಡಿಓ ನಾಗರಾಜು, ಉಪ ತಹಶೀಲ್ದಾರ್ ಸುನೀಲ್, ಅಧಿಕಾರಿಗಳಾದ ಡಾ.ವೈ.ಡಿ.ರಾಜಣ್ಣ, ಚಂದ್ರಕಾಂತ, ಉಷಾ, ಕಾಂತರಾಜ್, ಉಮೇಶ್, ಡಾ.ರವಿಕುಮಾರ್, ಎಸ್‌ಐ ಶ್ರವಣ್‌ದಾಸ್ ರೆಡ್ಡಿ, ಡಾ.ಶರತ್, ಹರೀಶ್, ಮುಜೀಬ್, ಕುಮಾರ್, ಹೇಮಂತ್, ಗುಂಡಣ್ಣ, ಸಿದ್ದರಾಜು ಸೇರಿದಂತೆ ಇನ್ನಿತರರಿದ್ದರು.

ತೋಟಗಾರಿಕೆ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೆಚ್.ಡಿ.ಕೋಟೆ, ಜೂ.19(ಮಂಜು)– ತೀವ್ರ ಕುತೂಹಲ ಕೆರಳಿಸಿದ್ದ ತಾಲೂಕು ತೋಟಗಾರಿಕೆ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತರಾದ ಮಾದಾಪುರ ನಂದೀಶ್ ಹಾಗೂ ಉಪಾಧ್ಯಕ್ಷರಾಗಿ ಉಯ್ಯಂಬಳ್ಳಿ ಸ್ವಾಮಿ ಆಯ್ಕೆಯಾದರು.

ಜೂ. 5ರಂದು ಸಹಕಾರ ಸಂಘದ 13 ಸದಸ್ಯರ ಸ್ಥಾನಕ್ಕೆ ಚುನಾವಣೆ ನಡೆದಿತ್ತು. ಕಾಂಗ್ರೆಸ್ ಬೆಂಬಲಿತ 7 ಜನ ಹಾಗೂ ಬಿಜೆಪಿ ಬೆಂಬಲಿತ 6 ಜನ ಸದಸ್ಯರು ಆಯ್ಕೆಯಾಗಿದ್ದರು. ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ನಂದೀಶ್, ಕಾಂಗ್ರೆಸ್ ಬೆಂಬಲಿತೆ ಪ್ರೇಮ ತಿಮ್ಮೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಉಯ್ಯಂಬಳ್ಳಿ ಸ್ವಾಮಿ ಹಾಗೂ ಕಾಂಗ್ರೆಸ್ ಬೆಂಬಲಿತ ಬೀರಪ್ಪ ನಾಮಪತ್ರ ಸಲ್ಲಿಸಿದರು. ಬಿಜೆಪಿ ಪರವಾಗಿ ಸರ್ಕಾರದ ನಾಮನಿರ್ದೇಶನ ಸದಸ್ಯ ಒಂದು ಮತ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿ ಒಂದು ಮತ ಒಟ್ಟು 8 ಮತಗಳು ಬಿದ್ದ ಕಾರಣ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ಬಿಜೆಪಿಗೆ ಒಲಿಯಿತು. ಚುನಾವಣಾಧಿಕಾರಿಯಾಗಿ ಸಹಕಾರ ಸಂಘಗಳ ಅಧಿಕಾರಿ ಇತೇಂದ್ರ ಕುಮಾರ್, ಸಹಾಯಕ ಚುನಾವಣಾ ಅಧಿಕಾರಿಯಾಗಿ ಶ್ರೀಧರ್ ಮೂರ್ತಿ ಕರ್ತವ್ಯ ನಿರ್ವಹಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾವಕ್ತಾರ ಹಾಗೂ ತಾಪಂ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಬಿಜೆಪಿ ತಾಲೂಕು ಅಧ್ಯಕ್ಷ ಗುರುಸ್ವಾಮಿ, ಟಿಎಪಿಸಿಎಂಎಸ್ ಅಧ್ಯಕ್ಷ ಮೊತ್ತ ಬಸವರಾಜಪ್ಪ ಟೌನ್ ಅಧ್ಯಕ್ಷ ವಿವೇಕಾನಂದ, ಕಾರ್ಯದರ್ಶಿ ಚನ್ನಪ್ಪ ಕೆಂಡಗಣ್ಣಸ್ವಾಮಿ, ಸತೀಶ್, ಸೋಮಚಾರಿ, ತೋಟಗಾರಿಕೆ ಸಹಕಾರ ಸಂಘದ ಸದಸ್ಯರಾದ ನಟರಾಜು, ರಾಮಚಂದ್ರ, ವಿಶ್ವ, ಮುತ್ತಣ್ಣ, ಶ್ರೀನಿವಾಸರಾಜು, ಮುಖಂಡರಾದ ಮಾದೇಶ್, ಬಿ.ಗುರುಸ್ವಾಮಿ ಇದ್ದರು.

ಕಿತ್ತೂರು ಶಾಲೆ ಮಕ್ಕಳಿಗೆ ಪರಿಷ್ಕೃತ ಪಠ್ಯ ಪುಸ್ತಕ ವಿತರಣೆ

ಕಿತ್ತೂರು, ಜೂ.19– ಪಿರಿಯಾಪಟ್ಟಣ ತಾಲೂಕು ಕಿತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2022–23ನೇ ಸಾಲಿನ ಮಕ್ಕಳಿಗೆ ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಮುಖ್ಯ ಶಿಕ್ಷಕ ಹೆಚ್.ಜೆ.ರಾಜೇಂದ್ರ ವಿತರಿಸಿದರು. ಬಳಿಕ ಮಾತನಾಡಿದ ಅವರು, ಪ್ರಸಕ್ತ ಸಾಲಿಗೆ ಶಾಲೆಗಳು ಅವಧಿಗೂ ಮುನ್ನವೇ ಆರಂಭಗೊಂಡಿದ್ದು, ಕಲಿಕಾ ಚೇತರಿಕೆಯ ಮೂಲಕ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆ ಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಚೆಲುವರಾಜು, ಶಿಕ್ಷಕರಾದ ದೇವೇಂದ್ರ ಹೆಚ್.ಕೆ.ಚಂದ್ರಯ್ಯ, ಅನಿಲ್ ಕುಮಾರ್, ಚನ್ನಕೇಶವ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯುತ್ ಅದಾಲತ್ ಸದ್ಬಳಕೆಗೆ ಸಲಹೆ



ನಂಜನಗೂಡು, ಜೂ.19(ಸುದರ್ಶನ್)– ಗ್ರಾಮೀಣ ಭಾಗದ ವಿದ್ಯುತ್ ಸಮಸ್ಯೆ ಪರಿಹರಿಸಲು ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ದೇವರಾಜಯ್ಯ ತಿಳಿಸಿದರು.

ತಾಲೂಕಿನ ತರದೆಲೆ ಗ್ರಾಮದಲ್ಲಿ ಚೆಸ್ಕಾಂನಿಂದ ಏರ್ಪಡಿಸಿದ್ದ ವಿದ್ಯುತ್ ಅದಾಲತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತರದೆಲೆ ಭಾಗದಲ್ಲಿ ವಿದ್ಯುತ್ ತಂತಿ ಜೋತು ಬಿದ್ದಿರುವುದು, ಹೆಚ್ಚಿನ ವಿದ್ಯುತ್ ಬಿಲ್ ಬಂದಿರುವುದು, ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ ಸೇರಿದಂತೆ 12 ದೂರುಗಳು ಬಂದಿವೆ. ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಗಿದೆ. ದೂರುಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದು. ವಿದ್ಯುತ್ ತಂತಿ ಜೋತು ಬಿದ್ದಿರುವುದನ್ನು ಸರಿಪಡಿಸಲು ಕ್ರಮವಹಿಸಲಾಗುವುದು. ಜೊತೆಗೆ ಅಗತ್ಯವಿದ್ದ ಕಡೆ ಹೆಚ್ಚುವರಿ ಕಂಬಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಎಂದರು.

ಬೆಳಕು ಯೋಜನೆಯಡಿ ಉಚಿತ ಸಂಪರ್ಕ ಕಲ್ಪಿಸುವಂತೆ 6 ಅರ್ಜಿಗಳು ಬಂದಿವೆ. ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಗ್ರಾಪಂನವರು ಪಟ್ಟಿ ನೀಡಿದಲ್ಲಿ ಅವರಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.

ಹುಣಸನಾಳು ಗ್ರಾಮದ ಮಹದೇವಸ್ವಾಮಿ ಮಾತನಾಡಿ, ಕೆಲ ದಿನಗಳ ಹಿಂದೆ ಏರ್‌ಟೆಲ್ ಟವರ್ ಬಳಿ ವಿದ್ಯುತ್ ಶಾಕ್ ನಿಂದ ಹಸು ಮೃತಪಟ್ಟಿತು. ಆದರೆ ಇದುವರೆಗೂ ನಮಗೆ ಯಾವುದೇ ಪರಿಹಾರ ಬಂದಿಲ್ಲ ಎಂದು ದೂರಿದರು. ಖಾಸಗಿ ಏರ್‌ಟೆಲ್ ಟವರ್‌ನವರ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆ. ಇದು ಚೆಸ್ಕಾಂ ವ್ಯಾಪ್ತಿಗೆ ಬರುವುದಿಲ್ಲ. ಏರ್‌ಟೆಲ್ ಕಂಪನಿ ಪರಿಹಾರ ನೀಡಬೇಕು. ಈ ಬಗ್ಗೆ ಅವರಿಗೆ ನೀಡಲಾಗಿರುವ ವಿದ್ಯುತ್ ಸಂಪರ್ಕ ಕಟ್ ಮಾಡುವ ಮೂಲಕ ಪರಿಹಾರ ಒದಗಿಸುವ ಭರವಸೆ ನೀಡಿದರು.

ಇದೇ ವೇಳೆ ಜೆಇಗಳಾದ ಹೇಮಲತಾ, ರಂಗಸ್ವಾಮಿ, ನಾರಾಯಣಮೂರ್ತಿ, ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ, ಉಪಾಧ್ಯಕ್ಷರಾದ ಗುರುಪ್ರಸಾದ್, ಮುಖಂಡರಾದ ಗಜೇಂದ್ರ ಮಹೇಶ್, ಮಂಜುನಾಥ್ ಸೇರಿದಂತೆ ಇತರರಿದ್ದರು.

ಡ್ರೈವರ್ ಶ್ರೀಧರ್ ನಿಧನ



ನಂಜನಗೂಡು, ಜೂ.19– ಪಟ್ಟಣದ 3ನೇ ಕ್ರಾಸ್ ನಿವಾಸಿ ಡ್ರೈವರ್ ಶ್ರೀಧರ್ (ಗುಂಡಣ್ಣ 50) ಶುಕ್ರವಾರ ರಾತ್ರಿ ತಮಿಳುನಾಡಿನ ಸೇಲಂನಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಪಟ್ಟಣದ ಲಿಂಗಭಟ್ಟರ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಮೈಸೂರಿನ ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯಿಂದ ಶನಿವಾರ ಕಂಪಲಾಪುರದ ಶ್ರೀ ಕ್ಲಿನಿಕ್‌ನಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ನೆರವೇರಿತು. ಡಾ.ಹರ್ಷ, ಡಾ.ವಿಭೂಷಣ್, ಡಾ.ರಜಿತಾ, ಗ್ರಾಪಂ ಸದಸ್ಯ ಶ್ರೀಪತಿ, ನರ್ಸ್ ಶ್ವೇತಾ ಹಾಜರಿದ್ದರು. 60 ಮಂದಿಗೆ ಕಣ್ಣಿನ ತಪಾಸಣೆ ಮಾಡಲಾಯಿತು.

ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಕ್ರಮ

ಮಲ್ಕುಂಡಿ, ಜೂ.19(ಚನ್ನಪ್ಪ)– ಗ್ರಾಮೀಣ ಪ್ರದೇಶದಲ್ಲಿನ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ 3ನೇ ಶನಿವಾರ ವಿದ್ಯುತ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ನೀಡಿದ ದೂರುಗಳನ್ನು ಆದ್ಯತೆ ಮೇಲೆ ಪರಿಹರಿಸಲಾಗುವುದು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್ ಹೇಳಿದರು.

ಸಮೀಪದ ಇಂದಾರ ನಗರ ಗ್ರಾಮದಲ್ಲಿ ಚೆಸ್ಕಾಂ ಇಲಾಖೆಯಿಂದ ಆಯೋಜಿಸಿದ ವಿದ್ಯುತ್ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಭಾಗದಲ್ಲಿ ವಿದ್ಯುತ್ ಸಮಸ್ಯೆ ಇದರೆ ಸಾರ್ವಜನಿಕರು ಮಾಹಿತಿ ನೀಡಿ ಕೆಲವು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಗಣಿಸಲಾಗುವುದು. ಹೆಚ್ಚಿನ ಸಮಸ್ಯೆ ಇದ್ದರೆ ಹಂತ ಹಂತವಾಗಿ ಬಗ್ಗೆಹರಿಸಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹುರ ವಲಯದ ಇಂಜಿನಿಯರ್ ನಾಗರಾಜು ಸೇರಿದಂತೆ ಅಕ್ಕ ಪಕ್ಕದ ಗ್ರಾಮಸ್ಥರು ಹಾಜರಿದ್ದರು.




International day of yoga
Yoga for Harmony & Peace
ಮೈಸೂರಿನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಯೋಗ
ದಿನಾಚರಣೆಯಲ್ಲಿ ಭಾಗವಹಿಸಲು
ಸಾಂಸ್ಕೃತಿಕ ಐತಿಹಾಸಿಕ ನಗರಿ ಮೈಸೂರಿಗೆ
ವಿಶ್ವದ ಹೆಮ್ಮೆಯ ಪ್ರಧಾನಮಂತ್ರಿಗಳಾದ
ಸನ್ಮಾನ್ಯ ಶ್ರೀ
ನರೇಂದ್ರ ಮೋದಿಜೀರವರಿಗೆ
ಹೃತ್ಪೂರ್ವಕ ಸುಸ್ವಾಗತ
ಶುಭಕೋರುವವರು :
ಎಲ್.ಆರ್. ಮಹದೇವಸ್ವಾಮಿ ಎಂ.ಬಿ.ಎ
ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ,
ಕರ್ನಾಟಕ ಸರ್ಕಾರ